ದೃಶ್ಯ – 1

ಸ್ವಾತಂತ್ರ್ಯ (ಹಿನ್ನೆಲೆ ಧ್ವನಿ)

ಬಂದಿತು ಸ್ವಾತಂತ್ರ್ಯ
ದಾಸತ್ವದ ವಿಮುಕ್ತಿಯ ಸುದಿನ
ವೀರಯೋಧರು ರಕ್ತತರ್ಪಣಗೈದು
ಶಾಂತಿ ಮಂತ್ರ ಪಠಿಸಿ
ಪಣ ತೊಟ್ಟು–ಕೊಟ್ಟು ಗಳಿಸಿದ ಸ್ವಾತಂತ್ರ್ಯ
ಅಭಿಮಾನ ಸ್ವಾಭಿಮಾನ
ಎರಡು ಶತಮಾನ
ಪರಕೀಯರಿಗೆ ಬಿಟ್ಟು–ಕೊಟ್ಟು
ಬಳಲಿ ಬೇಸತ್ತು ಬೆಂಡಾಗಿ
ದೇಹ ತುಂಡಾಗಿ

ಕೆಚ್ಚೆದೆಯಿಂದ ಬಿಡುಗಡೆಯ
ಕಾಡ್ಗಿಚ್ಚು ಹಚ್ಚಿ–ಚುಚ್ಚಿ–ಕೊಚ್ಚಿ
ಪರಂಗಿಯರನ್ನು ಪಲಾಯನ
ಮಾಡುವಂತೆ ಮಾಡಿ
ಗುಲಾಮತೆಯಿಂದ ಸಮಾನತೆ ತೋರಿ
ಹರಿದು ಹಂಚಿ ಹೋದ ರಾಜ್ಯಗಳ
ಭೂಪಟಕ್ಕೆ ಸೇರಿಸಿ
ಹರ್ಷದ ಹೊನಲನ್ನು ಹರಿಸಿ
ಗಾಂಧಿ ತಂದು ಕೊಟ್ಟ
ದಿವ್ಯ ಸ್ವಾತಂತ್ರ್ಯ

ಹಿನ್ನೆಲೆ ಧ್ವನಿ ಹಾಡಿನ ರೂಪದಲ್ಲಿ......

ಒಂದು ಊರು. ಆ ಊರಿನ ಹೆಸರು ನಗುವಿನಹಳ್ಳಿ. ಅದೊಂದು ಕುಗ್ರಾಮ. ಆ ಊರಿನಲ್ಲಿ ಮುಖ್ಯವಾಗಿ ಬೇಕಾದ ರಸ್ತೆ,

Scanned with OKEN Scanner

ಕುಡಿಯುವ ನೀರು, ವಿದ್ಯುತ್ ಸೌಲಭ್ಯಗಳ ಕೊರತೆ ಎದ್ದು ಕಾಣುತ್ತದೆ. ಮುಂದುವರೆದ ಹಳ್ಳಿಗಳಿಗೆ ಹೋಲಿಸಿದರೆ ಈ ಊರು ತೀರಾ ಹಿಂದೆ. ಈ ಊರಿನ ಕಡೆ ಯಾವ ಅಧಿಕಾರಿಗಳು ತಿರುಗಿ ನೋಡಿಲ್ಲ. ಬಸ್ಸಿನ ವ್ಯವಸ್ಥೆಯಂತು ಮೊದಲೇ ಇಲ್ಲಾ. ಅಕ್ಕ ಪಕ್ಕದ ಹಳ್ಳಿಗಳಲ್ಲಿರುವ ಮೂಲಭೂತ ಸೌಲಭ್ಯಗಳು ಅತೀ ವಿರಳವಾಗಿದೆ. ಈ ಊರಲ್ಲಿ...

ಇಲ್ಲಿ ಮಧ್ಯಪಾನ ನಿಷೇಧವಾಗಿರುವುದರಿಂದ ಹಳ್ಳಿಯ ಜನ ಇದ್ದುದರಲ್ಲಿಯೇ ಸುಖವಾಗಿ ನೆಮ್ಮದಿಯಾಗಿ ಜೀವನ ಮಾಡುತ್ತಿರುತ್ತಾರೆ. ಇವರೆಲ್ಲರೂ ಕೃಷಿಕರಾಗಿದ್ದು ಮೈ ಬೆವರಿಳಿಸಿ ದುಡಿದು ತಿನ್ನುತ್ತಾ ಪರಸ್ಪರ ಸಹಾಯ ಹಾಗೂ ಕಷ್ಟದೊಳಗೆ ಕೈಜೋಡಿಸಿ ಸಹೋದರರಂತೆ ಬಾಳುತ್ತಾ ನಗು ಕಾಣುತ್ತಿರುತ್ತಾರೆ.

ಗಾಂಧೀಜಿಯವರು ಮದ್ಯಪಾನ ವಿರೋಧಿಯಾಗಿದ್ದರು...

ಗಾಂಧೀಜಿಯವರ ತತ್ವವನ್ನು ಗ್ರಾಮದ ಜನರು ಅಳವಡಿಸಿಕೊಂಡು ಅದನ್ನು ದಶಕಗಳ ಕಾಲದಿಂದ ಅನುಸರಿಸುತ್ತಾ ಬಂದಿದ್ದರು.

ಇವೆಲ್ಲದರ ನಡುವೆ ಮೂರು ಮುಗ್ಧ ಎಳೆಯ ಮನಸ್ಸುಗಳ ಮೇಲೆ ರಾಷ್ಟ್ರಪಿತನ ತತ್ವ ಆದರ್ಶಗಳು ಭಾರೀ ಆಕರ್ಷಣೆ (ಪ್ರಭಾವ) ಬೀರುತ್ತದೆ. ಹೀಗಿರುವಾಗಲೀ ಈ ಊರಿನಲ್ಲಿ ಮುಗ್ಧ ಮನಸ್ಸುಗಳನ್ನು ಸೆಳೆಯುವ ದುಷ್ಟ ಚಟಗಳು ಎಂತಹ ಘೋರ ಅನ್ನುವುದರ ಅಸಲಿ ಕತೆ ಪ್ರಾರಂಭವಾಗುತ್ತದೆ.

ದೃಶ್ಯ – 2

ಶಾಲೆ

‘ರಘುಪತಿ ರಾಘವ ರಾಜಾರಾಮ್ ಪತಿತ ಪಾವನ ಸೀತಾರಾಮ್’ ಗೀತೆ ಗಾಯನ ಮಕ್ಕಳಿಂದ (ಮ್ಯೂಸಿಕ್) ಹಿನ್ನೆಲೆ ಸಂಗೀತ.

ಶಾಲೆಯ ಒಳಗಡೆ ದೃಶ್ಯ :

ಆರನೇ ತರಗತಿ ಪಾಠಶಾಲೆ. ಉಮೇಶ್ ಮೇಷ್ಟ್ರು ತರಗತಿಗೆ ಎಂಟ್ರಿ ಕೊಟ್ಟು ಕಪ್ಪು ಹಲಿಗೆ (ಬೋರ್ಡ್) ಮೇಲೆ ಮೂರು ಕೋತಿಗಳ ಭಾವಚಿತ್ರ ಬರೆಯುತ್ತಾರೆ.

ನಾಟಕದ ನಾಯಕರುಗಳಾದ ಮೂರು ಮಕ್ಕಳು (1) ಧರಣೀಶ (2) ವೇದಾಂತ (3) ಹರಿ

Scanned with OKEN Scanner

ಸಹಪಾಠಿಗಳೊಂದಿಗೆ ಪಾಠ ಕೇಳುತ್ತಾ ಕುಳಿತಿರುತ್ತಾರೆ.

ಮೇಷ್ಟ್ರ : ನೋಡಿ ಮಕ್ಕಳೇ ಈ ಮಂಗಗಳ ಸಂಕೇತ ಗೊತ್ತಿದೆಯಾ

ಕೆಲವು ಮಕ್ಕಳು : ಗೊತ್ತಿಲ್ಲ ಸಾರ್...

(ಮೊದಲನೇ ಬೆಂಚಿನಲ್ಲಿ ಕುಳಿತಿದ್ದ)

1) ಧರಣೀಶ

2) ವೇದಾಂತ

3) ಹರಿ : ನಮಗೆ ಗೊತ್ತು ಸಾರ್

ಮೇಷ್ಟ್ರ : ಹೌದಾ ಮಕ್ಕಳೇ... ಹಾಗಾದರೆ ಈ ಮೂರು ಮಂಗಗಳ ಅರ್ಥವೇನು ತಿಳಿಸಿ

ಧರಣೀಶ : (ಕಣ್ಣು ಮುಚ್ಚಿರುವ ಮಂಗನ ಬಗ್ಗೆ) ಮೊದಲನೆಯ ಮಂಗನ ಅರ್ಥ 'ಕೆಟ್ಟದ್ದನ್ನು ನೋಡಬಾರದು' ಸಾರ್

ವೇದಾಂತ : (ಕಿವಿ ಮುಚ್ಚಿರುವ ಮಂಗನ ಕುರಿತು) ಎರಡನೆಯ ಮಂಗನ ಅರ್ಥ 'ಕೆಟ್ಟದ್ದನ್ನು ಕೇಳಬಾರದು' ಮೇಷ್ಟ್ರೇ...

ಹರಿ : (ಬಾಯಿ ಮುಚ್ಚಿರುವ ಮಂಗನ ಕುರಿತು) ಮೂರನೆಯ ಮಂಗನ ಅರ್ಥ 'ಕೆಟ್ಟದ್ದನ್ನು ಮಾತಾಡಬಾರದು' ಎಂದು ಮೇಷ್ಟ್ರೇ...

ಉಮೇಶ : ಶಹಬ್ಬಾಶ್ ಮಕ್ಕಳೇ... ಇಷ್ಟೆಲ್ಲಾ ತಿಳ್ಕೊಂಡಿದ್ದೀರಾ ತುಂಬಾ ಸಂತೋಷ. ನೋಡಿ ಮಕ್ಕಳೇ ನೀವು ಸಹ ನಮ್ಮ ಧರಣೇಶ, ವೇದಾಂತ, ಹರಿ ತರ ಬುದ್ಧಿವಂತರಾಗಬೇಕು ಗೊತ್ತಾಯ್ತಾ... ನೀವು ಜಾಣರಾಗಿದ್ದೀರಿ ಮುಂದೆ ನೀವು ನಿಮಗೆ ಗೊತ್ತಿರುವುದನ್ನು ಹೇಳಿ ನನ್ನಿಂದ ಶಹಬ್ಬಾಸ್‌ಗಿರಿ ಪಡೆಯಿರಿ ಗೊತ್ತಾಯ್ತಾ ಮಕ್ಕಾ? ಧರಣೇಶ, ವೇದಾಂತ, ಹರಿ... ಇದನ್ನೆಲ್ಲಾ ಯಾರು ತಿಳಿಸಿಕೊಟ್ರು ?

ಧರಣೇಶ : (ಎದ್ದುನಿಂತು) ನಮ್ಮ ಅಮ್ಮ ಹೇಳಿ ಕೊಟ್ರು ಮೇಷ್ಟ್ರೇ...

ಮೇಷ್ಟ್ರು : ಹೌದು ಮಕ್ಳೆ... ಮನೆಯೇ ಮೊದಲ ಪಾಠಶಾಲೆ. ತಾಯಿಯೇ ಮೊದಲ ಗುರು ಅಂತಾರೆ.

ಅಮ್ಮ

ಅಮ್ಮ ನಿನ್ನ ಆಲೋಚನೆ
ದಿಕ್ಕೆಟ್ಟರೇ ದಿಗಂತವೆ
ದಿಕ್ಕು ತಪ್ಪಿ ಸ್ತಬ್ದವಾಗಿವೆ
ಮೂಕ ವಿಸ್ಮಿತವಾಗಿದೆ

ಕಂಗೆಟ್ಟ ಭಾವ ಪ್ರಕೃತಿಯ
ವಿಸ್ಮಯಕ್ಕೆ ಪ್ರಶ್ನಾರ್ಥವಾಗಿದೆ
ಇಳೆಯಲ್ಲಿ ಇಳಿಮುಖವಾದ ಜೀವಕ್ಕೆ
ಮಹಾಸಾಗರಗಳೆ ಬರಿದಾದಂತೆ
ಭಾಸವಾಗುತ್ತಿವೆ ಉಲ್ಕೆಗಳು
ಉಸಿರುಗಟ್ಟಿದಂತೆ
ಜ್ವಾಲಾಮುಖಿಗಳ ಆಕರ್ಷಣೆಗಳೇ
ಅರ್ಥಹೀನವಾದವೇ.....!
ಅಮ್ಮ ಊಹೆಗೂ ನಿಲುಕದ್ದು
ಕಲ್ಪನೆಗೂ ಸಿಲುಕದ್ದು
ನಿನ್ನ ನಿಷ್ಕಲ್ಮಷದ ಕಾಯಕದ ಪ್ರೀತಿ
ಮುಕ್ಕೋಟಿ ದೇವತೆಗಳಿಗಿಂತ
ಅಮ್ಮ ನೀನೇ ಈ ಜಗದೊಳು
ಸೃಷ್ಟಿಯೊಳು ಸರ್ವ ಶ್ರೇಷ್ಠಳು
ತಾಯಿಯೇ ಸರ್ವಸ್ವ, ತಾಯಿ ಸರ್ವಾಂತರ್ಯಾಮಿ

ಮೇಷ್ಟ್ರು : ಮಕ್ಕಳೇ ಗಾಂಧೀಜಿಯವರ ಹುಟ್ಟೂರು, ಜನನ, ಬೆಳವಣಿಗೆ, ವಿದ್ಯಾಭ್ಯಾಸ, ತಂದೆ, ತಾಯಿ, ಅವರ ಹೋರಾಟದ ಬದುಕು, ನೀವು ಇದೆಲ್ಲದರ ಬಗ್ಗೆ ಎಲ್ಲಾ ತಿಳಿದುಕೊಂಡಿದ್ದೀರಾ... ಈಗ ನಿಮಗೆ ಒಂದು ಪ್ರಶ್ನೆ ಕೇಳ್ತೀನಿ. ಕರ್ನಾಟಕದಲ್ಲಿ ಗಾಂಧೀಜಿಯವರ ಚಿತಾಭಸ್ಮ ಎಲ್ಲಿದೆ ?

(ಯಾವ ಮಕ್ಕಳು ಹೇಳುವುದಿಲ್ಲ)

ಮೇಷ್ಟ್ರು : ನಾಳೆ ತಿಳಿದುಕೊಂಡು ಬಂದು ಹೇಳಿ... ಯಾರಿಗೂ ಗೊತ್ತಾಗದಿದ್ದರೆ ನಾನೇ ಹೇಳ್ತೀನಿ ಮಕ್ಕಳೇ...

(ಗಂಟೆ ಹೊಡೆಯುತ್ತೆ)

ಎಲ್ಲಾ ಮಕ್ಕಳು : ಓ...ಓ...ಓ........

(ಅಂತ ಖುಷಿಯಾಗಿ ಬ್ಯಾಗು ಎತ್ತಿಕೊಂಡು ಓಡ್ತಾರೆ)

ಮಾತಿಗಿಂತ
ನಮ್ಮ
ಜೀವನ ಕ್ರಮವೇ
ಮಾತನಾಡುವಂತೆ
ನಡೆದುಕೊಳ್ಳುವುದು
ಉತ್ತಮ ಆದರ್ಶ



Scanned with OKEN Scanner

ದೃಶ್ಯ – 3

(ಧರಣೀಶನ ಮನೆ)

(ಧರಣೀಶನ ಮನೆ ಹೆಂಚಿನ ಮನೆ, ಅಮ್ಮ ಅಡಿಗೆ ಮನೆಯಲ್ಲಿ ಪಾತ್ರೆ ತೊಳೆಯುತ್ತಿರುತ್ತಾಳೆ. ಧರಣೀಶ ಓಡಿ ಬಂದು ತನ್ನ ಅಮ್ಮನಿಗೆ ಹೇಳ್ತಾನೆ.)

ಧರಣೀಶ : ಅಮ್ಮ... ಅಮ್ಮಾ... ಮೇಷ್ಟ್ರು ಗಾಂಧೀಜಿಯವರ ಬಗ್ಗೆ ಪ್ರಶ್ನೆ ಕೇಳಿದರು. ಅದಕ್ಕೆಲ್ಲಾ ನಾನು ಉತ್ತರ ಕೊಟ್ಟೆ. ಆದರೆ ಮತ್ತೊಂದು ಪ್ರಶ್ನೆಗೆ ಉತ್ತರ ಕೊಡಲಾಗಲಿಲ್ಲ.

ಸರೋಜ : ನಿಮ್ಮ ಮೇಷ್ಟ್ರು ಯಾವ ಪ್ರಶ್ನೆ ಕೇಳಿದ್ರಪ್ಪ ?

ಧರಣೀಶ : ಅದೇ ಅಮ್ಮಾ... ಗಾಂಧೀಜಿಯವರ ಚಿತಾಭಸ್ಮ ಎಲ್ಲಿದೆ ಅಂತ ಕೇಳಿದ್ರು. ಅಮ್ಮಾ ವೇದಾಂತ, ಹರಿಗೂ ಗೊತ್ತಾಗಲಿಲ್ಲಮ್ಮ... ನಿನಗೇನಾದರೂ ಗೊತ್ತೇನಮ್ಮ ?

ಸರೋಜ : ನನಗೂ ಗೊತ್ತಿಲ್ಲ ಮಗನೆ...

ಧರಣೀಶ : ಹೋಗ್ಲಿ ಬಿಡಮ್ಮ ಮೇಷ್ಟ್ರು ಹೇಳ್ತಾರಂತೆ ಹೊಟ್ಟೆ ಹಸಿಯುತ್ತಿದೆ ಮುದ್ದೆ ಹಾಕಮ್ಮ

(ತಾಯಿ ಧರಣೀಶನನ್ನು ನೆಲದ ಮೇಲೆ ಕೂರಿಸಿ ಅಡುಗೆ ಮನೆಗೆ ಹೋಗಿ ತಟ್ಟೆಯಲ್ಲಿ ಮುದ್ದೆ ಸಾರು ಹಾಕ್ಕೊಂಡು ಬರ್ತ್ತಾಳೆ.)

(ಧರಣೀಶನ ಅಪ್ಪ ಜನಾರ್ಧನ ಎಂಟ್ರಿ ಕೊಟ್ಟು ಹೆಂಡತಿಗೆ ಹೇಳುತ್ತಾ)

ಜನಾರ್ಧನ : ಮುದ್ದೆ ಹಾಕಿ ಸಾನೆ ಮುದ್ದಾಡಬೇಡ. ಮುಂಡೇವು ಹಾಳಾಗಿ ಹೋಗ್ತವೆ. ಮದ್ವೆ ಆಗಿ ಇಷ್ಟು ದಿವ್ಸ ಆದ್ರೂ ಇಷ್ಟು ದಿನದಲ್ಲಿ ಈ ರೀತಿ ಆರೈಕೆ ಮಾಡಿದ್ದೀಯಾ ... ಓಹೋ... ನಿನ್ ಮಗನ್ ನೋಡು, ಏನ್ ಮುದ್ದಾಡ್ತೀಯಾ ಹೋಗ್ ಹೋಗು ಮುದ್ದೆ ತಾಂಬಾ...

(ಧರಣೀಶ ಊಟ ಮಾಡಿ ಕೈ ತೊಳೆದು)

ಧರಣೀಶ : ಆಟ ಆಡಲು ಹೋಗ್ತೀನಿ.

(ಎಂದು ಅವ್ವನಿಗೆ ಹೇಳಿ ಹೋಗ್ತಾನೆ)

ಸರೋಜ : *(ಗಂಡನಿಗೆ)* ಯಾಕ್ರೀ ಒಂಥರಾ ಇದ್ದೀರಾ ...?

ಜನಾರ್ಧನ : ನಿನಗೂ ಎಲ್ಲಾ ಗೊತ್ತಲ್ಲೇ... ಅದನ್ನ ಏನ್ ಕೇಳ್ತೀಯಾ ? ಮುಂಗಾರು ಮಳೆ ಅನ್ನುವುದು ಬರೋ ಕಾಲಕ್ಕೆ ಬರಲ್ಲ. ಬೀಜ ಬಿತ್ತೋ ಕಾಲಕ್ಕೆ ಬಿತ್ತದಿದ್ದರೆ ಅದು ಸರಿಯಾಗಿ ಮೊಳಕೆಯಾಗಲ್ಲ. ಆ ಬೀಜವೋ ಕಳಪೆ... ಹೇಗೋ ಬೀಜ ಬಿತ್ತಿ ಮೊಳಕೆಯೊಡೆದು ಅದು ಚಿಗುರುವಾಗ ಮತ್ತೆ ಮಳೆ ಕೈ ಕೊಡುತ್ತೆ. ಇನ್ನು ರಸಗೊಬ್ಬರದಲ್ಲಿ ಸಾರವೇ ಇಲ್ಲಾ.

Scanned with OKEN Scanner

ಔಷಧಿ ಬೆಲೆ ಗಗನಕ್ಕಿದೆ. ಎಲ್ಲಾ ಸರಿಯಾಯ್ತು ಅನ್ನುವಾಗ ಆಳುಗಳ ಕೊರತೆ ಅದು ಕಟಾವು ಮಾಡಿ ಸಂಗ್ರಹಿಸುವಾಗ ಮತ್ತೆ ಮಳೆ...(ಕೋಪಗೊಂಡು) ಇದೆಲ್ಲಾ ಗೊತ್ತಿದ್ರು ಉಣ್ಣಲು ಕೂತಾಗ... ಹುಣ್ಣು ಕೆರೆಯುವ ಕೆಲಸ ಮಾಡ್ತೀಯಲ್ಲೇ ಸರೂ... ನೆಮ್ಮದಿಯಾಗಿ ಊಟ ಮಾಡಲಿಕ್ಕಾದರೂ ಬಿಡು.

ಶುದ್ಧಿಯಿಲ್ಲದ
ಮನಸ್ಸು
ಅಶುದ್ಧವಾದ
ದೇಹಕ್ಕಿಂದ
ಹೆಚ್ಚು
ಭಯಾನಕ



ದೃಶ್ಯ –4

(ವೇದಾಂತನ ಮನೆ)

(ವೇದಾಂತನ ಮನೆ. ಅದು ಹೆಂಚಿನ ಮನೆ. ಓದುತ್ತಾ ಕೂತಿರುತ್ತಾನೆ. ವೇದಾಂತನ ತಂದೆ (ಕೃಷ್ಣ) ಮನೆಯ ಕಂಬ ಒರಗಿ ಕೂತಿರುತ್ತಾನೆ. ಹೆಂಡ್ತಿಗೆ ಲಕ್ಷ್ಮಿ ಹೇಳ್ತಾನೆ .)

ಕಿಟ್ಟಿ : ಲಕ್ಷ್ಮಿ ಸ್ವಲ್ಪ ಕುಡಿಯಲು ನೀರು ಕೊಡೆ

(ಮಗ ಓದುತ್ತಾ ಕೂತಿರುವುದನ್ನು ನೋಡಿ ರೇಗುತ್ತಾ)

ಕಿಟ್ಟಿ : (ವ್ಯಂಗ್ಯವಾಗಿ) ಓದಿ ನೀನೇನು ಡ್ಯಾಮ್ ಕಟ್ತೀಯೇನೋ... ಸಂವಿಧಾನ ಬರೆಯುತ್ತೀಯೇನೋ... ಅಥವಾ ನಟ ಆಗ್ತೀಯೇನೋ ...

ವೇದಾಂತ : ದಿನಾಂಕ: 15–09–1861 ರಂದು ನನ್ನಂತೆ ಚಿಕ್ಕಬಳ್ಳಾಪುರದ ಮುದ್ದೇನಹಳ್ಳಿಯ ಕುಗ್ರಾಮದಲ್ಲಿ ಹುಟ್ಟಿ ಬೀದಿ ದೀಪದ ಬೆಳಕಲ್ಲಿ ಓದಿದ ಸರ್ ಎಂ. ವಿಶ್ವೇಶ್ವರಯ್ಯ ಅವರು ಮಂಡ್ಯ ಜಿಲ್ಲೆಯಲ್ಲಿ ಕನ್ನಂಬಾಡಿ ಕಟ್ಟಿ ಲಕ್ಷಾಂತರ ರೈತರಿಗೆ ಬದುಕಿನ ದಾರಿದೀಪವಾದರು,

ಇಡೀ ಮೈಸೂರು ನಗರಕ್ಕೆ ಕುಡಿಯುವ ನೀರು ಒದಗಿಸಿದರು. ಎಷ್ಟೋ ಜನರ ಧಣಿವಾರಿಸಿದರು. ಹೆಚ್ಚು ಓದಿ ಅಪಾರ ಜ್ಞಾನ ಸಂಪಾದಿಸಿದ ಸಣ್ಣಕತೆಗಳ ಜನಕ, ಕನ್ನಡ ಆಸ್ತಿ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರಿಂದ ಕನ್ನಡಕ್ಕೆ ಜ್ಞಾನ ಪ್ರಶಸ್ತಿ ಲಭಿಸಲಿಲ್ಲವೇ... ಬಾಲ್ಯದಿಂದಲೇ ಸಮಾಜದಿಂದ ದೂಷಿಸಲ್ಪಟ್ಟರೂ ಮಾನಸಿಕ ಖಿನ್ನತೆಗೊಳಗಾಗದೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಬದುಕಿನಲ್ಲಿ ನೊಂದರೂ ಸಹ ನಮ್ಮ ದೇಶದ ಸಂವಿಧಾನ ಶಿಲ್ಪಿಯಾಗಲಿಲ್ಲವೇ ?. ನಾಲ್ಕನೇ ಕ್ಲಾಸು ಓದಿ ಸಭ್ಯ ನಟನಾಗಿ ಗಾನ ಕೋಗಿಲೆಯಾಗಿ ನಟಸಾರ್ವಭೌಮನಾಗಿ ಕರ್ನಾಟಕದ ರತ್ನ ಎನಿಸಿಕೊಂಡ ಮೈಸೂರು ವಿಶ್ವವಿದ್ಯಾನಿಲಯ ದಿಂದ ಗೌರವ ಡಾಕ್ಟರೇಟ್ ಪಡೆದು ಕರ್ನಾಟಕದ ಕನ್ನಡ ಕಳಸಪ್ರಾಯವಾದ ಆದರ್ಶವಾದ ಕರ್ನಾಟಕದ ಸಾಂಸ್ಕೃತಿಕ ರಾಯಭಾರಿ ಡಾ. ರಾಜ್‌ಕುಮಾರ್‌ರಂತೆ ನಾವ್ಯಾಕಪ್ಪ ಆಗಬಾರದು.

ಕೃಷ್ಣ (ಕಿಟ್ಟಿ) : ಹೆಸರಿಗೆ ತಕ್ಕಂತೆ ವೇದಾಂತದ ಮಾತಾಡೋದು ಬಿಟ್ಟು ದನ–ಕುರಿ ಕಾಯೋಕೆ ನಡೆಯೋಲೇ..... ಹೀಗೆ ವೇದಾಂತದ ಮಾತಾಡ್ತಿದ್ರೆ ಹೊಟ್ಟೆ ತುಂಬಲ್ಲಾ ಮಗನೆ.

(ಹರಿ ಮನೆ)

(ಹರಿ ಮನೆ. ಈತನದೂ ಹೆಂಚಿನ ಮನೆ. ಹರಿ ಅಮ್ಮನಿಗೆ)

ಹರಿ : ಅಮ್ಮಾ...ಅಮ್ಮಾ... ಮೇಷ್ಟ್ರು ಹೇಳಿದ್ರು ರಾಮಾಯಣ–ಮಹಾಭಾರತ– ಭಗವದ್ಗೀತೆ ಪುಸ್ತಕ ತೊಗೊಳ್ಳಿ ಅದನ್ನು ಓದಿ ಅಲ್ಲಿ ಬರುವ ಪ್ರೀತಿ, ಸ್ನೇಹ ಬಾಂಧವ್ಯ, ತ್ಯಾಗ, ಪಿತೃವಾಕ್ಯ

ಪರಿಪಾಲನೆ ಇದೆಲ್ಲಾ ಇರುತ್ತಂತೆ. ಪೇಟೆಗೆ ಹೋದಾಗ ತಗೊಂಡು ಬಾರಮ್ಮ...

ಶಾಂತಮ್ಮ : ನನ್ನತ್ರ ಹಣ ಇಲ್ಲಪ್ಪ. ನಿಮ್ಮಪ್ಪನ ಹತ್ರ ಹೋಗಿ ಕೇಳು.

ಸುಬ್ಬಯ್ಯ : ಪುಸ್ತಕದ ಬದನೆಕಾಯಿ ಬಿಟ್ಟು ಭೂತಾಯಿಯ ನಂಬು. 'ಜ್ಞಾನ' ಊಟ ಕೊಡುತ್ತೇನ್ಲಾ. ನಮ್ಮ ಹಿರಿಯರು ಹೇಳ್ಳಿಲ್ವಾ. ಕೈ ಕೆಸರಾದರೆ ಬಾಯಿ ಮೊಸರು ಅಂತ... ಸುಮ್ನೆ ಮುಚ್ಕೊಂಡ್ ಹೋಗ್ಲಾ. ಪುಸ್ತಕ ಅಂತೆ ಪುಸ್ತಕ... ನಿಮ್ಮಮ್ಮ ಏನಾನಾ ಬೇಸವಳೆನೋ ಉಣ್ಣೋಗು ಬಂದ್‌ಬಿಟ್ಟ ಇಲ್ಲಿ.

(ಎಂದು ಬೀಡಿ ಹಚ್ಚುತ್ತಾನೆ. ಹರಿ ಪೆಚ್ಚು ಮೋರೆ ಹಾಕಿ ಹೊರಡುವನು.)

ಅಹಿಂಸೆಯೇ
ಒಂದು
ಶ್ರೇಷ್ಠ
ಧರ್ಮ



ದೃಶ್ಯ – 5

(ಅರಳಿ ಕಟ್ಟೆ)

(ಬೆಳಗಿನ ಸಮಯ. ಜನಾರ್ಧನ್, ಕೃಷ್ಣ, ಸುಬ್ಬಯ್ಯ ಜೊತೆಗೆ ಇನ್ನೂ ಕೆಲವರು (ಊರಿನ ಹೈಕ್ಳು) ಹರಟೆ ಹೊಡೆಯುತ್ತಾ ಕೂತಿರ್ತಾನೆ. ಒಬ್ಬ ಬೀಡಿ ಹಚ್ಚಿರ್ತಾನೆ. ಎಲೆ ಅಡಿಕೆ ತಿಂತಿರ್ತಾನೆ)

(ದಾರಿಯಲ್ಲಿ ಒಬ್ಬ ಹೋಗುತ್ತಿರುವ ದೃಶ್ಯ. ಮೂವರಲ್ಲಿ ಒಬ್ಬ ಆತನನ್ನು ಕರೆಯುತ್ತಾ)

ಒಬ್ಬ : ಏನ್ಲಾ ನಿಂದು ಶ್ಯಾನೆ ಆಯ್ತುಂತೆಲ್ಲೋ ಊರಲ್ಲೆಲ್ಲಾ ಗುಲ್ಲೋ ಗುಲ್ಲು.

ದಾರಿ ಹೋಕಾ : ನಿಮಗೇನ್ರಪಾ ಮಾಡಕ್ಕೆ ಕೇಮೆ (ಕೆಲಸ) ಇಲ್ಲ. ದಾರೀಲಿ ಹೋಗೋರ್ ಬರೋರ್ ಕಿಂಡಲ್ ಮಾಡ್ಕೊಂಡು ಕೂತಿರ್ತೀರಾ ? ಸುಮ್ನೆ ಮುಚ್ಕಂಡ್ ಕೂತ್ಕಳಿ.

(ಅಂತ ಮುಖಕ್ಕೆ ಹೊಡೆದಂತೇಳಿ ಹೊರಡುವನು)

ಇನ್ನೊಬ್ಬ : ನಿನಗೆ ಬೇಕಾಗಿತ್ತಾ ಇದು

ಜನಾರ್ಧನ್ : ಅಲ್ನೋಡೋ ಮೂಲೆ ಮನೆ ಲಕ್ಷ್ಮಿ ಬರ್ತಾಳೆ. ಹಳೇ ದೋಸ್ತಿ ಅಲ್ವೇನೋ ಮಾತನಾಡ್ಸೋ...

ಕಿಟ್ಟಿ : ಯಪ್ಪಾ... ನಾನು ಅವಳ ಬಾಯಿಗೋಗಿ ಬದುಕೋರುಂಟೇನೋ... ಬಾಯಾ ಅದು, ಚೆನ್ನಾಗಿದ್ದಾಗ ಬೆಲ್ದಚ್ಚು, ಈಗ ಅದು ಕಲಗಚ್ಚು.

ಸುಬ್ಬಯ್ಯ : ನಾನ್ ಕರೆದು ಮಾತಾಡಿಸ್ತೀನಿ. ಎನ್ ಲಕ್ಷ್ಮೀ ನೀನು ಚೆನ್ನಾಗಿದ್ದೀಯಾ... ನಿಮ್ಮ ಹಳೇ ದೋಸ್ತಿ ಬೇರೆ ಇಲ್ಲೇ ಕುಂತವರೇ ಮಾತಾಡಲ್ವಾ ?

ವೈಯಾರಿ ಲಕ್ಷ್ಮಿ : ಹೆಂಡ್ರುದೀರು ಬೇಸಿ ಹಾಕ್ತಾರೆ. ಅರಳಿಮರದ ನೆರಳೈತಿ. ಮಾತಾಡೋಕ್ಕೆ ಬಾಯಿ ಐತೆ, ಮಳೆ ಕೈ ಕೊಟ್ಟೈತೆ, ಬಂದು ಇಲ್ಲಿ ಹೋಗೋರು ಬರೋರು ನೋಡ್ಕೊಂಡು ಇಂತ ಕೀಟಲೆ ಮಾಡ್ಕೊಂಡು ಕೂತಿರ್ತೀರಾ. ಸುಮ್ನೆ ಕೂತ್ಕೊಂಬೇಕು. ಇನ್ನೊಂದು ದಿನ ನನ್ನ ಸಹವಾಸಕ್ಕೆ ಬಂದ್ರೆ ನೋಡಿ ಈ ಬರ್ಲಲ್ಲಿ (ಪೊರಕೆ) ಮುಖ ಕೆತ್ತಿಬಿಡ್ತೀನಿ. ಥೂ ನಿಮ್ಮ ಮುಖಕ್ಕೆ.

ಒಬ್ಬ : ಇದೆಲ್ಲಾ ನಮಗೆ ಬೇಕಿತ್ತಾ... ಇರ್ಲಾರ್ದೋರು ಇರುವೆ ಬಿಟ್ಕೊಂಡಂಗಾಯ್ತು.

(ಅಂತ ತಮ್ಮ ತಮ್ಮೊಳಗೆ ಶಪಿಸಿಕೊಳ್ತಾರೆ. ನಿನ್ನಿಂದ ಅಂತ ಒಬ್ಬರಿಗೊಬ್ಬರು ಆರೋಪ ಮಾಡ್ಕೊಳ್ತಾರೆ. ಅದೇ ವೇಳೆ ಉಳಿದವರು ಒಬ್ಬೊಬ್ಬರೇ ಎದ್ದು ಹೋಗ್ತಾರೆ)

(ಅದೇ ದೃಶ್ಯದಲ್ಲಿ ಸುಬ್ಬಯ್ಯ, ಜನಾರ್ಧನ್, ಕೃಷ್ಣ ಕೂತಿರ್ತಾರೆ. ಸುಬ್ಬಯ್ಯ ಹತ್ತಿರ ಕೃಷ್ಣ ಒಂದು ಬೀಡಿ ಕೇಳ್ತಾನೆ)

ಜನಾರ್ಧನ್ : ನನಗೂ ಒಂದು ಕೊಡೊ ಯಾಕೊ ಶ್ಯಾನೆ ಬೇಜಾರಾಗೈತೆ.

ಕಿಟ್ಟಿ : ಯಾಕಪ್ಪ ಅಂತ...

ಜನಾರ್ಧನ್ : ನನ್ನ ಮಗ ಧರಣೇಶನ್ನ ಅವರಮ್ಮ ತಲೇ ಮೇಲೆ ಕೂರಿಸ್ಕೊಂಡು ಬೆಳಿಸ್ತಿದ್ದಾಳೆ. ಏನೇನೋ ಹೇಳ್ ಕೊಡ್ತಾಳೆ. ಅವನು ಶಾಲೆಯಿಂದ ಬಂದ ಅವರಮ್ಮನಿಗೆ ಎಲ್ಲಾ ಒಪ್ಪಿಸ್ತಾನೆ. ಅಮ್ಮ ಮಗ ಒಂದಾಗ್ತಾರೆ ಕಣ್ರೋ...

ಕಿಟ್ಟಿ : ಅಯ್ಯೋ ನಿಂದೇನೋ ಕತೆ... ನನ್ನ ಮಗ ವೇದಾಂತ ಮಾತಿಗೆ ಮುಂಚೆ ಯಾವ ಘಳಿಗೆಯಲ್ಲಿ ವೇದಾಂತ ಅಂತ ಹೆಸರಿಟ್ನೋ ಬರೀ ವೇದಾಂತವೇ ಮಾತಾಡ್ತಾನೆ. ನನಗೆ ತಿಳುವಳಿಕೆ ಹೇಳ್ತಾನೆ. ಅದ್ಯಾರೋರೋ ಮಹಾಪುರುಷರ ಬಗ್ಗೆ ಮಾತಾಡ್ತಾನೆ. ಅವರಂತೆ ನಾನಾಗಬೇಕು ಅಂತಾನೆ.

ಸುಬ್ಬಯ್ಯ : ನನ್ನ ಮಗನಿಗೆ ಪುಸ್ತಕ ಓದೋ ಚಟ ಹಚ್ಕೊಂಡವನೆ. ಅವರ ಮೇಷ್ಟ್ರು ಹೇಳವ್ರಂತೆ ರಾಮಾಯಣ–ಮಹಾಭಾರತ–ಭಗವದ್ಗೀತೆ ಓದಿ, ಅದರಲ್ಲಿ ಆದರ್ಶನೀಯ ಗುಣಗಳಿವೆ. ಅವು ಕಲ್ಕೊಂಡ್ರೆ ಆದರ್ಶಯುತವಾಗಿ ಬದುಕ್ಬೋದು ಅಂತ. ಅದಕ್ಕೆ ಪ್ಯಾಟಿಗೋದ್ರೆ ರಾಮಾಯಣ–ಮಹಾಭಾರತ–ಭಗವದ್ಗೀತೆ ತಂದ್‌ಕೊಡು ಅಂತಾನೆ. ನನಗೆ ಬೀಡಿ ಸೇದಕ್ಕೆ ಕಾಸಿಲ್ಲ. ಇವನಿಗೆ ರಾಮಾಯಣ ಅಂತೆ ನೋಡಪ್ಪಾ... ಯಾಕೋ ಇತ್ತೀಚೆಗೆ ನನ್ನ ಮನಸ್ಥಿತಿ ಹದಗೆಡ್ತಿದೆ.

(ಎಲ್ಲರೂ ಅದೇ ಕಟ್ಟೆಯಲ್ಲಿ ಕೂತಿರುವಾಗ ದೃಶ್ಯ ಬದಲಾಗುತ್ತದೆ)

ದೃಶ್ಯ – 6

(ರಾತ್ರಿ ವೇಳೆ ವಿಲನ್ ಮೋಹನ್ ವಿಕೃತ ಮನಸ್ಥಿತಿ, ನಗು, ತೂಗೂ ಚೇರಲ್ಲಿ ಕೂತು)

ಮೋಹನ್ : (ವಿಕೃತ ನಗು) ಲೇ ರಾಮಾ ಬಾರೋ ಇಲ್ಲಿ. ಯಾಕೋ ಕಾಲು ನೋವುತ್ತೆ. ಒತ್ತೋ ಇಲ್ಲಿ. ಬಂದೇ ಬರ್‍ತೈತೆ ಪಕ್ಕದೂರಿಗೆ ಬಂದ್ಮೇಲೆ ನಮ್ಮೂರ್‍ಗೂ ಸಾರಾಯಿ ಅಂಗಡಿ ಬರ್‍ಲೇಬೇಕು. ಆಗ್ಲೆ ಎಮ್ಮೆಲ್ಲೆತವ ಮಾತಾಡ್‌ಬಿಟ್ಟಿದ್ದೀನಿ. ಹಿಂದಿನ ಕಾಲದಲ್ಲಿ ಪಾನ, ಸುರ, ಸೋಮ ಅಂತ ಕರೀತಾ ಇದ್ರು. ಈಗ ಅದನ್ನು ಈ ಜನಗಳು ಸಾರಾಯಿ ಅಂತ ಕರೀತಾರೆ. ಅದೇ ನಿಶಾ ಹೆಸರು ಬೇರೆ. ದೇವಾನುದೇವತೆಗಳು ರಾಜ ಮಹಾರಾಜರುಗಳು ಸುರಪಾನ ಮಾಡಿದ್ದವರೇ. ಅಷ್ಟೇ ಯಾಕೆ ನಮ್ ರಾಜಕಾರಣಿಗಳು ಇದು ಇಲ್ದೆ ನಿದ್ದೇನೇ ಮಾಡಲ್ಲ. ಬೇರೆ ಕೆಲಸನೂ ಮಾಡಲ್ಲ. ಇದು ಇಲ್ದೇ ಏನೂ ಇಲ್ಲ. ಎಲ್ಲಾ ರೋಗಕ್ಕೂ ಇದೇ ಮದ್ದು. ಜಟ್ಟಿಗಳಿಗೆ ರಾಜರಸ ಕುಡಿಸಿದರೆ ಮದವೇರಿ ಎದುರಾಳಿಗಳನ್ನು ಪಟ್ಟು ಹಾಕ್ಕೋತಾರಲ್ಲಾ ಅದೇ ರಾಮರಸ. ಒಟ್ಟಿನಲ್ಲಿ ಎಲ್ಲರಿಗೂ ನಿಶಾ ಬೇಕು. ನಿಶದ ಸುಖ ಬೇಕು. ತರ್‍ತೀನಿ ತಂದೇ ತರ್‍ತೀನಿ. ಸಾರಾಯಿ ನಿಶೆಯಲ್ಲಿ ನಗುವಿನಹಳ್ಳಿಯನ್ನು ತೇಲಾಡಿಸ್ತೀನಿ. ಮತ್ತೆ ನಗು. (ಹಾಗೆಯೇ ಕತ್ತಲು ಆವರಿಸುತ್ತದೆ)

ಬೆಳಗಿನ ವೇಳೆ.

(ಸಿಂಗ್ರಿ ನಾಗಯ್ಯ, ಹಳ್ಳಿಗಳ ಅಭಿವೃದ್ಧಿ, ರಂಗೋಲಿ ಹಾಕುವ ಹೆಂಗಸು, ದನಕರು ಮೇಯಿಸುವ ಗಂಡಸು. ಹಾಲು ಕರೆಯುವುದು, ಬಾವಿಯಲ್ಲಿ ನೀರು ತುಂಬುವ ಹೆಂಗಸರು.)

(ಜಗುಲಿಯ ಮೇಲೆ ಸಿಂಗ್ರಿ ನಾಗಯ್ಯ ಶೇವಿಂಗ್ ಮಾಡುತ್ತಿರುವ ದೃಶ್ಯ. ಒಬ್ಬ ಶೇವಿಂಗ್ ಮಾಡಿಸ್ಕೋತಿರುತ್ತಾನೆ. ಕರೆಯುವಾಗ ರಂಗೋಲಿ ಬಿಡುವ ಹೆಂಗಸಿನ ಕಡೆ ನೋಡುತ್ತಾ ಹೋಗಿ ಕೆನ್ನೆ ಕೆರೆದು ಬಿಡ್ತಾನೆ. ಆತನು ರಕ್ತ ಕಂಡು ಕೆಂಡಾಮಂಡಲವಾಗಿ ಸಿಂಗ್ರಿಯನ್ನು ಓಡಿಸ್ಕೊಂಡು ಹೋಗುವುದು)

ಬೆಂಕಿ ದೇಹವನ್ನು
ನಾಶ ಮಾಡಿದರೆ
ಕುಡಿತ ದೇಹ ಮತ್ತು
ಆತ್ಮ ಎರಡನ್ನೂ
ನಾಶಮಾಡುವುದು



ದೃಶ್ಯ – 7

(ಶಾಲೆಯ ದೃಶ್ಯ – ತರಗತಿಯ ದೃಶ್ಯ – ವಂದೇ ಮಾತರಂ ಮ್ಯೂಸಿಕ್)

(ಮೇಷ್ಟ್ರು ಮಕ್ಕಳಿಗೆ ಪಾಠ ಮಾಡುತ್ತಾ)

ಮೇಷ್ಟ್ರು : ನಮ್ಮದು ಅನೇಕತೆಯಲ್ಲಿ ಏಕತೆ ಹೊಂದಿದ ರಾಷ್ಟ್ರ. ಇವತ್ತು ಕೆಲವರು ಸ್ವಹಿತಕ್ಕಾಗಿ ಜಾತಿ–ಜಾತಿ ಮಧ್ಯೆ, ಧರ್ಮ–ಧರ್ಮದ ಮಧ್ಯೆ ವಿಷಬೀಜ ಬಿತ್ತುತ್ತಾರೆ. ಬ್ರಿಟಿಷರ ಸಂಕೋಲೆಯಿಂದ ದೇಶವನ್ನು ಸ್ವಾತಂತ್ರ್ಯ ಗೊಳಿಸುವಾಗ ಎಲ್ಲಾ ಜಾತಿ ಧರ್ಮೀಯರು ಒಂದಾಗಿ ಹೋರಾಟ ಮಾಡಿದರು. ಇವತ್ತು ನಾವು ಜಾತಿ–ಧರ್ಮದ ಮೇಲು–ಕೀಳಿನ ಅಂಧಕಾರದಲ್ಲಿ ತೊಳಲುತ್ತಾ ದೇಶದ ಸಮಗ್ರತೆ ಮರೆತಿದ್ದೇವೆ. ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ನಿಮ್ಮಲ್ಲಿ ಮುಗ್ಧತೆ ಇದೆ, ಪ್ರೀತಿಯಿದೆ, ನಿಮ್ಮಲ್ಲಿ ಸಾಧಿಸುವ ಶಕ್ತಿ ಇದೆ. ಜಾತಿ–ಧರ್ಮದ ಸಂಕೋಲೆಯಿಂದ ಹೊರಬನ್ನಿ. ನಾವು ನಮ್ಮದು ಎಂಬ ಮನೋಭಾವ ಬೆಳೆಸಿಕೊಳ್ಳಿ. ಭಾರತಾಂಬೆ ನಮ್ಮ ಪುಣ್ಯಭೂಮಿ. ನಾವೆಲ್ಲ ಆಕೆಯ ಮಕ್ಕಳು. ಮೊದಲು ಭಾರತೀಯರಾಗೋಣ. ದೇಶಕ್ಕಾಗಿ ತನು ಮನದಲ್ಲಿ ದುಡಿಯೋಣ. ಯಾರೇ ತಪ್ಪು ಮಾಡಿದರೂ ಖಂಡಿಸೋಣ. ಯಾರಿಗೆ ಅನ್ಯಾಯ ವಾದಾಗಲೂ ಪ್ರತಿಭಟಿಸೋಣ.

ಪ್ರತಿಭಟನೆಯ ಕಿಚ್ಚು ನಮ್ಮ ಧಮನಿ ಧಮನಿಗಳಲ್ಲೀ ಹರಿಯಬೇಕು. ಸರಳತೆ, ಸಜ್ಜನಿಕೆ, ಸಹೋದರತ್ವ ಗುಣಗಳನ್ನು ಮೈಗೂಡಿಸಿಕೊಳ್ಳಿ. ಸೇವಾ ಮನೋಭಾವ ಪ್ರತಿ ಹೃದಯಗಳಲ್ಲಿ ಇರಲಿ. ಕೆಲವರ ಚಿತಾವಣೆಗೆ ಮರುಳಾಗದೆ ಅವರ ಮಾತಿಗೆ ಮಣಿಯದೆ ತಮ್ಮತನವನ್ನು ಬೆಳೆಸಿಕೊಳ್ಳಿ. ದೇಶಪ್ರೇಮಿಗಳಾಗಿ, ವಿಶ್ವದಲ್ಲಿಯೇ ನಮ್ಮ ರಾಷ್ಟ್ರವನ್ನು ಬಲಿಷ್ಟ ರಾಷ್ಟ್ರವಾಗಿ ಮಾಡಲು ಪಣ ತೊಡಿ. ಏಳಿ ಎದ್ದೇಳಿ. ಗುರಿ ಮುಟ್ಟುವವರೆಗೆ ನಿಲ್ಲದಿರಿ ಎಂಬ ವಿವೇಕಾನಂದರ ವಾಕ್ಯಕ್ಕೆ ಪರಿಪೂರ್ಣ ಮಾಡಿರಿ. ಮಕ್ಕಳೇ ಕರ್ನಾಟಕದ ಬೆಂಗಳೂರಿನಲ್ಲಿ ಗಾಂಧೀಜಿಯವರ ಚಿತಾಭಸ್ಮ ಎಲ್ಲಿದೆ ಎಂಬ ಪ್ರಶ್ನೆ ಕೇಳಿದ್ದೆ. ಅದು ತುಂಬಾ ಕಠಿಣವಾದ ಪ್ರಶ್ನೆ ನನಗೆ ಗೊತ್ತು ಮಕ್ಕಳೇ... 1948ನೇ ಜನವರಿ 30ನೇ ತಾರೀಖು ಪೂಜ್ಯ ಗಾಂಧೀಜಿ ಯವರು ಅಮರರಾದ ವಾರ್ತೆ ದೇಶದಲ್ಲೆಲ್ಲಾ ಹರಡಿತು. ಇಡೀ ಭಾರತದ ಜನತೆ ಶೋಕಸಾಗರದಲ್ಲಿ ಮುಳುಗಿತು. ಬ್ರಿಟಿಷ್ ದೊರೆ ಹೆಸರಿನ ಕಬ್ಬನ್ ಪೇಟೆಯ ಬಡವರ ಬಳಗದ ಗಾಂಧಿ ಅನುಯಾಯಿಗಳು, ಸಾರ್ವಜನಿಕರು ಬೆಂಗಳೂರಿನ ರಾಜಬೀದಿಗಳಲ್ಲಿ ಮೌನ ಮೆರವಣಿಗೆ ಹೊರಟು ಕೆಂಪಾಂಬುದಿ ಕೆರೆಯ ನೀರು ಮುಟ್ಟುವುದರ ಮೂಲಕ ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಕರ್ನಾಟಕ ರಾಜ್ಯದ ಪ್ರಭಾವಿ ರಾಜಕಾರಣಿಯಾದ ಶ್ರೀ ಕೆಂಗಲ್ ಹನುಮಂತಯ್ಯನವರು ತಕ್ಷಣ ದೆಹಲಿಗೆ ಹೋಗಿ ಗಾಂಧೀಜಿಯವರ ಪಾರ್ಥೀವ ಶರೀರದ ದರ್ಶನ ಭಾಗ್ಯ ಪಡೆದು, ಅಂತಿಮ ಮೆರವಣಿಗೆಯಲ್ಲಿ ಪಾಲ್ಗೊಂಡು

Scanned with OKEN Scanner

ಗಾಂಧೀಜಿಯವರ ಚಿತಾಭಸ್ಮವನ್ನು ಬೆಂಗಳೂರಿಗೆ ತಂದು ಕಬ್ಬನ್‌ಪೇಟೆಯ ಕ್ಷೇತ್ರದ ಬಡವರ ಬಳಗದ ಆವರಣದಲ್ಲಿ ಹನ್ನೆರಡು ದಿನಗಳವರೆಗೆ ಸಾರ್ವಜನಿಕರ ದರ್ಶನಕ್ಕಾಗಿ ಉಪಸ್ತುತ ಮಾಡಿದರು. ಸಹಸ್ರಾರು ಜನರಿಗೆ ಊಟ ಹಾಕಿ ಗಾಂಧೀಜಿ ಯವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವ ಮೂಲಕ ಹನ್ನೆರಡನೇ ದಿನದ ತಿಥಿಯನ್ನು ಶ್ರದ್ಧೆಯಿಂದ ಆಚರಿಸಲಾಯಿತು. ಇದಾದ ನಂತರ ಮೈಸೂರು ಸಂಸ್ಥಾನದ ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಚಂಗಲರಾಯರೆಡ್ಡಿ ಅವರ ನೇತೃತ್ವದಲ್ಲಿ 12–02–1948, ಗುರುವಾರ ಬೆಳಿಗ್ಗೆ 7 ಘಂಟೆ 30 ನಿಮಿಷದ ಸಮಯದಲ್ಲಿ ಕಾವೇರಿನದಿಯ ಪಶ್ಚಿಮ ವಾಹಿನಿ ಪವಿತ್ರ ತೀರ್ಥದ ಈ ಸ್ಥಳದಲ್ಲಿ ರಾಷ್ಟ್ರಪಿತ ಪೂಜ್ಯ ಮಹಾತ್ಮ ಗಾಂಧೀಜಿ ಅವರ ಚಿತಾಬಸ್ಮವನ್ನು ವಿಸರ್ಜಿಸಲಾಯಿತು.

(ಮೇಷ್ಟ್ರು ಹೇಳುತ್ತಿದ್ದುದನ್ನು ಮೂಕವಿಸ್ಮಿತರಾಗಿ ನೋಡುತ್ತಿದ್ದರು ಮಕ್ಕಳು.)
(ಎಲ್ಲಾ ಎದ್ದು ನಿಂತು ರಾಷ್ಟ್ರಗೀತೆ 'ಜನ ಗಣ ಮನ' ಹಾಡು).

Scanned with OKEN Scanner

ದೃಶ್ಯ – 8

(ಸಾಹುಕಾರ್ ಮೋಹನಪ್ಪ ಎಂ.ಎಲ್.ಎ. ದೊಡ್ಡೇಗೌಡರ ಹತ್ತಿರ ಮಾತಾಡುವ ದೃಶ್ಯ)

(ರಾತ್ರಿಯ ದೃಶ್ಯದಲ್ಲಿ ಮನೆಯ ಮುಂದಿನ ಮಬ್ಬು ಬೆಳಕಿನಲ್ಲಿ ಮರವೊಂದನ್ನು ಕೈಯಿಂದ ಒತ್ತಿ ಹಿಡಿದುಕೊಂಡು, ಕಿವಿಯಲ್ಲಿ ಫೋನ್ ಇಟ್ಟುಕೊಂಡು ಒಬ್ಬಾತ ಹಿಂದೆ ಕೈಕಟ್ಟಿಕೊಂಡು ನಿಂತಿರುವುದು. ಒಬ್ಬಾತ ಗ್ಲಾಸಿಗೆ ಎಣ್ಣೆ ಹಾಕಿ ರೆಡಿ ಮಾಡೋತರ)

ಮೋಹನಪ್ಪ : *(ಕಿವಿಯಲ್ಲಿ ಫೋನ್ ಇಟ್ಟುಕೊಂಡು ತನಗೆ ತಾನೇ ಮಾತಾಡಿಕೊಳ್ಳುತ್ತಾ)* ಏನ್ಲಾ ಎಂ.ಎಲ್.ಎ. ಇಷ್ಟೊಂದು ಸಲ ರಿಂಗ್ ಮಾಡಿದ್ರು ಫೋನ್ ಎತ್ತುತ್ತಾ ಇಲ್ಲಾ. ಏನ್ ಬ್ಯುಸಿ ಆಗವನೇನ್ಲಾ. ಕಡೆದಪ್ಪಾ ಒಂದ್ ಸಲ ಟ್ರೈ ಮಾಡ್ತೀನಿ ಇರ್ಲಾ. ಫೋನ್ ರಿಂಗ್ ಆಯ್ತು ಆಯ್ತು *(ಕೊನೆಗೆ ಅಪ್ಪ ಎಂ.ಎಲ್.ಎ. ದೊಡ್ಡೇಗೌಡರು ಫೋನ್ ರಿಸೀವ್ ಮಾಡ್ತಾರೆ)* ಅಡ್‌ಬಿದ್ದೆ ಅಣ್ಣೋ...॥ ಅದೇ ಕಣಣ್ಣ ನಾನು ನಗುವಿನಹಳ್ಳಿ ಮಂಡೆ ಮೋಹನಪ್ಪ. ಏನಣ್ಣಾ ಎಷ್ಟು ದಿವಸ ಆಯ್ತಣ್ಣೋ ನಿಮ್ಮ ದರುಶನ ಆಗಿ ಹೇಗಿದ್ದೀರಣ್ಣೋ. ನಮ್ಮನ್ನೆಲ್ಲಾ ಮರಿಬ್ಯಾಡಣ್ಣೋ. ನಿಮಗೋಸ್ಕರ ನಾವೆಲ್ಲಾ ದುಡ್ದಿದ್ದೀವಿ. ನಿಮ್ಮ ಕೃಪೆ ನಮ್ಮ ಮೇಲೆ ಇರ್ಲಣ್ಣ.

Scanned with OKEN Scanner

ಎಂಎಲ್‌ಎ : ಹೇಳಪ್ಪಾ ಮಂಡೆ ಮೋಹನಪ್ಪಾ... ಏನಯ್ಯ ಈಗ ಈ ದೊಡ್ಡೇಗೌಡನ ಜ್ಞಾಪಕ ಮಾಡ್ಕೊಂಡ್ ಫೋನ್ ಮಾಡಿದ್ದೀಯಾ... ನೀನ್ ಕಿಲಾಡಿ ಕಣಯ್ಯ. ನನ್ನಿಂದ ಏನೋ ಕೆಲಸ ಆಗಬೇಕು. ಅದಕ್ಕೆ ಫೋನ್ ಮಾಡಿದ್ದೀಯ. ಅದ್ ಸರಿ ಏನು ಫೋನ್ ಮಾಡಿದ್ದು ವಿಷಯ ಹೇಳು.

ಮೋಹನಪ್ಪ : ಅದೇ ಅಣ್ಣಾ ಕಳೆದ ಸಾರಿ ನಿಮ್ಮ ಮನೆಗೆ ಬಂದಿದ್ದಾಗ ನಾನು ಊರ್ ಕಡೆ ಒಂದು ಮಧ್ಯದ ಅಂಗಡಿ ತೆರಿಬೇಕು. ಅದಕ್ಕೆ ಲೈಸೆನ್ಸ್ ಕೊಡ್ಸಿ ಅಂತೇಳಿದ್ದೆ. ನೀವು ಆಯ್ತು ನೋಡೋಣ ಅಂದಿದ್ದೀರಾ ಅಣ್ಣಾ. ಅಂಗಡಿ ಇಡಲು ಎಲ್ಲಾ ರೆಡಿ ಮಾಡ್ಕೊಂಡಿದ್ದೀನಿ. ನೀವು ಊಂ ಅಂದ್ರೆ ಸಾಕಣ್ಣ. ನಿಮಗೆ ಸೇರಬೇಕಾದ ಹಣ ಎಲ್ಲಾ ರೆಡಿ ಇದೆ. ಅಧಿಕಾರಿಗಳಿಗೆ ಕೊಡಬೇಕಾದ್ದು ರೆಡಿ ಇದೆ. ಲೈಸೆನ್ಸ್ ಲೆಟರ್ ಕೊಟ್ಟು ಸ್ವಲ್ಪ ಮೂವ್ ಮಾಡಿದರೆ ಅಣ್ಣಾ ನನ್ನ ಮಧ್ಯದಂಗಡಿ ಗ್ಯಾರಂಟಿ ಕಣಣ್ಣಾ.

ದೊಡ್ಡೇಗೌಡ : ಅಂಗಾರೆ ದುಡ್ಡು ರೆಡಿ ಇದ್ರೆ ಬಂದ್‌ಬಿಡು ನಮ್ಮ ಅಬಕಾರಿ ಹೈಕ್ಳು ಎಲ್ಲಾ ನನ್ನ ಜೇಬಿನಾಗೆ ಅವ್ರೆ. ನಿನ್ನ ಮಧ್ಯದಂಗಡಿಗೆ ಯಾವ ವಿಘ್ನ ಬಾರದಂತೆ ಮಾಡಿಸಿಕೊಡ್ತೀನಿ.

ಮೋಹನಪ್ಪ : ಸರಿ ಅಣ್ಣಾ...... ಸರಿ ಅಣ್ಣಾ ಬರ್ತೀನಿ ಬರ್ತೀನಿ (*ಗಾಬರಿಯಾಗಿ*) ಅಣ್ಣಾ ಅಣ್ಣಾ ಒಂದು ವಿಷಯ ಖುಷಿಯಾಗಿ ಹೇಳ್ಬೇಕು ಅನಿಸುತ್ತೆ.

ದೊಡ್ಡೇಗೌಡ : ಅದೇನು ಬೇಗ ಹೇಳಪ್ಪಾ ನಂಗೆ ಮೀಟಿಂಗ್ ಇದೆ.

ಮೋಹನಪ್ಪ : ಅಣ್ಣಾ ಇದೆಲ್ಲಾ ಸರಾಗವಾಗಿ ಆಗಿ, ಮಧ್ಯದಂಗಡಿ ನಿಮ್ಮ ಕೈಯಿಂದಲೇ ಪೂಜೆ ಮಾಡಿಸಿ

ಅವತ್ತೇ ಊರಲ್ಲಿ ನಾಟಿ ಕೋಳಿ ಹಾಗೂ ಮೀನ್ ಸಾರ್ ಊಟನ ಐ.ಬಿ.ಯಾಗೆ ಅರೆಂಜ್ ಮಾಡ್ತೀನಿ. ಇದರ ಜೊತೆಗೆ ಅದೆಲ್ಲ ಇರುತ್ತೆ ಅಣ್ಣಾ. ಬರ್ಬೇಕು.

ದೊಡ್ಡೇಗೌಡ : ಆಯ್ತು ಆಯ್ತು ಬಿಡು.

ಮೋಹನಪ್ಪ : (ನಗುತ್ತಾ) ಹ್ಹ...ಹ್ಹ...ಹ್ಹ... ಈ ಊರಿಗೆ ಈ ವಾರದಲ್ಲಿ ಮಧ್ಯ ತರಿಸಿ ಮಧ್ಯದ ಮದದಲ್ಲಿ ಎಲ್ಲಾ ಹಳ್ಳಿಯ ಹೈಕಳಿಗೂ ಮತ್ತೇರಿಸಿ ಬೇರೆ ಲೋಕಕ್ಕೆ ಕರ್‍ಕೊಂಡ್ ಹೋಗ್ತೀನಿ. ಅಲ್ಲಿ ಅವರು ನೆಮ್ಮದಿಯಾಗಿ ಕಾಲ ಕಳೆಯಬಹುದು... ಹ್ಹ...ಹ್ಹ...ಹ್ಹ...

ಮೋಹನಪ್ಪ : ಸರಿ ಅಣ್ಣಾ...... ಸರಿ ಅಣ್ಣಾ ಬರ್ತೀನಿ ಬರ್ತೀನಿ (*ಗಾಬರಿಯಾಗಿ*) ಅಣ್ಣಾ ಅಣ್ಣಾ ಒಂದು ವಿಷಯ ಖುಷಿಯಾಗಿ ಹೇಳ್ಬೇಕು ಅನಿಸುತ್ತೆ.

ದೊಡ್ಡೇಗೌಡ : ಅದೇನು ಬೇಗ ಹೇಳಪ್ಪಾ ನಂಗೆ ಮೀಟಿಂಗ್ ಇದೆ.

ಮೋಹನಪ್ಪ : ಅಣ್ಣಾ ಇದೆಲ್ಲಾ ಸರಾಗವಾಗಿ ಆಗಿ, ಮಧ್ಯದಂಗಡಿ ನಿಮ್ಮ ಕೈಯಿಂದಲೇ ಪೂಜೆ ಮಾಡಿಸಿ ಅವತ್ತೇ ಊರಲ್ಲಿ ನಾಟಿ ಕೋಳಿ ಹಾಗೂ ಮೀನ್ ಸಾರ್ ಊಟನ ಐ.ಬಿ.ಯಾಗೆ ಅರೆಂಜ್ ಮಾಡ್ತೀನಿ. ಇದರ ಜೊತೆಗೆ ಅದೆಲ್ಲ ಇರುತ್ತೆ ಅಣ್ಣಾ. ಬರ್ಬೇಕು.

ದೊಡ್ಡೇಗೌಡ : ಆಯ್ತು ಆಯ್ತು ಬಿಡು.

ದೃಶ್ಯ – 9

ಊರಿನ ರಸ್ತೆಗಳು

(ಶಾಲಾ ಮಕ್ಕಳನ್ನು ಶಿಕ್ಷಕರು ಬೆಳಿಗ್ಗೆಯೇ ಶಾಲಾ ಆವರಣಕ್ಕೆ ಕರೆಸಿ ಎಲ್ಲಾ ಮಕ್ಕಳನ್ನು ಊರಿನ ಗಲ್ಲಿ ಗಲ್ಲಿಗೂ ಕರೆದುಕೊಂಡು ಹೋಗಿ ರಸ್ತೆಯಲ್ಲಿ ಬಿದ್ದಿರುವ ಕಸ ಎತ್ತಿ, ಚರಂಡಿ ಶುಚಿಗೊಳಿಸಿ, ಹೆಣ್ಣುಮಕ್ಕಳು ಪೊರಕೆ ಹಿಡಿದು ಗುಡಿಸುತ್ತಿದ್ದಾರೆ. ಗಂಡು ಮಕ್ಕಳು ಕಸ ಎಕ್ಕಿ ತೆಗೆಯುತ್ತಿದ್ದಾರೆ. ಸ್ವಚ್ಛತೆಯೆಡೆಗೆ ನಮ್ಮ ನಡಿಗೆ. ಸ್ವಚ್ಚತೆ ಎಲ್ಲಿರುವುದೊ ಅಲ್ಲಿದೆ ಆರೋಗ್ಯ. ನಮ್ಮ ಮನೆ ಸುತ್ತ ಮುತ್ತ ನಾವೇ ಶುದ್ಧವಾಗಿಟ್ಟುಕೊಳ್ಳಬೇಕು ಎಂದು ಕೆಲವು ಮಕ್ಕಳು ಬರೆಯುತ್ತಾ ಸ್ವಚ್ಛತೆಯ ಬಗ್ಗೆ ಊರಲ್ಲಿ ಒಂದು ಜಾಗೃತಿ ಮೂಡಿಸುತ್ತಿದ್ದಾರೆ.)

ಲಕ್ಷ್ಮಿ : ಎನ್ ಮೇಷ್ಟ್ರೇ ನಮ್ಮ ಮಕ್ಕಳಿಗೆಲ್ಲಾ ಪಾಠ ಹೇಳಿ ಕೊಡೋದುಬಿಟ್ಟು, ಕೂಲಿ ಕೆಲಸಕ್ಕೆ ಇಟ್ಟುಕೊಂಡಿದ್ದೀರಾ. ನಮ್ಮ ಮನೆಗಳಲ್ಲಿ ಮಾಡ್ರೋ ಅಂದ್ರ ಮಾಡಲ್ಲ ಮುಂಡೇವು. ಈಗ ನೋಡಿ ಗಲೀಜಾದರೂ ಹೇಗೆ ಎದ್ದು ಬಿದ್ದು ಮಾಡ್ತವೆ.

ಮೇಷ್ಟ್ರು : ಏನ್ ಮಾತಾಡ್ತಿದ್ದೀಯಾ ಲಕ್ಷ್ಮಕ್ಕ. 'ಸ್ವಚ್ಛತೆ' ಅನ್ನುವುದು ಪ್ರತಿಯೊಬ್ಬರ ಜವಾಬ್ದಾರಿ. ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ರಾಷ್ಟ್ರಪಿತ ಗಾಂಧೀಜಿಯವರು ಸ್ವಚ್ಛ ಭಾರತಕ್ಕೆ ಕರೆ

ನೀಡಿದ್ದರು. ಸ್ವಚ್ಛತೆ ಎಂದರೆ ಬರೀ ನಮ್ಮ ದೇಹ ಮನೆಗಳಷ್ಟೇ ಅಲ್ಲ. ನಮ್ಮ ಸುತ್ತ ಮುತ್ತಲ ಪರಿಸರವೂ ಸ್ವಚ್ಛವಾಗಿರಬೇಕು. ಎಲ್ಲಿ ಕಸ ಇರುವುದು, ಎಲ್ಲಿ ಸ್ವಚ್ಛತೆ ಇರುವುದಿಲ್ಲವೋ ಅಲ್ಲಿ ನಾನಾ ಬಗೆಯ ರೋಗಗಳು ಹುಟ್ಟಿಕೊಳ್ಳುತ್ತವೆ. ಅದಕ್ಕಾಗಿ ನೀವೆಲ್ಲಾ ಆಸ್ಪತ್ರೆಗೆ ಹೋಗಬೇಕು, ಹಣ ಖರ್ಚಾಗುತ್ತೆ. ನಮ್ಮ ಸುತ್ತಮುತ್ತ ನಾವೇ ಸ್ವಚ್ಛವಾಗಿಟ್ಟುಕೊಂಡರೆ ಯಾವ ರೋಗರುಜಿನಗಳು ಬರೋದಿಲ್ಲ. ನೋಡಮ್ಮ ನಿನ್ನ ಮನೆ ಮುಂದೆಯೇ ಎಷ್ಟೊಂದು ಕಸ ಅಶುದ್ಧವಾಗಿದೆ. ನಾವು ಅರ್ಥ ಮಾಡಿಕೊಂಡು ನಮ್ಮ ಪರಿಸರ ಶುದ್ಧವಾಗಿಟ್ಟುಕೊಂಡರೆ ಮಕ್ಕಳನ್ನು ಕರೆಸಿಕೊಂಡರೆ ಬಂದು ಸ್ವಚ್ಛ ಮಾಡಿಸ್ತಿರಲಿಲ್ಲ. ಈ ಮಕ್ಕಳ ಮೂಲಕ ನಿಮ್ಮಲ್ಲಿ ಜಾಗೃತಿ ಮೂಡಿಸುವ ಸಣ್ಣ ಅಭಿಯಾನ ನನ್ನದು. ಊರಿನ ಜನ ಅರ್ಥ ಮಾಡ್ಕೊತಾರೆ ಅನಿಸುತ್ತೆ.

ಲಕ್ಷ್ಮಿ : ತಪ್ಪಾಯ್ತು ಮೇಷ್ಟ್ರೆ. ಇದೆಲ್ಲಾ ನಮ್ಮಂತ ಹಳ್ಳಿ ಜನಕ್ಕೆ ಹೇಗೆ ಗೊತ್ತಾಗುತ್ತೆ.

(ಮಕ್ಕಳು ತಮ್ಮ ಪಾಡಿಗೆ ತಮ್ಮ ಕೆಲಸಗಳಲ್ಲಿ ತೊಡಗಿರುತ್ತಾರೆ)

Scanned with OKEN Scanner

ದೃಶ್ಯ –10

ರಾತ್ರಿ ಸಮಯ –ಊರಿನ ಜಗಲಿ

(ಜನಾರ್ಧನ್, ಕಿಟ್ಟಿ, ಸಿಂಗ್ರಿ ನಾಗಯ್ಯ, ಸುಬ್ಬಯ್ಯ ಹಾಗೂ ಇನ್ನಿತರರು ಜಗುಲಿಯ ಮೇಲೆ ಕೂತಿರುತ್ತಾರೆ. ಬೀಡಿ ಸೇದುತ್ತಾ ಅಡಕೆ ಎಲೆ ಜಗಿಯುತ್ತಾ, ಕೆಲವರು ಮಲಗಿರೋ ತರ)

ಸಿಂಗ್ರಿ ನಾಗಯ್ಯ : ನೋಡ್ಲ ಹನುಮಣ್ಣ... ಚಿಂತೆ ಇಲ್ದೋನ್‌ಗೆ ಸಂತೇಲು ನಿದ್ದೆ ಅನ್ನುವಂತೆ ಇವನಿಗೆ ಜಗುಲಿಯ ಮೇಲೆ ನಿದ್ದೆ ಬಂದ್ಯೆತೆ. ಅದ್ಯಾಪಾಟಿ ಗೊರಕೆ ಹೊಡೀತಾನೆ, ಮಾಡೋಕೆ ಕೇಮೆ ಇಲ್ಲ. ಅವರ ಮನೆ ಇವರ ಮನೆ ಬಟಕ್‌ಗೊಂಡು ಬರೋನಿಗೆ ಈ ಪಾಟಿ ನಿದ್ದೆಗೊರಕೆ, ನಾವೆಲ್ಲಾ ಮಲಗಿದರೆ ಜಗಲಿಯೇ ಬಿರುಕು ಹೊಡೆಯುತ್ತದೆ. *(ನಗು – ಎಲ್ಲರೂ ನಗುತ್ತಾರೆ)*

ಸುಬ್ಬಯ್ಯ : ನಮ್ಮೂರ ಮೇಷ್ಟ್ರಿಗೆ ಕೇಮೆ ಇಲ್ಲ, ಹುಡುಗರ್‍ನೆಲ್ಲಾ ಕೂಲಿ ಆಳುಗಳಾಗಿ ಮಾಡ್ತಾನೆ. ಅದೆನೋ ಗಾಂಧಿ ತತ್ವ ಸಿದ್ಧಾಂತ ಅಂತ ಚರಂಡಿ, ಮೋರಿ ಸ್ವಚ್ಛ ಮಾಡೋಕ್ಕೆ, ಸಸಿ ನೆಡೋಕೆ ಕಸ ಗುಡ್ಸೋಕೆ ಕರ್‍ಕೊಂಡ್ ಹೋಗ್ತಾನಲ್ಲ

ಜನಾರ್ಧನ್ : ಇದೆಲ್ಲಾ ಹೋಗ್ಲೊ... ಮಧ್ಯಪಾನ ಧೂಮಪಾನ ಮಾಡೋದು, ಗುಟ್ಕಾ ಜಗಿಯೋದು ಎಲ್ಲಾ ಕೆಟ್ಟದ್ದು ಅಂತ ಮಕ್ಕಳಿಗೆ ಬೋಧನೆ ಮಾಡವ್ನೆ. ನನ್ ಮಗ ನಾನ್ ಬೀಡಿ ಸೇದೋಕೆ ಹೋದ್ರ ಮುಖ ಸಿಂಡರಿಸಿಕೊಂಡು ಸೇದಬೇಡ ಅಂತ ಎದುರು ಮಾತು ಕೊಡ್ತಾನೆ, ತಾಡಿಸಬೇಕು ಅವಂಗೆ.

ಕಿಟ್ಟಿ : ವಿಶ್ವೇಶ್ವರಯ್ಯನ ಕತೆ ಹೇಳ್ತಾನೆ, ಅಂಬೇಡ್ಕರ್ ಸಂವಿಧಾನ ಅಂತಾನೆ, ಮಾಸ್ತಿ ಕನ್ನಡದ ಆಸ್ತಿ ಅಂತಾನೆ. ರಾಜಣ್ಣನ ನಡೆ, ಡೈಲಾಗ್‌ಗಳನ್ನು ಹೊಡೆದು ಕೈ ಕೆಸರಾದರೆ ಬಾಯಿ ಮೊಸರು ಆಗುವಂತೆ ರಾಜ್‌ಕುಮಾರ್‌ರ ಬಂಗಾರದ ಮನುಷ್ಯನ ರೀತಿ ಮಣ್ಣಿನ ಮಗ ಆಗು ಅಂತಾನೆ ನನ್ ಮಗ.

(ಇವರು ಮಾತನಾಡುವ ವೇಳೆ ಲಕ್ಷ್ಮಿ ಆ ಮಾರ್ಗದಲ್ಲಿ ಹೋಗುವಾಗ ಜಗುಲಿಯಿಂದ ಇಳಿದು ಸಿಂಗ್ರಿ ನಾಗಯ್ಯ ಅವಳ ಹಿಂದೆ ಹೋಗುವನು)

ಸುಬ್ಬಯ್ಯ : ಯಾವುದಾದರೂ ಸೆರಗು ಕಂಡ್ರೆ ಓಡ್ತಾನೆ... ಅದು ಬಜಾರಿ ಲಕ್ಷ್ಮಿ ಹಿಂದೆ ಹೋಗೌನೆ. ಅವಳನ್ನ ಕೆಣಕಿದರೆ ಒದೆ ತಿಂದ್ ಬರ್ತಾನೆ.

ಜನಾರ್ದನ್ : ನೀನೇಳಿದ್ದು ಕರೆಕ್ಟು... ತಿನ್ಲಿ ಬಾ ಗೂಸಾನಾ

ಕಿಟ್ಟಿ : ಇವನಿಗೆ ಬುದ್ದಿ ಬರಲ್ಲ ಬರ್ರಪ್ಪಾ ನಮ್ದೆ ಸಾಕಷ್ಟಿದೆ, ಹೊತ್ತಾಯ್ತು ಬಾಪ್ಪ ಮನೆಗೆ ಹೋಗೋಣ ಏನ್ ಕಾದೈತೊ...

ದೃಶ್ಯ –11

ಸುಬ್ಬಯ್ಯನ ಮನೆ

(ಸುಬ್ಬಯ್ಯ ಹೆಂಡತಿ ಶಾಂತಮ್ಮನನ್ನು ಕೇಳುತ್ತಾನೆ)

ಸುಬ್ಬಯ್ಯ : ಎಲ್ಲೇ ನಿನ್ನ ಮಗ ಏನ್ ಮಾಡ್ತಾವ್ನೆ

ಶಾಂತಮ್ಮ : ಓದ್‌ಕೊಳ್ತಾನೆ.

ಸುಬ್ಬಯ್ಯ : ನಿನ್ನ ಮಗ ಈಗ್ಲೇ ಆ ಮೇಷ್ಟ್ರ ಮಾತ್ ಕೇಳ್ಕೊಂಡು ಹಳ್ಳೀನ ಉದ್ಧಾರ ಮಾಡೋಕ್ಕೆ ಹೊರಟವನಲ್ಲೇ... ಈ ವಯಸ್ಸಿಗೇ ಇದೆಲ್ಲಾ ಬೇಕಾ ? ನೀನ್ ಸ್ವಲ್ಪ ಬುದ್ಧಿ ಹೇಳೋಕ್ ಆಗಲ್ವಾ... ಮುದ್ದು ಮಾಡಿ ಕೆಡ್ಸಿ ಕೂತಿದ್ದೀಯಾ ?

(ಸುಬ್ಬಯ್ಯ ಹೇಳೋದನ್ನ ಮಗ ಹರಿ ಕೇಳಿಸ್ಕೋತಾನೆ)

ಹರಿ : ನಾನ್ ಓದ್ತಾ ಇದ್ದೀನಿ ಸುಮ್ನೆ ಇರಪ್ಪಾ... ಮೇಷ್ಟ್ರು ನಮಗೆ ಕೆಟ್ಟದ್ದು ಹೇಳ್ಕೊಡೊಲ್ಲ. ನೀನೇ ಅವರ್ನ ತಪ್ಪು ತಿಳ್ಕೊಂಡಿದ್ದೀಯಾ...

ಸುಬ್ಬಯ್ಯ : ನಂಗೆ ಎದುರ್ ಮಾತಾಡಿದ್ರೆ ಎಗರಿಸಿ ಒದ್ದೇನು...

ಶಾಂತಮ್ಮ : ಸುಮ್ನೆ ಇರಿ... ಪಾಪ ಮಗು ಓದ್ತಾ ಇದೆ.

ಸುಬ್ಬಯ್ಯ : *(ಹೆಗಲ ಮೇಲಿದ್ದ ಟವಲ್ ಒದರಿಕೊಂಡು ಈಚೆಗೆ ಬರುತ್ತಾ)* ಓದ್ಸು ಓದ್ಸು...

ಕಿಟ್ಟಿ ಮನೆ

(ಕಿಟ್ಟಿ ಮನೆಯಲ್ಲಿ ಮೇಷ್ಟ್ರನ್ನ ಬಯ್ಯುತ್ತಿರುವುದು)

ಕಿಟ್ಟಿ : ಮೇಷ್ಟ್ರು ಉಮೇಶಪ್ಪನಿಗೆ ಸರ್ಕಾರ ಸಂಬಳ ಕೊಡೋದು ಪಾಠ ಮಾಡಕ್ಕೆ ಅಂತ. ಆದ್ರೆ ಆತ ನಿಮಗೆಲ್ಲಾ ಇಲ್ಲಸಲ್ಲದ ಬುರುಡೆ ವೇದಾಂತಗಳನ್ನು ತುಂಬ್ತಾ ನಿಮ್ಮ ತಲೆ ಕೆಡಿಸ್ತಾನೆ. ಅವನೇಳಿದ ಅಂತ ನೀವು ಕೇಳ್ತೀರಾ. ಇದ್ಯಲ್ಲ ಯಾರ್‍ನ ಉದ್ದಾರ ಮಾಡೋಕೋ...

ವೇದಾಂತ : ಓದೋದರಿಂದ ಜ್ಞಾನ ಬೆಳೆಯುತ್ತೆ, ವಿನಯವಂತಿಕೆ ಮೂಡುತ್ತೆ. ಸರಿ ತಪ್ಪುಗಳು, ಒಳ್ಳೆಯದು ಕೆಟ್ಟದರ ಬಗ್ಗೆ ಅರಿವಾಗುತ್ತೆ, ನಮ್ಮ ದೇಶದ ಮಹನೀಯರ ಬಗ್ಗೆ ನಮಗೂ ತಿಳಿಯುತ್ತೆ ಕಣಪ್ಪಾ.

ಕಿಟ್ಟಿ : ಓಹೋ ನೀನೇಳೊ ಅರ್ಥ ನನ್ನಲ್ಲಿ ಜ್ಞಾನಾನೇ ಇಲ್ವಾ, ವಿನಯವಂತಿಕೆನೂ ಇಲ್ವಾ, ನಾನು ಮಾಡೊದೆಲ್ಲಾ ತಪ್ಪುಗಳಾ... ನಾನು ಕೆಟ್ಟ ಮನುಷ್ಯ. ಇದೆಲ್ಲಾ ನಿಮ್ಮ ಮೇಷ್ಟ್ರ ಹೇಳ್ಕೊಟ್ಟವನಾ. ಅಪ್ಪನ ವಿರುದ್ದಾನೇ ಮಗನ ಎತ್ತಿಕಟ್ಟವ್ನಾ. ನಾಳೆ ಶಾಲೆಗೆ ಬರ್ತೀನಿ. ಗ್ರಾಚಾರ ಬಿಡಿಸ್ತೀನಿ.

ಲಕ್ಷ್ಮಮ್ಮ : ಏನ್ ಮಾತಾಡ್ತೀರಿ, ಮೇಷ್ಟ್ರು ಮಕ್ಕಳಿಗೆ ಯಾವತ್ತು ಒಳ್ಳೆಯದೇ ಹೇಳಿಕೊಡುವುದು. ಮಗ ಕಷ್ಟಪಟ್ಟು ಓದ್ತಾನೆ. ನಾಲ್ಕಕ್ಷರ ಕಲಿತಾನೆ. ಮುಂದೆ ದೊಡ್ಡ ಆಫೀಸರ್ ಆಗ್ಬೇಕು ಅಂತಾವ್ನೆ. ತಂದೆ ತಾಯಿಗಳಾಗಿ ನಮಗೂ ಜವಾಬ್ದಾರಿ ಇದೆ, ನಾವು ಅವನ ಆಸೆಗೆ ಪೋಷಣೆ ನೀಡಬೇಕು. ಅದ್‌ಬಿಟ್ಟು ನೀವೇ ಹೀಗೆ ಅವನ್ನ ಹೀಯಾಳಿಸಿದ್ರೆ. ಮಗು ಆಸೆಗೆ ಯಾವತ್ತಾದರೂ ಬೆಂಬಲ ನೀಡಿದ್ರಾ... ಸುಮ್ಕಿರ್ರಿ ಸಾಕು (ಎನ್ನುತಾ ಅಡುಗೆ ಮನೆಗೆ ಹೋಗ್ತಾಳೆ)

ಕಿಟ್ಟಿ : ಅಮ್ಮ ಮಗನಿಗೆ ಬುದ್ಧಿ ಕಲಿಸೋಕ್ಕಾಗಲ್ಲ (ಅಂತ ಮೇಲ್ಛಾವಣೆ ನೋಡುತ್ತಾ ಕೂರುತ್ತಾನೆ)

ಜನಾರ್ಧನನ ಮನೆ

(ಜನಾರ್ಧನ ಹೊರಗಿನಿಂದ ಮನೆಯೊಳಗೆ ಪ್ರವೇಶಿಸುತ್ತಾನೆ, ಮಗ ಧರಣೇಶ ಓದ್ತಾ ಇರ್ತಾನೆ, ಹೆಂಡ್ತಿಯನ್ನುದ್ದೇಶಿಸಿ)

ಜನಾರ್ಧನ : ಲೇ ಸರೋಜ ಕುಡಿಯೋಕೆ ಕೊಡೆ.

ಸರೋಜ : ಏನ್ರೀ ಕುಡಿಯೋಕೆ ಕೊಡಬೇಕು

ಜನಾರ್ಧನ : ನೀರು ಕೊಡೆ

ಸರೋಜ : ತಂದೆ ಇರ್ರಿ..

ಜನಾರ್ಧನ : ಏನಪ್ಪಾ ಧರಣೇಶಪ್ಪಾ ಆಗ್ಲೆ ಪುಸ್ತಕ ಇಡ್ಕೊಂಡ್ ಕೂತ್ಕೊಂಡ್ ಬಿಟ್ಯಾ, ಯಾವಾಗ್

Scanned with OKEN Scanner

ನೋಡಿದ್ರೂ ಓದೋದೇನಾ ನಿಂದು, ಅದೇನಪ್ಪಾ ಓದ್ತಿದ್ದೀಯಾ

ಸರೋಜ : (ಗಂಡನ ಕೈಗೆ ನೀರು ತಂದುಕೊಟ್ಟು) ಏನೋ ಓದ್ತಾ ಇದ್ದಾನೆ ಬಿಡ್ರಿ. ನಿಮಗ್ಯಾಕೆ ಓದೋ ಉಸಾಬರಿ. ನೀವೇನ್ ಓದ್‌ಬೇಕೇನ್ರೀ... ಆ ಮಗು ಓದೋಕ್ಕೆ ಬಿಡಲ್ಲಾ ಅಂತೀರಾ ? ಯಾವಾಗಲೂ ಅವನಿಗೆ ಕುಟುಕ್ತೀರಲ್ರೀ ?

ಧರಣೇಶ : ಅದೇ ಅಪ್ಪಾ... ನಮಗೆ ಸ್ವಾತಂತ್ರ್ಯ ತಂದುಕೊಟ್ಟ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಜೀವನ ಚರಿತ್ರೆ ಬಗ್ಗೆ ಓದ್ತಾ ಇದ್ದೀನಿ.

ಜನಾರ್ಧನ : ಓಹೋ ಗಾಂಧೀಜಿಯವರು... ಅದೇನ್ ಓದ್ತಾ ಇದ್ದೀಯಾ ಇಲ್ಲಿ ಒದ್ರು.

ಧರಣೇಶ : ಗಾಂಧೀಜಿಯವರ ಬಗ್ಗೆ ಓದ್ತಾ ಇದ್ದೆ. ಉಪ್ಪಿಗಾಗಿಯೂ ತೆರಿಗೆ ವಿಧಿಸಿದಾಗ ಬ್ರಿಟಿಷರ ವಿರುದ್ಧ ಉಪ್ಪಿನ ಸತ್ಯಾಗ್ರಹ ಮಾಡಿದರು. 21 ದಿವಸ ಉಪವಾಸ ನಡೆಸಿದ ಅವರದು ಎಂತಹ ಸದೃಢ ಮನಸ್ಸು. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟದ ಅವರ ದಿಟ್ಟತನಕ್ಕೆ ಅಹಿಂಸಾ ಹೋರಾಟಕ್ಕೆ ಬ್ರಿಟಿಷರೇ ಭಾರತ ಬಿಟ್ಟು ಓಡಿದರು ನೋಡಪ್ಪಾ...

ಜನಾರ್ಧನ್ : ಮಗನೇ ನಿನಗೆ ಮೂರು ದಿವ್ಸ ಅನ್ನ ನೀರು ಹಾಕದೆ ಉಪವಾಸ ಕೆಡ್ವಿದ್ರೆ ಬುದ್ಧಿ ಬರುತ್ತೆ.

ಧರಣೇಶ : ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹ 21 ದಿವಸಾನೆ ಮಾಡಿದ್ರು ನಾನು 3 ದಿವ್ಸ ಇರಲ್ವಾ ಬಿಡಪ್ಪಾ...

ಜನಾರ್ಧನ : ಇರ್ತೀಯಾ... ಇರ್ತೀಯಾ... (ಎಂದು ದನ ಕಟ್ಟಲು ಹೊರಬಂದ)

ದೃಶ್ಯ – 12

ಶಾಲಾ ಆವರಣ

(ಆಗಸ್ಟ್ 15 ಸ್ವಾತಂತ್ರ್ಯ ದಿನಾಚರಣೆ ಆಚರಿಸಲು ಸ್ಟೇಜ್ ಅಲಂಕಾರ. ಒಂದು ಕಡೆ ಗಾಂಧೀಜಿ ಭಾವಚಿತ್ರ, ಒಂದು ಕಡೆ ಸ್ಟೇಜ್, ಒಂದು ಕಡೆ ಫ್ಲಾಗ್ ಹಾರಿಸಲು ತಯಾರಿ. ಮಕ್ಕಳೆಲ್ಲ ಬಿಳಿಯ ಸಮವಸ್ತ್ರಲ್ಲಿದ್ದಾರೆ. ಕೈಯಲ್ಲಿ ಬಾವುಟಗಳು, ಜೇಬಲ್ಲಿ ಬ್ಯಾಡ್ಜ್, ತಲೆಗೆ ಗಾಂಧಿ ಟೊಪ್ಪಿ)

ಹಾಡು : (ದೇಶ ಭಕ್ತಿಯ ಗೀತೆಗಳು)

(ರಾಷ್ಟ್ರಧ್ವಜ ಹಾರಾಟ, ಮಕ್ಕಳೆಲ್ಲಾ ಸ್ಟೇಜ್ ಮುಂದೆ ಕೂತಿರುವುದು, ಸ್ಟೇಜ್ ಮೇಲೆ ಗಣ್ಯರು ಕೂತಿರುತ್ತಾರೆ. ಗಣ್ಯರು ಮೋಹನಪ್ಪ (ಸಾಹುಕಾರ) ಜನಾರ್ಧನ, ಸುಬ್ಬಯ್ಯ, ಕೃಷ್ಣ, ಶಿಕ್ಷಣಾಧಿಕಾರಿ, ಮೇಷ್ಟ್ರು ಇನ್ನು ಪ್ರಮುಖರು)

ರಾಷ್ಟ್ರಧ್ವಜ ಹಾರಿದ ನಂತರ : ಜನ ಗಣ ಮನ ...

(ಮೇಷ್ಟ್ರಿಂದ ಸ್ವಾಗತ ಭಾಷಣ, ಗಣ್ಯರ ಕಿರು ಪರಿಚಯ, ಮಕ್ಕಳಿಂದ ಸ್ವಾತಂತ್ರ್ಯ ಹೋರಾಟಗಾರರ ವೇಷ, ಗಾಂಧೀಜಿ, ಸುಭಾಷಚಂದ್ರ ಬೋಸ್, ಭಗತ್ ಸಿಂಗ್ (ದರಣೇಶ್, ವೇದಾಂತ, ಹರಿ)

Scanned with OKEN Scanner

(ವೇಷಧಾರಿಗಳು ಒಬ್ಬೊಬ್ಬರೇ ಸ್ಟೇಜ್ ಮೇಲೆ ಬಂದು ತಮ್ಮ ಡೈಲಾಗ್ ಹೇಳುತ್ತಾರೆ)

ಭಗತ್ ಸಿಂಗ್ : ದೇಶದ ಉಳಿವಿಗಾಗಿ ಗಲ್ಲಿಗೇರಲು ಸಿದ್ಧರಾಗೋಣ

ಸುಭಾಷ್‌ಚಂದ್ರ ಬೋಸ್ : ನಿಮ್ಮ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ತಂದುಕೊಡುತ್ತೀನಿ.

ಗಾಂಧೀಜಿ : ಅಹಿಂಸೆಯಿಂದ ಏನು ಬೇಕಾದರೂ ಗೆಲ್ಲಬಹುದು, ಸತ್ಯವನ್ನು ನುಡಿಯಬೇಕು. ನ್ಯಾಯಕ್ಕಾಗಿ ಹೋರಾಡಬೇಕು, ಸರಳವಾಗಿ ಸಜ್ಜನಿಕೆಯಿಂದ ಬದುಕಬೇಕು

(ಮಕ್ಕಳೆಲ್ಲಾ ಚಪ್ಪಾಳೆ ತಟ್ಟುತ್ತಾರೆ. ಸಾವುಕಾರ ಮೋಹನಪ್ಪನ ಬದಲಿಗೆ ಅಧಿಕಾರಿಗೆ ಮೈಕ್)

ಅಧಿಕಾರಿ : ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಮಹನೀಯರು ಹೋರಾಡಿದ್ದಾರೆ. ಅವರ ಆದರ್ಶಗಳನ್ನು ಪಾಲಿಸಿಕೊಂಡು ಮುನ್ನಡೆಯಿರಿ. ಈ ಸ್ವಾತಂತ್ರ್ಯವನ್ನು ನಾವೆಲ್ಲಾ ಉಳಿಸೋಣ... ಬೆಳೆಸೋಣ... ಅದಕ್ಕಾಗಿ ನೀವೆಲ್ಲಾ ಕೈ ಜೋಡಿಸಿ.

ಮೇಷ್ಟ್ರು : (ಮೈಕ್ ಹಿಡಿದುಕೊಂಡು) ಮಕ್ಕಳೇ ನೀವು ಈ ವೇಷ ತೊಟ್ಟಿರುವುದು ಕೃತಕವಷ್ಟೆ. ನೀವು ಈ ವೇಷಕ್ಕೆ ಬೆಲೆ ಕೊಡಬೇಕಾದರೆ ಅದೇ ರೀತಿ ಬದುಕಿ ಬಾಳಬೇಕು. ಸತ್ಯ, ಸ್ವಾತಂತ್ರ್ಯ, ಸಮಾನತೆ, ಎಲ್ಲರ ಹಕ್ಕು, ಅದಕ್ಕಾಗಿ ಹೋರಾಡಿದ ಪ್ರಾಣ ನೀಡಿದ ಗಣ್ಯರ ವೇಷ ತೊಟ್ಟು ಎಲ್ಲರಿಗೂ ನೀವು ಅದರ್ಶವಾಗಿದ್ದೀರಿ. ಗಾಂಧೀಜಿ ಹೇಳಿದಂತೆ ಕುಡಿತದಿಂದ ಆಗುವ ದುಷ್ಪರಿಣಾಮದ ಬಗ್ಗೆ ಒಂದೆರಡು ಮಾತು ಹೇಳ್ತೀನಿ. ನೀವು ಇದನ್ನು ಸದಾ

ಕಾಲ ನೆನಪಿಟ್ಟುಕೊಳ್ಳಬೇಕು. ಕುಡಿತದಿಂದ ಸಂಸಾರ ಹಾಳಾಗುತ್ತೆ. ಮನಸ್ಸುಗಳು ಒಡೆದು ಹೋಗುತ್ತೆ. ಬಡತನ ಕಾಡುತ್ತೆ, ಆರೋಗ್ಯ ಹಾಳಾಗುತ್ತೆ, ನಗು ಮಾಯವಾಗುತ್ತೆ, ಕುಡಿತಕ್ಕೆ ಯಾರು ದಾಸರಾಗಬಾರದು. ಸ್ವಾಮಿ ವಿವೇಕಾನಂದ, ಬಾಲಗಂಗಾಧರನಾಥ ತಿಲಕ್, ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮೀಬಾಯಿ, ಶಿವಾಜಿ, ಚಂದ್ರಶೇಖರ್ ಅಜಾದ್ ರಂತಹ ಸ್ವಾತಂತ್ರ್ಯ ಹೋರಾಟಗಾರರ ತತ್ವಗಳನ್ನು ರೂಢಿಸಿಕೊಳ್ಳಿ, ತಪ್ಪು ನಡೆದಾಗ ಖಂಡಿಸಿ, ದಂಡಿಸುವ ಎದೆಗಾರಿಕೆ ನಿಮ್ಮದಾಗಿರಲಿ ಮಕ್ಕಳೇ. ಎಲ್ಲರಿಗೂ ಒಳ್ಳೆಯದಾಗಲಿ, ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು. ಎಲ್ಲರೂ ಸಿಹಿ ಪಡೆದುಕೊಂಡು ಹೋಗಿ. ಜೈ ಹಿಂದ್.(ಮಕ್ಕಳೆಲ್ಲಾ ಹೊರಡುವರು)

**ನಮ್ಮ ನಾಡು
ಉಸಿರಾಡುತ್ತಿರುವುದು
ಅದರ ಹಳ್ಳಿಗಳಲ್ಲಿ ಹಳ್ಳಿಗರಿಗೆ
ಮಾರಕವಾಗಿರುವ
ಕುಡಿತ ಎಂಬ
ಮಹಾಮಾರಿಯನ್ನು
ಕೊಲ್ಲೋಣ**



Scanned with OKEN Scanner

ದೃಶ್ಯ –13

<u>ವಿಲನ್ ಮೋಹನಪ್ಪನ ಮನೆ (ರಾತ್ರಿ ಸಮಯ)</u>

(ವಿಲನ್ ಮೋಹನಪ್ಪನ ಮನೆಯ ಮುಂದೆ ತೂಗುವ ಚೇರಲ್ಲಿ ಕೂತು ಕೋಪ ಮತ್ತು ಅಸಮಾಧಾನದ ಮುಖದಲ್ಲಿ ಸ್ವತ: ಮಾತಾಡಿಕೊಳ್ಳುತ್ತಾ)

ಮೋಹನಪ್ಪ : *(ಸ್ವಗತ)* ಗಾಂಧೀಜಿ ತತ್ವ ಅಂತೆ ಅಂಬೇಡ್ಕರ್ ಸಂವಿಧಾನ ಅಂತೆ, ವಿಶ್ವೇಶ್ವರಯ್ಯನಗರ ಸಾಧನೆ ತರ ಇವರು ಬದುಕ್ತಾರಂತೆ, ಸಾಧನೆ ಮಾಡ್ತಾರಂತೆ. ಇನ್ನೂ ಎಷ್ಟು ದಿನ ? (ತುಸು ಮಂದಹಾಸ) ಇವರೆಲ್ಲಾ ಮುಂದೊಂದು ದಿನ ಮೋಹನಪ್ಪನ ತಾವ್ ಬರ್ಲೇಬೇಕು... ಬಂದು ಕೈಕಟ್ಟಿ ನಿಂತ್ಕೊಳ್ಳಲೇಬೇಕು.

ಮೋಹನಪ್ಪ : *(ಪ್ರಕಾಶ) (ನಾಲ್ಕು ಜನರ ಮುಂದೆ ಮತ್ತೆ ಮಾತು ಮುಂದುವರೆಸಿ)* ಮೇಷ್ಟ್ರು ಇವತ್ತು ನನಗೆ ತುಂಬಾ ಅವಮಾನ ಮಾಡಿದ್ದಾನೆ. ಮಾಡ್ಲಿ ಮಾಡ್ಲಿ ಅವನು ಮಲಗಿರೋ ಈ ಸರ್ಪನಾ ಕುಕ್ಕವ್ನೆ. ಹೇಗೆ ಸಮಯ ಬಂದಾಗ ಕುಟುಕ್ತೀನಿ ಅಂತ ಗೊತ್ತಿಲ್ಲ. ನಾನ್ಯಾರು,

Scanned with OKEN Scanner

ಹಣ ಇದೆ, ಅಧಿಕಾರದ ಬಲ ಇದೆ, ಜೊತೆಗೆ ಎಂ.ಎಲ್.ಎ. ಸ್ನೇಹ ಇದೆ. ಇಷ್ಟೆಲ್ಲಾ ಇರೊ ನನಗೆ ಅವಮಾನ ಮಾಡಿದ್ದಾನ ಆ ಮೇಷ್ಟ್ರು ಅವನಿಗೆ ತಕ್ಕ ಪಾಠ ಕಲಿಸ್ತೀನಿ ನೋಡ್ರೋ...

ಬಸವ : ಹೌದ್ ಬುದ್ಧಿ... ಆ ಮೇಷ್ಟ್ರು ಬಂದ ಮೇಲೆ ನಮ್ಮಿಂದ ವಾತಾವರಣ ಬದಲಾಗ ಕೂತ್ತೈತೆ. ಅವನ ಎತ್ತಂಗಡಿ ಮಾಡಿಸ್ಬೇಕು ಬುದ್ದಿ.

ಸಾಹುಕಾರ : ಅವನ ಎತ್ತಂಗಡಿ ಮಾಡಿಸೋದ್ಕಿಂತ ಅವನ್ನ ಏನಾದರೂ ತಪ್ಪಲ್ಲಿ ಸಿಕ್ಕಿಸಿ ನನ್ನ ಮುಂದೆ ತಲೆ ತಗ್ಗಿಸಿ ನಿಂತು ಕ್ಷಮಿಸಿ ಸಾಹುಕಾರ್ರೇ । ಕ್ಷಮಿಸಿ ಸಾಹುಕಾರ್ರೇ ॥ ಅಂತ ಕಾಲಿಗೆ ಬೀಳಂಗೆ ಮಾಡ್ಬೇಕು. ಆಗ ಅವನ ಜುಟ್ಟು ನನ್ನ ಕೈಯಲ್ಲಿರುತ್ತೆ. ನಾನು ಪಾಠ ಮಾಡ್ದಂಗೆ ಅವನು ಮಕ್ಕಳಿಗೆ ಮಾಡ್ಬೇಕು. ಹೋಗೋ ಬಸವ ಹೋಗಿ ಆ ಮೇಷ್ಟ್ರುನ ಕರ್ಕೊಂಡ್ ಬಾ.

ಬಸವ : ಆಯ್ತು ಬುದ್ದಿ

(ಅನ್ನುತ್ತಾ ಬಸವ ಹೊರಡುವನು)

(ರಾತ್ರಿ ದೃಶ್ಯವೇ ಮುಂದುವರೆಯುತ್ತಾ)

Scanned with OKEN Scanner

ಸಾಹುಕಾರ ಮೋಹನಪ್ಪನ ಮನೆ (ರಾತ್ರಿ ಸಮಯ)

(ಸಾಹುಕಾರ ಮೋಹನಪ್ಪ ಕೂತು ಕುಡಿಯುತ್ತಿರುತ್ತಾನೆ. ಒಬ್ಬ ಆಳು ಕಾಲು ಒತ್ತುತ್ತಿರುತ್ತಾನೆ. ಮತ್ತೊಬ್ಬ ನಿಂತಿರ್ತಾನೆ. ಮೇಷ್ಟ್ರು ಎಂಟ್ರಿ ಆಗುತ್ತಾರೆ.)

ಮೋಹನಪ್ಪ : ಬನ್ನಿ ಮೇಷ್ಟ್ರೇ ಬನ್ನಿ. ನಿಮ್ಮನ್ನ ಸ್ವಲ್ಪ ವಿಚಾರಿಸಿಕೊಳ್ಳೋದೈತೆ.

ಮೇಷ್ಟ್ರು : ಸಾಹುಕಾರ್ರೇ... ಇಷ್ಟೊತ್ತಿನಾಗೆ ತುರ್ತಾಗಿ ಬರಲು ಹೇಳಿದಿರಲ್ಲಾ. ಈಗ ನೋಡಿದರೆ ವಿಚಾರಿಸಿಕೊಳ್ಳಬೇಕು ಅಂತೀರಾ. ಅಂತಹ ವಿಷಯ ಏನಿದೆ ?

ಮೋಹನಪ್ಪ : ನಾನು ಯಾರು ಮೇಷ್ಟ್ರೇ ? ಈ ಊರಿಗಷ್ಟೇ ದೊಡ್ಡ ಸಾಹುಕಾರ. ಈ ಊರು ಅಷ್ಟೇ ಅಲ್ಲ, ಸುತ್ತಮುತ್ತಲ ಹತ್ತಾರು ಹಳ್ಳಿಗಳು ಗೌರವ ಕೊಡ್ತಾವೆ. ಅಂತಾದ್ದರಲ್ಲಿ ನನಗೆ ನೀವು ಇವತ್ತು ತುಂಬಾ ಅವಮಾನ ಮಾಡಿಬಿಟ್ರಲ್ಲಾ. ಇಲ್ಲಿ ಇಲ್ಲಿ ನಿಮ್ಮದು ಜಾಸ್ತಿ ಆಗೈತೆ.

ಮೇಷ್ಟ್ರು : ಅವಮಾನನಾ ? ನಾವು ಅಂತಹದ್ದೇನು ಮಾಡಿದ್ದೀವಿ ಸಾಹುಕಾರ್ರೇ...

ಮೋಹನಪ್ಪ : ತಗಳ್ರಪ್ಪ... ಮೇಷ್ಟ್ರುಗೆ ಏನು ಗೊತ್ತೆ ಇಲ್ವಂತೆ (ನಗ್ತಾನೆ. ಆಳುಗಳು ನಗ್ತಾರೆ.) ಅಲ್ಲಾ ಮೇಷ್ಟ್ರೇ... ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮಕ್ಕೆ ಕರ್ದಬಿಟ್ ನನ್ನ ಬರೀ ಛೇರಲ್ಲಿ ಮಾತ್ರ ಕೂರಿಸಿದ್ರಾ... ಧ್ವಜಾನೂ ಎಳೆಸದೆ ಮಾತಾಡಲು ಅವಕಾಶನೂ ಕೊಡ್ದೆ ಸಿಹಿ ಹಂಚಂಗೆ

Scanned with OKEN Scanner

ಮಾಡ್ದೆ. ಎಲ್ಲಾ ನೀವು ಮತ್ತು ಮಕ್ಕಳೇ ಎಲ್ಲಾ ಮಾಡ್ಬಿಟ್ರಿ. ಈ ಉಸಾಬರಿಗೆ ನನ್ ಯಾಕೆ ಕರೆದ್ರಿ. ಇನ್ನೊಂದ್ ದಪಾ ಈ ರೀತಿ ಆದ್ರೆ ಇರಲ್ಲಾ ಗೊತ್ತಾಯ್ತಾ. ನಿಮ್ಮತ್ರ ಒಂದು ಮಾತು ನೇರವಾಗಿ ಹೇಳ್ತೀನಿ ಮೇಷ್ಟ್ರೆ. ನಮ್ಮ ಎಂ.ಎಲ್.ಎ. ತವ ಎಲ್ಲಾ ಮಾತುಕತೆ ಆಗ್ಯೆತೆ. ಊರ್‍ಗೆ ಹೊಸ ಸಾರಾಯಿ ಅಂಗಡಿ ತರ್ತೀನಿ. ಅದರ ವಿರುದ್ಧ ನೀವೇನಾದರೂ ಧ್ವನಿ ಎತ್ತಿದರೆ ನಿಮ್ಮನ್ನ ಧಮನ ಮಾಡ್ತೀನಿ. ನಿಮ್ಮ ಪುಸ್ತಕದ ಬದನೆಕಾಯಿ ಏನಿದೆಯೊ ಅದನ್ನ ಮಾತ್ರ ಬೊಗಳ್‌ಕೊಂಡು ಕೆಲಸ ಆಯ್ತು ಮನೆ ಸೇರ್‍ಕೊಂಡ್ ಆರಾಮಾಗಿ ಇರೋದ್ ಕಲೀರಿ. ಬಾಲ ಬಿಚ್ಚಿದ್ರೋ ಕತೆ ಮುಗೀತು. ಗೊತ್ತಾಯ್ತಾ ಮೇಷ್ಟ್ರೇ.

ಮೇಷ್ಟ್ರು : ನಿನ್ನ ಗೊಡ್ಡು ಬೆದರಿಕೆಗೆಲ್ಲಾ ಹೆದರ್‍ಕೊಳ್ಳಲ್ಲ. ಊರ ಸಾಹುಕಾರ... ನನಗಿಂತ ಹಿರಿಯರು ಆಳುಗಳನ್ನು ಕಳಿಸಿದ್ದೀರಿ. ಏನೋ ವಿಷಯ ಇರಬೇಕು ಅಂತ ನಿಮ್ಮ ಮೇಲೆ ಗೌರವ ಕೊಟ್ಟು ನಾನು ಬರುವಂತಿರದಿದ್ದರೂ ಬಂದೆ. ಇಂತಹ ವಿಷಯ ಅಂತ ಗೊತ್ತಿದ್ದರೆ ನಾನು ಖಂಡಿತ ಬರ್ತಿರಲಿಲ್ಲ. ನೀನು ಊರಿಗೆ ಸಾಹುಕಾರ ಆಗಿರಬಹುದು, ನಿನ್ನ ಬಳಿ ಹಣ ಇರಬಹುದು. ಹಾಗಂತ ಸಮಾಜ ವಿರೋಧಿ ಕೃತ್ಯಗಳನ್ನು ಮಾಡುವುದು, ಏನ್ ಬೇಕಾದರೂ ಮಾಡಬಹುದು ಅಂತ ತಿಳ್ಕೋಬೇಡಿ. ನೀವು ನಿಮ್ಮ ಮುಂದೆ ಕೈಕಟ್ಟಿ ನಿಲ್ಲುವ, ಕಾಲು ಒತ್ತುವ ನಿಮ್ಮ ಗುಲಾಮರಿಗೇಳಿ. ನಾನು ವಿದ್ಯಾವಂತ ಹೆಚ್ಚಾಗಿ ಪ್ರಜ್ಞಾವಂತ, ಆದರ್ಶನೀಯ ವ್ಯಕ್ತಿತ್ವ ನನ್ನದು. ನಮ್ಮ ತಂದೆಯವರು ಒಬ್ಬ ದೇಶಭಕ್ತರು. ಸ್ವಾತಂತ್ರ್ಯ

ಹೋರಾಟಗಾರರು. ಅವರ ಗುಣಗಳೂ ನನ್ನಲ್ಲೂ ಇದೆ. ನಿಮ್ಮಂತಹ ಗೋಸುಂಬೆಯವರ ದರ್ಪದ ವಿರುದ್ಧ ಕೆಚ್ಚೆದೆಯಲ್ಲಿ ಹೋರಾಟ ಮಾಡ್ತೀನಿ ವಿನ: ಗೊಡ್ಡು ಬೆದರಿಕೆ, ಆಮಿಷಕ್ಕೆ ನನ್ನ ನೈತಿಕತೆ ಅಡವಿರಿಸಲ್ಲ. ಇದನ್ನು ತಿಳ್ಕೊಳ್ಳಿ. ನೀವು ಸಾರಾಯಿ ಅಂಗಡಿ ತನ್ನಿ. ನಾನು ಅದನ್ನ ಹೇಗೆ ಎತ್ತಂಗಡಿ ಮಾಡಿಸ್ತೀವಿ ನೋಡಿ.

(ಎಂದು ಹೇಳಿ ಹೊರಟು ಬಿಡುವನು)

ಮೋಹನಪ್ಪ : (ಮೇಷ್ಟ್ರು ಹೋಗುವುದನ್ನು ದುರುಗುಟ್ಟಿ ನೋಡುತ್ತಾ) ದುರಂಹಂಕಾರಿ... ಜಾಸ್ತಿ ಆಯ್ತು. ಬಸವ... ಮೇಷ್ಟ್ರುದು ಜಾಸ್ತಿ ಆಯ್ತು. ನನ್ನ ಮೇಲೆ ಸವಾರಿ ಮಾಡ್ತಾನಾ ಮಾಡಲಿ. ನಾನು ಎಲ್ಲೋ ಯಾಮಾರ್ತಿದ್ದೀನಾ. ಮೇಷ್ಟ್ರು ಊರಿಗೆ ಬಂದಾಗಲೇ ಮಟ್ಟ ಹಾಕಬೇಕಿತ್ತು. ಇವನ್ನ ಬೆಳೆಯಲು ಬಿಟ್ಟಿದ್ದೇ ತಪ್ಪು. ಇವತ್ತು ನನಗೆ ಅವಾಜ್ ಹಾಕುವ ಹಂತಕ್ಕೆ ಬೆಳೆದಿದ್ದಾನೆ. ಇವನಿಗೆ ಮಾಡ್ಲೇಬೇಕು ಏನಾದ್ರೂ.

(ಮೊಬೈಲ್ ಫೋನ್ ರಿಂಗ್ ಆಗುತ್ತದೆ.)

ಆಳು : ಬುದ್ದೀ ಬುದ್ದೀ... ಯಾವುದೋ ಫೋನ್ ಬಂತು ನೋಡಿ ಬುದ್ದೀ.

(ಮೋಹನಪ್ಪಾ ಮೊಬೈಲ್ ಎತ್ತಿಕೊಂಡು ನೋಡಿ)

ಮೋಹನಪ್ಪ : ಓಹೋ ನಮ್ಮ ಎಂ.ಎಲ್.ಎ. ಸಾಹೇಬರದು ಫೋನ್ ಕಣ್ರೋ...(ಫೋನ್ ರಿಸೀವ್ ಮಾಡಿ) ಅಣ್ಣಾ ನಮಸ್ಕಾರ ಹೇಳಣ್ಣಾ...

(ಫೋನ್ ವಾಯ್ಸ್ ಮಾತಾಡುತ್ತಾ)

ಎಂ.ಎಲ್.ಎ. : ಮೋಹನಪ್ಪಾ... ನೀನು ಸಾರಾಯಿ ಅಂಗಡಿ ತೆರೆಯಲು ಎಲ್ಲಾ ರೆಡಿಯಾಗುತ್ತೆ. ನಾಳೆ ಬಂದು ನನ್ನ ಕಾಣು. ನೀನು ಕೊಟ್ಟಿರೋದು ಸಾಲಲ್ಲ. ಬರುವಾಗ ಇನ್ನೂ ಸ್ವಲ್ಪ ಹಣ ತಂದ್‌ಬಿಡು. ಲೈಸೆನ್ಸ್ ತೊಗೊಂಡೋಗು. ಮರೀಬೇಡಪ್ಪಾ... ಅದೇ ಸ್ವಲ್ಪ ಅಂದ್ರೆ ಗೊತ್ತಲ್ಲ. ಜಾಸ್ತೀನೆ ತೊಗೊಂಡ್ ಬಾ...

ಸಾಹುಕಾರ : (*ಖುಷಿಯಾಗಿ*) ಆಯ್ತು ಅಣ್ಣಾ ಆಯ್ತು ಅಣ್ಣಾ ನಾಳೇನೇ ಬರ್ತೀನಿ. ನಿಮಗೂ ತರ್ತೀನಿ ಹೆದರಬೇಡ್ರಣ್ಣೋ (ಫೋನ್ ಕಟ್ ಮಾಡುತ್ತಾ) ಸಾರಾಯಿ ಅಂಗಡಿ ತೆರೆಯಲು ಲೈಸೆನ್ಸ್ ಬಂದೇ ಬಿಡ್ತು. ಇನ್ನು ಅಂಗಡಿ ತೆರೆಯದೆ ಊರವರಿಗೆಲ್ಲಾ ಕಂಠಪೂರ್ತಿ ಸಾರಾಯಿ ಕುಡಿಸಿ ಚೆನ್ನಾಗಿ ಮಲಗಿಸೋದೆ..... ಹಹ....ಹಹ...ಹಹಹಾ... (ನಗುತ್ತಾನೆ)

(ದೃಶ್ಯ ಮುಕ್ತಾಯ)

Scanned with OKEN Scanner

ದೃಶ್ಯ – 15

ಶಾಲೆ ಆವರಣ (ಬೆಳಗಿನ ಸಮಯ)

(ಮಕ್ಕಳೆಲ್ಲಾ ಬಂದು ತರಲೆ ಆಟದಲ್ಲಿದ್ದಾರೆ. ಮೇಷ್ಟ್ರು ಬಂದಿಲ್ಲ. ಆಗ ಅಲ್ಲಿಗೆ ಲಕ್ಷ್ಮಿ ಬರ್ತಾಳೆ. ಆಟವಾಡುವ ಮಕ್ಕಳನ್ನೆಲ್ಲಾ ಕರೆದು–)

ಲಕ್ಷ್ಮಿ : ನಾನು ಮೇಷ್ಟ್ರು ಮನೆ ಹತ್ರ ಹೋಗಿದ್ದೆ. ಅವರ್ಗೆ ಜ್ವರ ಬಂದೈತೆ ಶಾಲಿಗೆ ಬರಕ್ಕಾಗಲ್ವಂತೆ. ಆಸ್ಪತ್ರೆಗೆ ಹೋಗ್ತಾರಂತೆ. ಅದುಕ್ಕೆ ಶಾಲಿ ಹತ್ರ ಹೋಗಿ ಮಕ್ಕಳ್ಗೆಲ್ಲಾ ರಜಾ ಅಂತ ಹೇಳು ಅಂದ್ರು. ಇವತ್ತು ರಜಾ. ಎಲ್ರೂ ನಿಮ್ ನಿಮ್ ಮನೆಗಳಿಗೆ ಹೋಗಿ...

ಮಕ್ಕಳು : ಓ...ಓ...ಓಹೋ... ... (ಎಂದು ಕೂಗುತ್ತಾ ಖುಷಿಯಾಗಿ ಓಡ್ತಾರೆ)

(ಧರಣೇಶ್, ಹರಿ, ವೇದಾಂತ ಈ ಮೂರು ಮಕ್ಕಳು ಜೊತೆಗೆ ಧರಣೇಶ ಮತ್ತು ವೇದಾಂತನ ತಂಗಿಯರು ಅಲ್ಲೇ ಇದ್ದಾರೆ. ಈ ಮೂರು ಮಕ್ಕಳು ಮುಖ ಮುಖ ನೋಡ್ಕೋತಾರೆ)

ಧರಣೇಶ್ : ಮೇಷ್ಟ್ರಿಗೆ ಹುಷಾರಿಲ್ವಂತೆ. ಮನೆಗೆ ಹೋಗುವ ಬದ್ಲು ಮೇಷ್ಟ್ರ ಮನೆಗೆ ಹೋಗಿ ಅವರ ಆರೋಗ್ಯ ಹೆಂಗೈತೆ ವಿಚಾರಿಸ್ಕೊಂಡ್ ಹೋಗೋಣ ಬನ್ನಿ...

Scanned with OKEN Scanner

ವೇದಾಂತ : ಆಯ್ತು ಹೋಗೋಣ

ಹರಿ : ಅಯ್ಯೋ ಪಾಪ... ಮೇಷ್ಟ್ರುಗೆ ಜ್ವರ

ಧರಣೇಶ್ : ಬನ್ನಿ ಬನ್ನಿ ಹೋಗೋಣ...

(ಐದು ಮಕ್ಕಳೂ ಮನೇಗೆ ಹೋಗುತ್ತಾರೆ)

ಮೇಷ್ಟ್ರು ಮನೆ (ಬೆಳಗಿನ ಸಮಯ)

(ಮೇಷ್ಟ್ರು ಮನೆಯೊಳಕ್ಕೆ ಐದೂ ಜನ ಮಕ್ಕಳು ಎಂಟ್ರಿ ಕೊಡುತ್ತಾ ಒಕ್ಕೊರಲಿನಿಂದ ಕೂಗುತ್ತಾರೆ)

ಐದೂ ಮಕ್ಕಳು : ಮೇಷ್ಟ್ರೇ... ಮೇಷ್ಟ್ರೇ...

(ಮೇಷ್ಟ್ರು ಮಲಗಿದ್ದಾರೆ. ಸುತ್ತಲೂ ಬಂದು ಮಕ್ಕಳು ನಿಲ್ಲುತ್ತಾರೆ)

ಮೇಷ್ಟ್ರು : (ಜ್ವರದ ಬಳಲಿಕೆಯಲ್ಲಿ ಮಾತಾಡುತ್ತಾ) ಲಕ್ಷ್ಮಿ ಬಂದು ರಜಾ ಅಂತ ಹೇಳಿದ್ಲಾ... ಎಲ್ಲಾ ಮಕ್ಳೂ ಮನೆಗೆ ಹೋದ್ರಾ... ನೀವು ಹೋಗಕ್ಕಿಲ್ವಾ ಇಲ್ಲಿಗೇಕೆ ಬಂದ್ರಪ್ಪಾ...

ಮಕ್ಕಳು : ನಿಮ್ಮನ್ನು ನೋಡ್ಕೊಂಡು ಮನೇಗೆ ಹೋಗೋಣ ಅಂತ ಬಂದ್ವಿ.

ಧರಣೇಶ್ : ಮೇಷ್ಟ್ರೇ ಜ್ವರ ಯಾಕ್ ಬಂತು... ನಿದ್ದೆಗೆಟ್ಟಿದ್ರಾ ಮೇಷ್ಟ್ರೇ....

ಮೇಷ್ಟ್ರು : ಹೌದು ಮಗು... ರಾತ್ರಿ ಸಾಹುಕಾರ ಅದೇನೋ ಮಾತಾಡ್ಬೇಕು ಅಂತ ಕರೆದಿದ್ದ. ಅಲ್ಲಿಗೆ

ಹೋಗಿದ್ದೆ. ಅದರ ಜೊತೆಗೆ ಅದೇನೋ ಹುಳ ಬಿಟ್ಟ. ಅದರಿಂದ ಚಿಂತೆ ಹತ್ಕೊಂಡ್ ರಾತ್ರಿಯೆಲ್ಲಾ ನಿದ್ದೆ ಇಲ್ದೆ ಜ್ವರ ಬಂತು.

ವೇದಾಂತ : ಅದೇನು ಹೇಳ್ದ ಮೇಷ್ಟ್ರೇ ಆ ಸಾಹುಕಾರ...

ಮೇಷ್ಟ್ರು : ಈ ಊರಿನ ಎಲ್ಲಾ ಜನರನ್ನ ತನ್ನ ಕಪಿಮುಷ್ಠಿಯಲ್ಲಿಟ್ಟುಕೊಂಡು ತನ್ನ ತಾಳಕ್ಕೆ ಕುಣಿಸೋ ಮಾರಕ ರೋಗ ತರ್ತಾನೆ. ಇದನ್ನು ತಡೆಗಟ್ಟುವ ಬಗ್ಗೆ ಏನೆಲ್ಲಾ ರೂಪಿಸಬಹುದು ಅಂತ ಯೋಚನೆಯಲ್ಲಿದ್ದೆ. ಮಕ್ಕಳೇ ನೀವು ಒಳ್ಳೆಯದು ಕೆಟ್ಟದ್ದು ಯಾವುದು ಅಂತ ತಿಳ್ಕೋಬೇಕು, ನಮ್ಮ ಹಿರಿಯರು ದಾರಿ ತಪ್ಪದಂತೆ ನೋಡೋಬೇಕು. ಬೇಡದ್ದನ್ನ ತಿರಸ್ಕರಿಸಬೇಕು. ಆದರ್ಶವಾಗಿ ಬಾಳಬೇಕು ಯಾವುದೇ ಆಸೆ ಆಕಾಂಕ್ಷೆಗಳಿಗೆ ಬಲಿಪಶುವಾಗಬಾರದು ಮದ್ಯಪಾನ ಧೂಮಪಾನ ಕ್ಷಣಿಕ ಸುಖ ಇದರಿಂದ ನೆಮ್ಮದಿ ಹಣ ಎಲ್ಲಾ ಹಾಳು. ಇವುಗಳಿಂದ ದೂರ ಇರಬೇಕು. ನೀವು ಇದರ ವಿರುದ್ಧ ಹೋರಾಟ ಮಾಡಲು ಸಜ್ಜಾಗಬೇಕು. ಮುಂದಿನ ದಿನಗಳಲ್ಲಿ ನಮ್ಮೂರಿಗೆ ಸಾಹುಕಾರ ಮೋಹನಪ್ಪನ ತರಹ ಹರಡುವ ಮಾರಕ ರೋಗಕ್ಕೆ ನೀವೇ ಮದ್ದುಗಳು ಮುದ್ದು ಮಕ್ಕಳೇ. ಈಗ ಹೊರಡಿ ನಿಮ್ಮ ಮನೆಯವರು ಗಾಬರಿಯಾಗ್ತಾರೆ.

ಮಕ್ಕಳು : ಸರಿ ಮೇಷ್ಟ್ರೇ ಹೊರಡ್ತೀವಿ. ನಾಳೆ ಶಾಲೆ ಇದೆಯಾ...

ಮೇಷ್ಟ್ರು : ಇದೆ ಇದೆ... ನಾಳೆ ಬನ್ನಿ. ಎಲ್ಲರಿಗೂ ಹೇಳಿ.

(ಮಕ್ಕಳು ಮೇಷ್ಟ್ರಿಗೆ ವಂದಿಸುತ್ತಾ ಹೊರಡುತ್ತಾರೆ)

ದೃಶ್ಯ – 16

ತೋಟದ ದೃಶ್ಯ

(ಇದೇ ದೃಶ್ಯದಲ್ಲಿ ಮುಂದುವರೆಯುತ್ತಾ, ಶಾಲೆಗೆ ರಜೆ ಇರೋದರಿಂದ ಅವರಪ್ಪ ಅಮ್ಮಂದಿರ ಜೊತೆ ತೋಟ, ಗದ್ದೆ, ಹೊಲಕ್ಕೆ ಮೂರು ಮಕ್ಕಳು ಹೋಗಿರುವ ದೃಶ್ಯ.)

(ತೋಟದ ದೃಶ್ಯ, ಧರಣೀಶನ ಅಪ್ಪ ಜನಾರ್ಧನ, ಅಮ್ಮ ಸರೋಜ ತೋಟದಲ್ಲಿ ಕೆಲಸ ಮಾಡುತ್ತಿದ್ದಾರೆ. ತಂಗಿ ಜೊತೆ ಧರಣೀಶ ಬರುತ್ತಾನೆ)

ಸರೋಜ : ಯಾರಪ್ಪಾ... ಬಂದ್ರಾ... ಶಾಲೆಗೆ ರಜಾನಾ ?

ಧರಣೀಶ : ಹೌದಮ್ಮ... ಮೇಷ್ಟ್ರಿಗೆ ಜ್ವರ ಬಂದೈತೆ. ಶಾಲೆಗೆ ರಜಾ.

ಜನಾರ್ಧನ : ಮೇಷ್ಟ್ರಿಗೆ ಜ್ವರ ಬಂದಿದ್ದೇ ಒಳ್ಳೆದಾಯ್ತು. ಬಾ ಬಾಳೆಗಿಡಕ್ಕೆ ನೀರು ಕಟ್ಟ. ಅಷ್ಟೊತ್ತಿಗೆ ನಾನು ಒಂದ್ ಧಮ್ ಹೊಡೀತೀನಿ.

ಧರಣೀಶ : ಏನಪ್ಪಾ... ಮಕ್ಕಳ ಮುಂದೆಯೇ ಧಮ್ ಹೊಡೀತೀನಿ ಅಂತೀಯಲ್ಲಪ್ಪಾ... ಅಪ್ಪಾ ನಮ್ ಮೇಷ್ಟ್ರು ಹೇಳ್ಕೊಟ್ಟವರೇ... ಮಧ್ಯಪಾನ, ಧೂಮಪಾನ ಆರೋಗ್ಯನಾ ಹಾಳು ಮಾಡ್ತಾವಂತೆ, ಹಣ ವ್ಯಯ ಆಗ್ತಾವಂತೆ, ಬದುಕನ್ನು ಬರ್ಬಾದ್ ಮಾಡ್ತಾವಂತೆ, ಕುಟುಂಬಗಳಲ್ಲಿ ಕಣ್ಣೀರು

Scanned with OKEN Scanner

ತರಿಸ್ತದಂತೆ, ಸುಡುಗಾಡಿಗೆ ಕರೆದೊಯ್ಯುತ್ತಂತೆ. ಇಂತಹ ಕೆಟ್ಟ ಚಟಕ್ಕೆ ದಾಸನಾಗಿ ನೀನು ಹಾಳಗಿ ಹೋಗ್ತೀಯಲ್ಲಪ್ಪಾ... ಅಲ್ವೇನೇ ಪಾರು, ಇದೆಲ್ಲಾ ಮೇಷ್ಟ್ರು ಹೇಳಿಲ್ವಾ ನಮ್ಗೆ.

ಪಾರು : ಹೌದಪ್ಪಾ (*ಅಣ್ಣನ ಸಂಭಾಷಣೆಗೆ ಪೂರಕವಾಗಿ*) ಇದೆಲ್ಲಾ ಕೆಟ್ಟದ್ದಂತೆ.

ಜನಾರ್ಧನ : (*ರೇಗಿದ ಧ್ವನಿಯಲ್ಲಿ*) ಪ್ರಪಂಚದಲ್ಲಿ ಎಲ್ಲಾ ಕೆಟ್ಟದ್ದು ಆದ್ರೆ ಒಳ್ಳೇದು ಯಾವುದಂತೋ...

ಧರಣೀಶ : ಒಳ್ಳೆಯದು ಯಾವುದು ಎಂದರೆ ಪರಸ್ಪರ ಸಹಾಯ ಮಾಡೋದು, ಅನ್ಯಾಯ ಅದಾಗ ಪ್ರತಿಭಟಿಸುವುದು, ಹೋರಾಟ ಮಾಡುವುದು, ಕೆಟ್ಟ ಚಟಗಳಿಂದ ದೂರ ಇರೋದು, ಬೆವರಿಳಿಸಿ ದುಡಿಯೋದು. ಪ್ರೀತಿ–ಸ್ನೇಹದಿಂದ ಬಾಳೋದು.

ಜನಾರ್ಧನ : (*ವ್ಯಂಗ್ಯವಾಗಿ*) ಓಹೋಹೋ ಎಷ್ಟೆಲ್ಲಾ ತಿಳ್ಕೊಂಡಿದ್ದೀರಾ ನನ್ ಮಕ್ಕಾ... ಮೂರು ದಿವ್ಸ ಉಪ್ವಾಸ ಕೆಡ್ವಿದ್ರೆ ಹೊಟ್ಟೆ ಚುರ್ ಅಂತದೆ. ಆಗ ಯಾವ ಹೋರಾಟನೂ ಬರಲ್ಲ. ಊಟಕ್ಕಾಗಿ ಕಿರುಚಾಟ ಮಾಡ್ಬೇಕಾಗುತ್ತೆ.

ಸರೋಜ : ಹೋಗ್ಲಿ ಬಿಡ್ರಿ... ಮಕ್ಕಳ್ತಾನೆ ಯಾಕೆ ರೇಗ್ತೀರಾ... ?

ಜನಾರ್ಧನ : ನಡಿ ನಡಿ... ಆಪಾಟಿ ತುಂಬ್ರೇನೋ ನೋಡೊ...

ಗದ್ದೆ ಬಯಲು ದೃಶ್ಯ

(ಇದೇ ದೃಶ್ಯದಲ್ಲಿ ಮುಂದುವರೆಯುತ್ತಾ, ಗದ್ದೆಬಯಲು ದೃಶ್ಯ – ಇಲ್ಲೂ ವೇದಾಂತನ ಅಪ್ಪ ಕೃಷ್ಣ (ಕಿಟ್ಟಿ) ಅಮ್ಮ ಲಕ್ಷ್ಮಮ್ಮ ಏನೋ ಕೆಲಸ ಮಾಡ್ತಿರ್ತಾರೆ. ವೇದಾಂತ ಹಾಗೂ ತಂಗಿ ಗೀತಾ ಅಲ್ಲಿಗೆ ಬರ್ತಾರೆ.)

(ತೋಟದ ದೃಶ್ಯ, ಧರಣೀಶನ ಅಪ್ಪ ಜನಾರ್ಧನ, ಅಮ್ಮ ಸರೋಜ ತೋಟದಲ್ಲಿ ಕೆಲಸ ಮಾಡುತ್ತಿದ್ದಾರೆ. ತಂಗಿ ಜೊತೆ ಧರಣೀಶ ಬರುತ್ತಾನೆ)

ಗೀತಾ : ಅಮ್ಮಾ, ಅಮ್ಮಾ, ಇವತ್ತು ಶಾಲೀಗೆ ರಜಾ. ಮೇಷ್ಟ್ರಿಗೆ ಜ್ವರ ಬಂದೈತೆ. ನಾವು ಹೋಗಿ ನೋಡ್ಕಂಡು ಬಂದ್ವಿ.

ಲಕ್ಷ್ಮಮ್ಮ : ಹೌದಾ ಪುಟ್ಟಿ... ಅಲ್ಲಿ ಬಂಡೆ ಮೇಲೆ ಕೂತ್ಕಳ್ಳಿ.

ಕೃಷ್ಣ (ಕಿಟ್ಟಿ) : ಬಾರೋ ಇಲ್ಲಿ ವೇದಾಂತ ಅದನ್ನ ಅಲ್ಲಿ ಎತ್ತಿಡ್ವಿಯಂತೆ...

ವೇದಾಂತ : ಹೋಗಪ್ಪಾ... ಅಲ್ಲಿ ಅಮ್ಮ ಎತ್ತಿಡ್ತಾರಪ್ಪಾ

ಕಿಟ್ಟಿ : ಲೇ ಬಾರೋ ಇಲ್ಲಿ ತಲೆಹರಟೆ

ವೇದಾಂತ : ಹೋಗಪ್ಪೋ... ಕನ್ನಂಬಾಡಿ ಕಟ್ಟೆ ಕಟ್ಟಿದ ನಮ್ಮ ಖ್ಯಾತ ಇಂಜಿನಿಯರ್ ಸರ್. ಎಂ. ವಿಶ್ವೇಶ್ವರಯ್ಯ ಅವರ ಪಾಠದ ಪ್ರಶ್ನೆಗುತ್ತರ ಕಂಠಪಾಠ ಮಾಡ್ಕೊಂಡ್ ಹೋಗ್ಬೇಕು.

ಕಿಟ್ಟಿ : ನೀನೇನು ವಿಶ್ವೇಶ್ವರಯ್ಯ ಆಗ್ಬೇಡಾ ಬಾರ್ಲಾ

ಲಕ್ಷ್ಮಮ್ಮ : ಬಿಡ್ರೀ ನಾನೇ ಎತ್ತಿಡ್ತೀನಿ. ಮಗಾ ಏನೋ ಓದ್ಕೋಬೇಕಂತೆ

ಕಿಟ್ಟಿ : ನೀನೇ ಎಲ್ಲಾ ಅವನ್ನ ಹಾಳು ಮಾಡಿದ್ದು.

ಹೊಲದ ದೃಶ್ಯ

(ಇದೇ ದೃಶ್ಯದಲ್ಲಿ ಮುಂದುವರೆಯುತ್ತಾ, ಹೊಲದ ದೃಶ್ಯ – ಹರಿಯ ತಂದೆ ಸುಬ್ಬಯ್ಯ ಮತ್ತು ತಾಯಿ ಶಾಂತಮ್ಮ ಹೊಲದಲ್ಲಿ ಕೆಲಸ ಮಾಡುತ್ತಿರುತ್ತಾರೆ. ಅಲ್ಲಿಗೆ ಹರಿ ಬರ್ತಾನೆ)

ಹರಿ : ಅಮ್ಮಾ ನಾನು ಮನೆ ಹತ್ರ ಎಲ್ಲಾ ಹುಡುಕಾಡ್ದೆ. ನೀವು ಇಲ್ಲಿಗೆ ಬಂದಿದ್ದೀರಾ...

ತಾಯಿ : ಯಾಕಪ್ಪ ಇಷ್ಟು ಬೇಗ ಬಂದೆ

ಹರಿ : ಮೇಷ್ಟ್ರುಗೆ ಜ್ವರ ಕಣಮ್ಮ ಅದಕ್ಕೆ ರಜಾ ಕೊಟ್ಟವರೆ ಶಾಲೆಗೆ

ಸುಬ್ಬಯ್ಯ : ಯಾಕ್ಲಾ ನಿಮ್ಮ ಮೇಷ್ಟ್ರಿಗೆ ಜ್ವರ ಬಂದೈತೆ

ಹರಿ : ರಾತ್ರಿ ಮೇಷ್ಟ್ರುನ್ನ ಸಾಹುಕಾರ್ರು ಮನೆ ಹತ್ರ ಕರೆಸ್ಕೊಂಡಿದ್ರಂತೆ. ಅದೇನೊ ನಮ್ಮೂರಿಗೆ ಮಾರಕ ರೋಗ ಬರುತ್ತೆ ಅಂತ ಹೇಳಿದ್ರಂತೆ. ಅದುಕ್ಕೆ ಮೇಷ್ಟ್ರು ಅದೇನೋ ಚಿಂತಿಸ್ತಾ ನಿದ್ದೆಗೆಟ್ಟವರೇ ಜ್ವರ ಬಂದೈತೆ ಕಣಪ್ಪಾ...

ಸುಬ್ಬಯ್ಯ : ಅದೇ ಹೇಳ್ತೀಯಲ್ಲಾ ಸಾಹುಕಾರ್ರು ಕರೆಸಿದ್ಕೂ ಜ್ವರಕ್ಕೂ ಏನ್ಲಾ ಸಂಬಂಧ.

ಹರಿ : ನನಗೇನು ಗೊತ್ತಪ್ಪ. ಮೇಷ್ಟು ಅಂಗಂತಿದ್ರು. ಅವರ್‍ಯಾವತ್ತೂ ಸುಳ್ಳು ಹೇಳಲ್ಲ. ನಮ್ಮೂರಿಗೆ ಯಾವ್ದೊ ರೋಗ ಬರ್‍ತೈತಪ್ಪೋ ?

(ಹರಿ ಅಮ್ಮನ ಹತ್ತಿರ ಹೋಗಿ ಕೆಲಸ ಮಾಡುವನು)

ದೃಶ್ಯ – 17

ಸಾರಾಯಿ ಗುಡಿಸಲು

(ಸಾರಾಯಿ ಅಂಗಡಿ ಪ್ರಾರಂಭ.)

(ಬೋರ್ಡ್ (ಕೈಯಲ್ಲಿ ಬರೆಯೋದು) ಚಪ್ಪರ, ತೆಂಗಿನಗರಿ, ಟೇಬಲ್, ಸಾರಾಯಿ ಕ್ಯಾನು, ಮಿಳ್ಳೆ)

(ಬ್ಯಾಕ್‌ಗ್ರೌಂಡ್ ಸಾಂಗ್ : ಏಳು ಸುತ್ತಿನ ಕೋಟೆಯ "ಏನೋ ಮಾಡಲು ಹೋಗಿ ಏನೊ ಆಯಿತಲ್ಲ)

(ಅದೇ ದೃಶ್ಯದಲ್ಲಿ ವಿಲನ್ ಮೋಹನಪ್ಪ ಅಂಗಡಿ ಮುಂದೆ ನಿಂತುಕೊಂಡಿದ್ದು, ಬಂದವರೆನ್ನೆಲ್ಲಾ ಮಾತನಾಡಿಸುತ್ತಾ ಹೋಗುವುದು, ಬರುವುದು, ಕೆಲವು ಜನರ ತಲೆ ಮೇಲೆ ಬಟ್ಟೆ. ಕೆಲವರಿಗೆ ಆಶ್ಚರ್ಯ, ಊರಿಗೆ ಸಾರಾಯಿ ಅಂಗಡಿ ಬಂದಿರೋದು.

ಬ್ಯಾಕ್ ಗ್ರೌಂಡ್ ಸಾಂಗ್ – ಸಾರಾಯಿ ಸೀಸೆಯಲಿ ನನ್ನ ದೇವಿ ಕಾಣುತಿಹಳು)

ಮೋಹನಪ್ಪ : ಕುಡಿರ್ಲ್ಲಾ... ಕುಡ್ದು ಕುಡ್ದು ಆಯಾಸನ ಕಳ್ಕೊಂಡು ಬದುಕಿನಾಗೆ ಹೊಸ ರಂಗು ಕಂಡ್ಕೊಳ್ಳಿ. ಇವತ್ತು ಅರ್ಧ ಬೆಲೆ, ಕಾಸಿಲ್ಲ ಅಂದ್ರೂ ಚಿಂತೆ ಇಲ್ಲ. ಕುಡಿರಿ. ಆನಂದಪಡ್ರಿ. (ಕ್ಯಾಷಿಯರ್‌ಗೆ ಹೇಳುತ್ತ) ಲೇ ಯಾರು ಬಂದ್ರೂ ಕಾಸಿಲ್ಲಾ ಅಂದ್ರೂ ಕೊಡ್ರೊ ಇವತ್ತು ಒಂದು ದಿನ.

ದೃಶ್ಯ – 18

ಊರಿನ ಅರಳಿಕಟ್ಟೆ

(ಊರಿನ ಅರಳಿಕಟ್ಟೆ ದೃಶ್ಯ. ಊರಿನ ಕೆಲವು ಜನರೊಂದಿಗೆ ಸಿಂಗ್ರಿ ನಾಗಯ್ಯ, ಸುಬ್ಬಯ್ಯ, ಜನಾರ್ಧನ್, ಕಿಟ್ಟಿ, ಮೂಲೆ ಮನೆ ಕೃಷ್ಣ, ಅಂಗಡಿ ರಾಜಣ್ಣ ಇದ್ದಾರೆ.)

ಮೂಲೆಮನೆ ಕೃಷ್ಣ : ಏನ್ರೋ ನಮ್ಮೂರಿಗೆ ಸಾರಾಯಿ ಅಂಗಡಿ ಬಂದೈತೆ.

ಅಂಗಡಿ ರಾಜಣ್ಣ : ನಮ್ ಸಾವ್‌ಕಾರ ಹೇಳ್ದಂಗೆ ತಂದ್‌ಬಿಟ್ಟ ಸಾರಾಯಿ ಅಂಗಡೀನಾ.

ಮತ್ತೊಬ್ಬ : ಥೂ ನಾನಂತೂ ಕುಡಿಯಲ್ಲಪ್ಪಾ

(ಬೀಡಿ ಸೇದುತ್ತಾ ಕುಳಿತಿದ್ದ ಸುಬ್ಬಯ್ಯ ಮಾತಾಡುತ್ತಾ)

ಸುಬ್ಬಯ್ಯ : ನಾನು ಒಂದ್ ತೊಟ್ಟು ಬಾಯಿಗೆ ಬಿಟ್ಟೇನೆ.

ಕಿಟ್ಟಿ : ನನ್ ಮಗ ಮದ್ಯಪಾನದ ಬಗ್ಗೆ ಈಟುದ್ದ ಹೇಳವನಪ್ಪ. ನಾನಂತೂ ಅತ್ತ ಮುಖ ಕೂಡ ಹಾಕಿ ಮಡ್ಗಲ್ಲ.

ಜನಾರ್ಧನ : ಮದ್ಯಪಾನ ಆರೋಗ್ಯಕ್ಕೆ ಹಾನಿಕಾರಕ ಅಂತೆ. ಕುಡ್ದು ನಮ್ ಆರೋಗ್ಯ ಹಾಳು ಮಾಡ್ಕೊಂಡು ಕುಡ್ದೋಗಿ ಹೆಂಡ್ತಿ ಕೈಲಿ ಕಸಿನ ಪೊರಕೆಯಲ್ಲಿ ಹೊಡೆಸ್ಕೋಬೇಕಾ ? ಥೂ ಹೋಗ್ರಲೋ...

ಸಿಂಗ್ರಿ ನಾಗಯ್ಯ : ನಾನಂತೂ ಕುಡಿತೀನಪ್ಪಾ... ಕುಡಿಯೋದ್ರಿಂದಲೇ ನಾನು ಈ ಊರಲ್ಲಿ ಫೇಮಸ್ಸು. ಕುಡ್ತ ಹುಡ್ಕೊಂಡ್ ಏಟ್ ದೂರ ಆದ್ರೂ ನನ್ ಅಡ್ಕಾಸಿ ಸೈಕಲಲ್ಲಿ ಹೋಗಿ ಕಂಠಪೂರ್ತಿ ಕುಡ್ದು ಬರ್ತಿೀವಿ. ಈಗ ಊರಲ್ಲೇ ಆತು. ಬೆಳಿಗ್ಗೆಯಿಂದ ಸಂಜೆ ತನಕ ಅದೇ ನನ್ನ ತವರು ಮನೆ. ನಿಮಗೇನು ಗೊತ್ತು ಕುಡಿತದ ಗಮ್ಮತ್ತ ಬಗ್ಗೆ. ಎಂತ ನೋವನ್ನು ಮರೆಸ್ತದೆ. ಆ ಮತ್ತಲ್ಲಿ ಸ್ವರ್ಗನೇ ಕೈಗೆ ಸಿಗುತ್ತೆ. ಆಹಾ ಕುಡಿತವಾ, ಕುಡ್ಡೋನಿಗೆ ಗೊತ್ತು ಅದರ ಗಮ್ಮತ್ತು. *(ಬಾಯಿ ಚಪ್ಪರಿಸುತ್ತಾ)*

ಎಲ್ಲರೂ : ಹೌದಾ *(ಅಂತ ಕಣ್ ಬಾಯಿ ಬಿಡ್ತಾರೆ)*

ಸಿಂಗ್ರಿ ನಾಗಯ್ಯ : ಹೌದು ಕಣ್ರೋ. ಸರಿ ಸರಿ ಎಲ್ಲಾರ್ದು ಬೆಳೆದ್ನಿಂತೈತೆ ನಾಲ್ಕು ಕಾಸಾದರೂ ಆಗ್ತೈತೆ. ಬೋಳಿಸಿಕೊಳ್ಳಿ. ಲಕ ಲಕ ಲಕ ಅಂತ ಚಂದಮಾಮನ ಕಳೆ ಕೊಡ್ತೀನಿ. ಈ ಬಾಡಿದ ಮುಖದಲ್ಲಿ ಯಾಕ್ ಕೂತಿದ್ದೀರಾ ಎದ್ದೇಳ್ರಿ. ನಾನು ಹೋಗಿ ಹೊಸ ಸಾರಾಯಿ ಅಂಗಡಿಯಾಗೆ ಬೋಣಿ ಮಾಡ್ಬೇಕು.

ಕಿಟ್ಟಿ : ಅಯ್ಯೋ ನೀನ್ ಕುಡಿಯೋದಕ್ಕೆ ನಾವು ಬೆಳಿಗ್ಗೆ ಆದ್ರೂ ಬೋಳಿಸ್ಕೋಳ್ಳಬೇಕಾ.

ಜನಾರ್ಧನ : ಮತ್ತಂತೆ, ಗಮ್ಮತ್ತಂತೆ, ಖುಷಿಯಂತೆ, ನಮ್ಗೆ ಇದರ ಸಹವಾಸವೇ ಬೇಡಪ್ಪಾ. ಇವನ ಸಹವಾಸ ಮಾಡಬಾರ್ದಪ್ಪ.

ಸುಬ್ಬಯ್ಯ : ಜೇಬಿಗೆ ಕೈ ಹಾಕಿದರೆ ಜೇಬೆಲ್ಲಾ ತೂತೈತೆ. ಕಾಸಿಲ್ಲದ ಜೀವನಕ್ಕೆ ಸಾರಾಯಿ ಚಿಂತೆ ಏಕೆ?

Scanned with OKEN Scanner

ಸಿಂಗ್ರಿ ನಾಗಯ್ಯ : ಹಂಗಾದ್ರೆ ನೀವ್ಯಾರು ಮಾಡಿಸ್ಕೊಳಲ್ವಾ. ಎಲ್ಲಾ ತುಕಾಲಿಗಳು. ನನಗಾಗಲೇ ಸಾರಾಯಿ ರಾ. ರಾ. ಅಂತ ಕರೀತಿದೆ. ಬೇರೆ ಗಿರಾಕಿಗಳನ್ನಾದರೂ ನಾನು ಹುಡಿಕೊತ್ತೀನಿ. ಬರ್ಲಾ (ಎಲ್ಲಾ ಇವನನ್ನೇ ನೋಡುವರು)

> **ನಮ್ಮಲ್ಲಿರುವ**
> **ಎಲ್ಲಾ ಅಜ್ಞಾನಕ್ಕಿಂತ**
> **ಹೆಚ್ಚು**
> **ಅಪಾಯಕಾರಿಯಾದದ್ದು**
> **ಕುಡಿತ ಕುರಿತು ಒಲವು**



ದೃಶ್ಯ – 19

ಸಾರಾಯಿ ಅಂಗಡಿ (ರಾತ್ರಿ ದೃಶ್ಯ)

(ರಾತ್ರಿಯ ದೃಶ್ಯ. ಸಾರಾಯಿ ಗುಡಿಸಲಲ್ಲಿ ಹತ್ತಾರು ಜನ ಕುಡೀತಾರೆ. ಸಾರಾಯಿ ಅಳೆದು ಬಿಡುತ್ತಿರುವುದು, ಹೊರಗಡ ಚಾಕ್ನಾ (ಆಮ್ಲೆಟ್, ಕಬಾಬ್, ಮೊಟ್ಟೆ, ರೆಡಿ ಮಾಡುತ್ತಿರುವುದು) ಕುಡಿದು ಮಲಗಿರುವುದು, ಕೂತಿರುವುದು, ಕುಡಿಯೋಕ್ಕೆ ಹೋಗಿಬರುವವರು (ಈ ನಿಂಬೆ ಹಣ್ಣಿನಂತಹ ಹುಡುಗಿ ಬಂತು.... ಹಾಡು ರೇಡಿಯೋದಲ್ಲಿ ಕೇಳುತ್ತಿರುವ ದೃಶ್ಯ)

(ಸಿಂಗ್ರಿ ನಾಗಯ್ಯ ಅಲ್ಲಿ ಹಾಜರಿದ್ದಾನೆ. ಅರ್ಧಂಬರ್ಧ ಕುಡಿದು ಕೂತಿದ್ದಾನೆ. ಅಲ್ಲಿಗೆ ಸುಬ್ಬು, ಕಿಟ್ಟಿ ಒಬ್ಬೊಬ್ಬರೇ ಎಂಟ್ರಿ.)

ಸಿಂಗ್ರಿ ನಾಗಯ್ಯ : *(ಸ್ವತ: ಮಾತಾಡುತ್ತಾ)* ಆಹಾ ರಾಮರಸದ ಮತ್ತಾ ದಿನಾ ಸೈಕಲ್ ಹೊಡ್ಕೊಂಡ್ ಹೋಗಿ ಬಂದ ವಿಷಯವೆಲ್ಲಾ ಹೋಗ್ತಿತ್ತು. ಈಗ ಇಲ್ಲಿಯೇ ಸಿಗುವ ಈ ಸಾರಾಯಿ ವಿಷಯದಲ್ಲಿ ಇಂತಹ ಮಜಾ ಇದೆ. ಅವರ್‍ಯಾರೋ ನಾವ್ ಕುಡಿಯಲ್ಲಾ ಅಂತಾರೆ. ಆ ಮಂಗಗಳಿಗೇನು ಗೊತ್ತು ಗುಂಡಿನ ದಾಸ್ಯದ ರುಚಿ. ನಾನಂತೂ ಅನುಭವಿಸ್ತೀನಪ್ಪ ಅನುಭವಿಸ್ತೀನಿ. ಸಾವ್‌ಕಾರಪ್ಪಾ ಊರಿಗೆ ಗಂಡಂಗ್ ತಂದು ದೊಡ್ಡ ಉಪಕಾರ ಮಾಡಿದ್ರಾ. ನಿಮ್ಗೊಂದು ಉಮ್ಮಾ (ಮುತ್ತಿಕ್ಕುವ ರೀತಿ).

(ಅದೇ ಮಾತಿನ ದೃಶ್ಯದಲ್ಲಿ ಜನಾರ್ಧನ ಸಾರಾಯಿ ಅಂಗಡಿಗೆ ಎಂಟ್ರಿ ತಲೇ ಮೇಲೆ ಮುಖ ಕಾಣೆಸದಂತೆ ಬಟ್ಟೆ ಹಾಕಿದ್ದಾನೆ. ಸಿಂಗ್ರಿ ನಾಗಯ್ಯ ಹತ್ತಿರ ಹೋಗಿ ಪರೀಕ್ಷಿಸುತ್ತಾ)

ಸಿಂಗ್ರಿ ನಾಗಯ್ಯ : ಅಲಲೇ... ಬೆಳಿಗ್ಗೆ ಅರಳೀಕಟ್ಟೆ ಮೇಲೆ ಈಟುದ್ದ ಹೇಳ್ತಿದ್ದೆ. ಸರೋಜಕ್ಕ ಪೊರಕೇಲಿ ಹೊಡಿತಾರೆ ಅಂತಿದ್ದೆ. ಈಗ ನೋಡಿದ್ರೆ ಕುಡಿಯಾಕೆ ಬಂದಿದ್ದೀಯಲ್ಲಾ...

ಜನಾರ್ಧನ : ನೀನ್ ಸುಮ್ನೆ ಇರ್ಲ. ಸಾರಾಯಿ ಅಂಗ್ಡಿ ಹೆಂಗೈತೆ ನೋಡೋಕ್ಕೆ ಬಂದೆ.

ಸಿಂಗ್ರಿ ನಾಗಯ್ಯ : ಇಲ್ಲಲ್ಲಾ ಮೊದ್ಲು ಬರೋರು ನೋಡೋಕ್ಕೆ ಅಂತಲೇ ಬರೋದು. ನೋಡ್ತಾ ನೋಡ್ತಾ ನಮ್ಮಂತೋರು ಅನುಭವಿಸುವ ಸುಖ ಕಂಡು ಒಂಚೂರು ನೋಡೋಣ ಅಂತ ಕುಡ್ದು ನಮ್ಮನ್ನೆ ಮೀರಿಸ್ತಾರೆ ಬಿಡು ಜೈ. ಹೊಸ್ ಹೊಸ್ ರುಚಿ ಅನುಭವಿಸು.

ಜನಾರ್ಧನ : ಅಯ್ಯೋ ಸುಮ್ನಿರೊ ಮುಂಡೇದೆ ।

(ಅಂತ ತಲೆ ಮೇಲೆ ಮೊಟಕಿ ಹೊರಡ್ತಾನೆ. [ಮೂವರದೂ ಒಂದೇ ಅಭಿಪ್ರಾಯ.])

ಜನಾರ್ಧನ : ನಡೀರಲೋ... ಇರೋತನಕ ಚೆನ್ನಾಗಿರಬೇಕು. ದುಡಿಯೋಣ, ಕುಡಿಯೋಣ, ಮಜಾ ಮಾಡೋಣ.

(ಹಿನ್ನೆಲೆ ಸಂಗೀತ 'ಒಳಗೆ ಸೇರಿದರೆ ಗುಂಡು, ನಾವು ಆಗುವೆವು ಗಂಡು, ಸಿಡಿಗುಂಡು ಬಿಸಿಯಾಗಿದೆ ನಶೆ ಏರಿದೆ ಮನೆಕಡೆ ಜೋಪಾನ ಕುಡಿದರೆ ಮದ್ಯಪಾನ.)

Scanned with OKEN Scanner

(ಸಿಂಗ್ರಿ ನಾಗಯ್ಯ ಹಾಗೆಯೇ ಟೇಬಲ್ ಮೇಲೆ ಕೂರ್‍ತ್ತಾನೆ. ಜನಾರ್ಧನ ಕಾಸು ಕೊಟ್ಟ ಸಾರಾಯಿ ಕೊಂಡು ಟೇಬಲ್ ಮೇಲೆ ಕೂತು ಅರ್ಧ ಕುಡಿದು ತಲೆ ಮೇಲಿದ್ದ ಬಟ್ಟೆ ತೆಗೆದು)

ಜನಾರ್ಧನ : ಯಾರಾನಾ ನೋಡ್ಲಿ ಬಿಡು, ಕುಡಿಯೋಕೆ ಬಂದಿರೋದಂತೆ. ಇನ್ನ್ಯಾಕೆ ಭಯ.

(ಅದೇ ಟೇಬಲ್‌ಗೆ ಕಿಟ್ಟಿಯು ಸಾರಾಯಿ ಗ್ಲಾಸ್ ತೆಗೆದುಕೊಂಡು ಪಕ್ಕಕ್ಕೆ ಬಂದು ಕೂರ್‍ತ್ತಾನೆ. ಅವನ ಪಕ್ಕದಲ್ಲಿದ್ದ ಜನಾರ್ಧನ ಕಿಟ್ಟಿಯನ್ನು ಕಂಡು)

ಜನಾರ್ಧನ : ಬೆಳಿಗ್ಗೆ ಏನ್ಲಾ ಹೇಳ್ದೆ ನೀನು ಸಾರಾಯಿ ಅಂಗಡಿ ಕಡೆ ಮುಖ ಕೂಡ ಹಾಕಿ ಮಲ್ಗಲ್ಲ ಅಂದಿದ್ದೆ. ಈಗ ನೋಡಿದ್ರೆ ಬಾಟ್ಲುನ ಹಿಡ್ಕೊಂಡೇ ಬಂದಿದ್ದೀಯಾ ಬಾ ಬಾ ಕೂತ್ಕೋ.

ಕಿಟ್ಟಿ : ನೀನೇ ಹೇಳ್ದಲ್ಲೋ ಮದ್ಯಪಾನ ಆರೋಗ್ಯಕ್ಕೆ ಹಾನಿಕರ, ಸರೋಜಕ್ಕ ಪೊರಕೆ ಪೂಜೆ ಮಾಡ್ತಾರೆ ಅಂದೆ. ಈಗ ನೋಡಿದರೆ ಸದ್ದಿಲ್ಲದೆ ಬಂದು ಸಾರಾಯಿ ಪೂಜೆ ಮಾಡಿ ತೀರ್ಥ ತಗೊಂಡ್ತಿದ್ದೀಯಾ...

ಜನಾರ್ಧನ : ಅದೇನ್ಲಾ ಮಾಡೋದು ಬೆಳಗ್ಗಿಂದಾ ತಡ್ಕೊಂಡಿದ್ದೆ. ಆದ್ರೆ ಸಂಜೆ ಆಗ್ತಾ ಆಗ್ತಾ ತಡ್ಕೊಳ್ಳೋಕೆ ಆಗ್ಲಿಲ್ಲ. ಅದೆಂಗೈತೆ ಅಂತ ನೋಡೋಕೆ ಬಂದೆ. ಇಲ್ಲಿದ್ದವರು ಅನುಭವಿಸುವ ಆ ಸ್ವರ್ಗ ಸುಖ ಕಂಡು ನಾನೂನು ಒಂಚೂರು ಹಾಕ್ಕೊಂಡೆ. ಆಹಾ ಏನ್ಲಾ ಈ ಮತ್ತೂ.

ಕಿಟ್ಟಿ : ನನಗೂ ಒಂದೆರಡು ಸಾರಿ ಪ್ಯಾಟೆಗೋದಾಗ ಈ ಅನುಭವ ಆಗಿತ್ತು. ನನಗೇನೂ ಹೊಸದಲ್ಲ ಬಿಡು, ಮದ್ಯೆ ಬಿಟ್ಟಿದ್ದೆ. ಇನ್ನು ಶುರು ಮಾಡೋದೆ.

(ಸುಬ್ಬಯ್ಯ ಸಾರಾಯಿ ಕೊಳ್ಳುವ ಹತ್ತಿರ ನಿಂತು ಕಾಸು ಕೊಟ್ಟು ಗ್ಲಾಸಿಗೆ ಹಾಕಿಸಿಕೊಂಡು

ಗುರುತಿಸುವವರ್ಯಾದರೂ ಇದ್ದಾರಾ ಅಂತ ಬೆಕ್ಕಿನ ರೀತಿ ಅಕ್ಕ ಪಕ್ಕ ನೋಡುವಾಗ ದೂರದ ಟೇಬಲ್ ಮೇಲೆ ಜನಾರ್ಧನ, ಕಿಟ್ಟಿಯನ್ನು ನೋಡಿ)

ಸುಬ್ಬಯ್ಯ : ಬಡ್ಡಿಮಕ್ಳ... ನನಗಿಂತ ಮೊದಲೇ ಬಂದು ಸೇವಿಸ್ತಾರಾ. ಹೋಗಿ ವಿಚಾರಿಸ್ತೀನಿ. (ಹತ್ತಿರ ಹೋಗಿ) ಎಲ್ರೂ ಸಭ್ಯಸ್ಥರು ಮಾತಿನ ಮಲ್ಲರು, ಮದ್ಯಪಾನ ವಿರೋದಿಸೋರು. ಈಗ ನೋಡುದ್ರೆ ಆನಂದವಾಗಿಯೇ ಸೇವನೆ ಮಾಡ್ತೀರಲ್ಲೋ.

ಕಿಟ್ಟಿ : ನಮ್ದು ಹಂಗಿರಲಿ. ನಿಂದೇನು ಕಥೆ. ಒಂದು ತೊಟ್ಟು ಬಾಯಿಗೆ ಬಿದ್ದಿಲ್ಲ ಅಂತಿದ್ದೆ. ಈಗ ನೋಡಿದ್ರೆ ಗ್ಲಾಸ್ ಗ್ಲಾಸ್ ಏರಿಸ್ತಾ ಇದ್ದೀಯಾ

ಸುಬ್ಬಯ್ಯ : ಬೆಳಗ್ಗಿಂದಾ ಹೊಲದಾಗೆ ಕೆಲ್ಸ ಮಾಡಿ ಮೈ ಕೈ ನೋವಿತ್ತು. ತೋರ್ಸುವ ಅಂತ ಡಾಕ್ಟರ್ ಹತ್ತಿರ ಹೋಗಿದ್ದೆ. ಶ್ಯಾನೆ ದುಡ್ಡು ಕೇಳ್ದಾ. ಅಯ್ಯೋ ಅವನಿಗ್ಯಾಕೆ ಅಷ್ಟು ಕೊಡೋದು ಅಂತ ಇಲ್ಲಿ ಬಂದು ರೆಡಿ ಮಾಡ್ಕೊಂಡು ಹೋಗೋಣ ಅಂತ ಬಂದೆ. ಸುಸ್ತು ಜಾರುತ್ತೆ ಮತ್ತು ಏರುತ್ತೆ. ಆಕಾಶದಲ್ಲಿ ತೇಲಾಡಿಸ್ತೈತೆ.

ರಸ್ತೆ (ರಾತ್ರಿ ದೃಶ್ಯ)

(ಸಿಂಗ್ರಿ ನಾಗಯ್ಯ ಸಾರಾಯಿ ಅಂಗಡಿಯಿಂದ ವಾಲಾಡುತ್ತಾ ಬರ್ತಾ ಇದ್ದಾನೆ. ಮಬ್ಬುಗತ್ತಲೆ. ವಯ್ಯಾರಿ ಲಕ್ಷ್ಮಿ ಅದೇ ಮಾರ್ಗದಲ್ಲಿ ಬರ್ತಿದ್ದಾಳೆ. ಎಲೆ ಮೇಲೆ ಕಸ ಪೊರಕೆ ಮಾರಲು ಸಿಟಿಗೆ ಹೋಗಿರ್ತಾಳೆ. ಪೊರಕೆಗಳು ಉಳಿದಿರುತ್ತವೆ. ಊರ ಬಸ್ಸು ಸಿಗದೆ ಪಕ್ಕದೂರ ಬಸ್ಸಿಗೆ ಬಂದು ಬರುವುದಕ್ಕೆ ರಾತ್ರಿಯಾಗಿರುತ್ತೆ. ರಾತ್ರಿಯಾದ್ದರಿಂದ ಒಂಟಿ ಹೆಂಗಸು ಮನೆಗೆ ಹೋಗುವ ಧಾವಂತದಲ್ಲಿ ಹೋಗ್ತಿರ್ತಾಳೆ. ಸಿಂಗ್ರಿ ನಾಗಯ್ಯನಿಗೆ ವಯ್ಯಾರಿ ಲಕ್ಷ್ಮಿ ಎದುರಾಗ್ತಾಳೆ)

ಸಿಂಗ್ರಿ ನಾಗಯ್ಯ : ಏನೇ ಲಕ್ಷ್ಮಿ ಈಟೊತ್ನಾಗೆ, ನನ್ನೆ ಹುಡ್ಕೊಂಡ್ ಬಂದ್ಯಾ... ಬಾ ಬಾ ಜಾಸ್ತಿ ದಿನ್‌ದಿಂದ ನಿನ್‌ಮ್ಯಾಗೆ ಆಸೆ ಆಗೈತೆ. ಆ ಆಸೇನಾ ಇವತ್ತು ಈಡೇರಿಸ್ಕೊಳ್ಳೋಣ. ಒಳಗೆ ಪರಮಾತ್ಮ ಬೇರೆ ಸೇರೈತೆ. ಆ ಸುಖದ ಜೊತೆ ಈ ಸುಖ ಸೇರಿದ್ರೆ ಆಹಾ......

(ಸಿಂಗ್ರಿ ನಾಗಯ್ಯ ಲಕ್ಷ್ಮಿಯ ಕೈ ಹಿಡ್ಕೋತಾನೆ. ಲಕ್ಷ್ಮೀ ಕೈ ಬಿಡಿಸ್ಕೊಂಡು ತಲೆ ಮೇಲಿನ ಪೊರಕೆ ತೊಗೊಂಡು ದಬಾ ದಬಾ ಅಂತ ಬಾರಿಸ್ತಾಳೆ. ಪೊರಕೆ ಹೊಡೆತಕ್ಕೆ ಸಿಂಗ್ರಿ ರಸ್ತೆ ಮಧ್ಯೆ ಅಂಗಾತ ಮಲಗ್ತಾನೆ.)

ಲಕ್ಷ್ಮಿ : ಒಂದು ಹೆಣ್ಣು ರಾತ್ರಿ ಹೊತ್ತು ಬರ್ತಾ ಇದ್ದಾಳೆ ಅಂದ್ರೆ ಅವಳು ದೇಹ ಮಾರ್ಕೊಳ್ಳೋಳು ಅಂತಾನೇನೂ ಮುತ್ತ್ಯಾಳ..... ಅವಳು ಹೊರಗಡೆ ಹೋಗಿ ದುಡಿದು ಬರ್ತಾಳೆ. ಅವಳಿಗೇನು ಕಷ್ಟ ಇರುತ್ತೆ ಅಂತ ತಿಳ್ದ ಹೆಣ್ಣಿಗೆ ರಕ್ಷಣೆ ಕೊಡಬೇಕು. ನಿಮ್ಮಂತಹ ಕಾಮಾಂಧರಿಂದಲೇ ಇವತ್ತು ಅತ್ಯಾಚಾರ, ವ್ಯಭಿಚಾರ ಆಗೋದು. ಗಾಂಧೀಜಿ ಅವತ್ತೇ ಹೇಳಿದ್ದರು. ರಾತ್ರಿ ಸಮಯದಲ್ಲಿ ಹೆಣ್ಣು ಒಂಟಿಯಾಗಿ ಓಡಾಡಿದಾಗಲೇ ದೇಶಕ್ಕೆ ನಿಜವಾದ ಸ್ವಾತಂತ್ರ್ಯ

ಅಂದ್ರು. ಆದ್ರೆ ನಿಮ್ಮಂತಹವರಿಂದ ನಮ್ಮಂತಹ ಹೆಣ್ಣುಗಳಿಗೆ ಮುಕ್ತಿ ಸ್ವಾತಂತ್ರ್ಯ ಎಲ್ಲಿದೆಯೋ? ಇನ್ನೊಂದು ಸಲ ನನ್ನ ಸಹವಾಸಕ್ಕೆ ಅಲ್ಲಿ ಊರ ಹೆಣ್ಣು ಮಕ್ಕಳ ಸಹವಾಸಕ್ಕೆ ಹೋದ್ರೆ ಒಂದು ಗತಿ ಕಾಣಿಸ್ತೀನಿ.

(ಮತ್ತೆ ಪೊರಕೆಯಲ್ಲಿ ಹೊಡೆದು ಹೋಗುವುದು, ಸಿಂಗ್ರಿ ನರಳುತ್ತಾ ಇದ್ದಾಗ ಕಾಲಲ್ಲಿ ಹೊದೆಯುವುದು ಹೊರಡುವ ದೃಶ್ಯ.)

ಕುಡಿತದ ಚಟದಿಂದ ಬಿಡುಗಡೆ
ಎಂದರೆ ಆತ್ಮಶುದ್ಧಿಯ ಒಂದು ಕ್ರಮ
ನೈತಿಕ ಉತ್ಥಾನ ಮತ್ತು ಆರ್ಥಿಕ
ಸಂಕಷ್ಟದಿಂದ ವಿಮೋಚನೆ
ಸ್ವಚ್ಛ ಮತ್ತು ಆರೋಗ್ಯಕರ ಜೀವನ
ಮಾರ್ಗದ ಪುನರಾಗಮನ



ದೃಶ್ಯ – 20

ಧರಣೇಶನ ಮನೆ ಆವರಣ (ರಾತ್ರಿ ದೃಶ್ಯ)

(ಧರಣೇಶನ ಮನೆ ಆವರಣ. ಜನಾರ್ಧನ ಕುಡಿದು ವಾಲಾಡುತ್ತಾ ಮನೆಗೆ ಪ್ರವೇಶ. ಒಂದು ಕಡೆ ಅಣ್ಣ–ತಂಗಿ ಹಾಗೂ ಅಮ್ಮ ಮೂವರು ಕೂತಿರ್ತಾರೆ. ಜನಾರ್ಧನ ಮಕ್ಕಳನ್ನು ಒಂಥರಾ ನೋಡ್ತಾನೆ. ಮಕ್ಕಳು ತಲೆ ಬಗ್ಗಿಸುತ್ತಾರೆ. ಹೆಂಡತಿಯನ್ನು ಬೈಯುತ್ತಾ)

ಜನಾರ್ಧನ : ಏನೇ ಬೇಯ್ಸಿದ್ದೀಯಾ...

ಸರೋಜ : ಥೂ... ಹೋಗಿ ಬಿದ್ಕೊ

ವೇದಾಂತನ ಮನೆ ಆವರಣ ರಾತ್ರಿ ದೃಶ್ಯ

(ಕಿಟ್ಟಿ ಮನೆಗೆ ಎಂಟ್ರಿ ಕೊಡುತ್ತಾ ಬಾಗಿಲಲ್ಲಿ ವಾಂತಿ ಮಾಡ್ತಾನೆ. ವೇದಾಂತ ಬಾಗಿಲಿಗೆ ಓಡಿ ಬಂದು ಅಪ್ಪನ್ನ ನೋಡಿ)

ವೇದಾಂತ : ಅಮ್ಮಾ... ಅಪ್ಪ ವಾಂತಿ ಮಾಡ್ತಿದೆ ಬಾರಮ್ಮಾ

(ಲಕ್ಷ್ಮಮ್ಮ ಮಗನ ಕೂಗಿಗೆ ಅಲ್ಲಿಗೆ ಬಂದು ಗಂಡನನ್ನು ನೋಡಿ ವಾಸನೆ ಕಂಡು)

ಲಕ್ಷ್ಮಮ್ಮ : ಥೂ ನಾಚಿಕೆ ಆಗಲ್ವಾ ಕುಡಿದು ಬಂದಿದ್ದೀರಾ... ಇದೆಲ್ಲಾ ನಿಮ್ಮ ಜನ್ಮಕ್ಕೆ ಬೇಕಾ. ಮಕ್ಕಳ ಮುಂದೆ ಈ ರೀತಿ ಮಾಡ್ತೀರಲ್ಲಾ. *(ನೀರನ್ನು ಗಂಡನ ಕೈಗೆ ಕೊಟ್ಟು)* ಬಾಯಿ ತೊಳ್ಕಂಡ್ ಬನ್ನಿ ಒಳಕ್ಕೆ.

(ಎಂದು ಒಳಕ್ಕೆ ಹೋಗುತ್ತಾಳೆ. ವೇದಾಂತ ಬಾಗಿಲ ಬಳಿ ನಿಂತು ನೋಡ್ತಿರ್ತಾನೆ)

ಹರಿ ಮನೆ ಆವರಣ (ರಾತ್ರಿ ದೃಶ್ಯ)

(ಹರಿ ಮನೆಯಲ್ಲಿ ಮಲಗಿದ್ದಾನೆ. ಸುಬ್ಬು ಮನೆಗೆ ವಾಲಾಡುತ್ತಾ ಬರುತ್ತಾನೆ. ಇದನ್ನು ಕಂಡ ಹೆಂಡತಿ ಶಾಂತಮ್ಮ)

ಶಾಂತಮ್ಮ : ಇದೇನ್ರೀ ಕುಡ್ದಿದ್ದೀರಾ...

ಸುಬ್ಬು : ಶ್... ಯಾರಿಗೂ ಹೇಳ್ಬೇಡ ಕುಡ್ದಿರೋದು. ಸುಮ್ನೆ ಇರು ಮಗ ಎದ್ಬಿಡುತ್ತೆ. (ಕೈ ಬಾಯಿ ಸನ್ನೆ ಮಾಡುತ್ತಾ ಊಟ ಕೊಡು ಅಂತ ಕೇಳುತ್ತಾನೆ)

(ಶಾಂತಮ್ಮ ಕರ್ಕೊಂಡು ಹೋಗಿ ತಟ್ಟೇಲಿ ಮುದ್ದೆ ಇಟ್ಟು ಕೊಡುತ್ತಾಳೆ)

ದೃಶ್ಯ – 21

ಧರಣೇಶನ ಮನೆ ಆವರಣ (ಬೆಳಗಿನ ದೃಶ್ಯ)

(ಜನಾರ್ಧನನ ಮನೆಯ ಕೊಟ್ಟಿಗೆ ದೃಶ್ಯ. ಅಲ್ಲಿ ಅವರ ಇಡೀ ಸಂಸಾರ ಇದೆ. ಜನಾರ್ಧನ, ಸರೋಜ, ಧರಣೇಶ, ತಂಗಿ ಪಾರು)

ಸರೋಜ : ಅಲ್ಲಾ ನಿನಗೆ ಮಾನ ಮರ್ಯಾದೆ ಏನಾದರೂ ಇದೆಯಾ. ಮಕ್ಕಳ ಮುಂದೆ ಕುಡ್ದು ಬಂದಿದ್ದೀಯಲ್ಲ. ಪಾಪ ಅವು ಕುಡಿಯೋದು ಕೆಟ್ಟದ್ದು ಅಂತ ಬುದ್ಧಿ ಹೇಳಿದ್ರೆ ನೀನು ಹೋಗಿ ಕುಡ್ದು ಬಂದಿದ್ದೀಯ. ಥೂ ನಿನ್ನ ಜನ್ಮಕ್ಕೆ ನನ್ನ ಗಂಡ ಸಭ್ಯಸ್ಥ ಅಂತಿದ್ದೆ. ಈಗ ಊರವರ್ಗೆ ಗೊತ್ತಾದ್ರೆ ಹೇಗೆ ತಲೆ ಎತ್ಕೊಂಡು ತಿರುಗೋದು. ಮಕ್ಕಳ ಭವಿಷ್ಯ ಹೇಗಪ್ಪಾ ದೇವ್ರೆ...

(ಎಂದು ತಲೆ ಮೇಲೆ ಕೈ ಹೊತ್ಕೊಂಡು ಕೂರುವಳು)

ವೇದಾಂತನ ಮನೆ ಆವರಣ (ಬೆಳಗಿನ ದೃಶ್ಯ)

(ವೇದಾಂತನ ಮನೆಯ ದೃಶ್ಯ. ಬಾವಿಯಲ್ಲಿ ನೀರು ಸೇದುವ ದೃಶ್ಯ. ಕೃಷ್ಣ (ಕಿಟ್ಟಿ) ಬಾಗಿಲಲ್ಲಿ ಕೂತಿದ್ದಾನೆ. ಲಕ್ಷ್ಮಮ್ಮ ನೀರು ಸೇದುತ್ತಾ ಇದ್ದಾಳೆ. ಮಕ್ಕಳು ಆಡ್ತಿದ್ದಾರೆ)

ಲಕ್ಷ್ಮಿ : ಮಕ್ಕಳ ಭವಿಷ್ಯಕ್ಕೆ ನಾಲ್ಕು ಕಾಸು ಕೂಡಿಡ್ತೀರಾ ಅಂದ್ಕೊಂಡಿದ್ದೆ. ಈಗ ನೋಡಿದ್ರೆ ಕುಡಿಯೊ ಚಟಕ್ಕೆ ಬಿದ್ದು, ಮಕ್ಕಳ ಭವಿಷ್ಯ ಹಾಳು ಮಾಡುವುದಿರಲಿ, ನಿಮ್ಮ ಭವಿಷ್ಯಕ್ಕೆ ಕೊಳ್ಳಿ ಇಟ್ಕೊತಿದ್ದೀರಲ್ಲ. ಕುಡಿತದಿಂದ ಜೀವನ ಸರ್ವನಾಶ ಕಣ್ರೀ.

ಕಿಟ್ಟಿ : ಬೆಳಿಗ್ಗೆಯಿಂದ ಅದೇನೇ ವಟ ವಟ ಅಂತಿಯಾ ಕೇಳಕ್ಕಾಗಲ್ಲ ನನ್ನ ಕೈಲಿ.

ಹರಿ ಮನೆ ಆವರಣ (ಬೆಳಗಿನ ದೃಶ್ಯ)

(ಅಡುಗೆ ಮನೆಯಲ್ಲಿ ಹರಿಯ ಅಮ್ಮ ಶಾಂತಮ್ಮ ಅಡಿಗೆ ಮಾಡ್ತಾ ಕೊಳವೆ ಊದುತ್ತಾ ಗಂಡ ಸುಬ್ಬುಗೆ ಹೇಳ್ತಾ)

ಶಾಂತಮ್ಮ : ಇರೊ ಒಬ್ಬ ಮಗನ್ನ ಚೆನ್ನಾಗಿ ಓದ್ಸಿ ಓದ್ಸಿ ಏನಾದ್ರೂ ಒಳ್ಳೆ ಕೆಲಸಕ್ಕೆ ಸೇರಿಸಿ. ಭವಿಷ್ಯ ರೂಪಿಸೋದು ಬಿಟ್ಟು ನೀವಿಂಗೆ ಸಹವಾಸ ದೋಷದಲ್ಲಿ ಸನ್ಯಾಸಿ ಕೆಟ್ಟ ಅನ್ನುವಂತೆ. ಊರಿಗೆ ಬಂದ ಸಾರಾಯಿ ಅಂಗಡಿಗೆ ದಾಸರಾಗಿ ಕುಡಿಯೋದು ಕಲ್ತ್ಕೊಂಡು ಬಂದಿದ್ದೀರಲ್ರೀ. ನಮ್ಮ ಮಕ್ಕಳ ಭವಿಷ್ಯ ರೂಪಿಸುವುದು ನಮ್ಮ ಕೈಲಿದೆ. ಹಾಗಿರುವಾಗ ನಾವೇ ದಾರಿ ತಪ್ಪಿದರೆ ಹೇಗೆ ? ಹೆಂಗಾದ್ರು ಮಾಡ್ಕೊಳ್ಳಿ. ನಾನಂತೂ ಗೊತ್ತಿರುವಷ್ಟು ಬುದ್ದಿ ಹೇಳಿದ್ದೀನಿ. ಸಾರಾಯಿ ಕಲ್ತು ಹಾಳಾದೆ. ಜೀವನ ಪರ್ಯಂತ ಹಾಳೇ. ಹೊಸ ಜೀವನಕ್ಕೆ ಸಾರಾಯಿ ತಿರಸ್ಕಾರವೇ ವಾಸಿಯಾಗುವ ಮದ್ದು.

ಸುಬ್ಬಯ್ಯ :	ನಿನ್ನ ಹಿತವಚನ ನನಗೆ ಬೇಕಾಗಿಲ್ಲ. ನಿನ್ನಿಂದ ನಾನು ಕಲೀಬೇಕಾಗಿಲ್ಲ. ನನಗೆ ಗೊತ್ತು ನಾನು ಹೇಗೆ ಬದುಕಬೇಕು ಅಂತ

(ಎಂದು ಹೊರಡುತ್ತಾನೆ)

ಶೇವಿಂಗ್ ಅಂಗಡಿ (ಮಧ್ಯಾಹ್ನ ದೃಶ್ಯ)

(ಶೇವಿಂಗ್ ಅಂಗಡಿ (ಪೆಟ್ಟಿಗೆ) ಯಾರಿಗೊ ಒಬ್ಬರಿಗೆ ಕೆರೀತಿದ್ದಾನೆ. ಆ ವೇಳೆ ಕ್ರೀಮ್ ಹಚ್ಚಿ ಶೇವಿಂಗ್ ಮಾಡ್ತಾ ಈತನೇ ನೋವು ಅನುಭವಿಸುವುದು. ಆಗ ಗಿರಾಕಿ)

ಗಿರಾಕಿ :	ಏನಾಯ್ತು ಹೆರಿಗೆ ನೋವು ರೀತಿ ಕಷ್ಟ ಬೀಳ್ತೀಯಾ. ನಿನ್ನ ನೋವಿಗೆ ನನ್ನ ಮುಖವೆಲ್ಲಾ ಕುರುಪು ಮಾಡಬ್ಯಾಡ್ವೊ ಆಗ್ಲಿಲ್ಲಾ ಅಂದ್ರೆ ಬುಡು, ಹೊಂಟು ಹೋಗ್ತೇವೆ. ರಾತ್ರಿ ಬೇರೆ ಸಾರಾಯಿ ಜಾಸ್ತಿ ಆಗಿ ಯಾವುದೊ ಮಂಗ ಬಿದ್ದಂಗೈತೆ. ಅಥವಾ ಕುಡಿದ ನಶೆಯಲ್ಲಿ ಬೇಲಿಗೀಲಿ ಹಾರೋಕ್ಕೆ ಹೋಗಿ ಗೂಸಾ ತಿಂದಿಯೇನೋ...
ಸಿಂಗ್ರಿ ನಾಗಯ್ಯ :	ಇಲ್ಲಾ ಕಣಣ್ಣೋ ಬರ್ತಾ ಇದ್ನಾ... ಸ್ವಲ್ಪ ನಿಶೆ ಜಾಸ್ತಿ ಆಗಿತ್ತಾ. ರಸ್ತೆಯ ಮಧ್ಯೆ ನಾಯಿಗಳು ಮಲಗಿರೋದು ಗೊತ್ತಿಲ್ವಾ. ನಾನು ಹೋಗಿ ತುಳಿದ್ನಾ...ಅವು ಅಟ್ಟಿಸಿಕೊಂಡು ಬಂದು

ಎದ್ದೋ ಬಿದ್ದೋ ಅಂತ ಓಡಿ ಕಾಲು ಜಾರಿ ಲಕ್ಷ್ಮಿ ಮನೆ ಮುಂದೆ ಬಿದ್ದೆ. ಗಾಯ ಆಯ್ತು ಅಷ್ಟೆ ಕಣಣ್ಣಾ.

ಗಿರಾಕಿ : ಯಾಕೊ ಇತ್ತೀಚೆಗೆ ಗಮನಿಸಿದರೆ ನಮ್ಮೂರಿನ ವಾತಾವರಣವೇ ಬದಲಾಗ್ತಾ ಇದೆ ಅನ್ಸುತ್ತೆ. ಬರ್ಬಾದ್ದೆಲ್ಲಾ ಬರ್‍ತಿದೆ. ಆಗ್ಬಾರ್ದೆಲ್ಲ ಆಗ್ತೈತೆ. ನಿನಗೆ ಹಾಗೆ ಅನ್ನಿಸ್ತಾ ಇಲ್ವಾ.

ಸಿಂಗ್ರಿನಾಗಯ್ಯ : ಹೂ ಕಣಣ್ಣೋ ಬದಲಾವಣೆ ಆಗ್ತೈತೆ. ಆಗ್ಬೇಕು ಕಣಣ್ಣೋ. ಎಲ್ಲಾ ನಮ್ಮ ಸಾಹುಕಾರ್‍ರ ಕೃಪಾಕಟಾಕ್ಷ.

ಗಿರಾಕಿ : ಥೂ ನಿನ್ನ... ನಮ್ಮ ನಗುವಿನ ಹಳ್ಳಿಗೆ ಇದೆಲ್ಲಾ ಬೇಕಾ ? ಇರೋ ನಗುವೆಲ್ಲಾ ಹಾಳಾಗಿ ಕೃತಕ ನಗು ಆವರಿಸಿದೆ.

(ಎಂದು ಹೇಳುತ್ತಾ "ಬರ್ಲಾ" ಅಂತ ಸಿಂಗ್ರಿ ನಾಗಯ್ಯನ ಹೆಗಲ ಮೇಲೆ ಒಂದೇಟು ಹೊಡೀತಾನೆ. ನೋವಿಗೆ "ಹಾ... " ಅಂತ ಸಿಂಗ್ರಿ ನೋವು ತೋರಿಸುವಂತಹದ್ದು)

ಸಭ್ಯತೆಯ
ಮಾರ್ಗದಿಂದ
ಜಗತ್ತನ್ನು ನೀನು
ಪರಿವರ್ತಿಸಬಹುದು



ದೃಶ್ಯ –22

ಸಾರಾಯಿ ಅಂಗಡಿ (ರಾತ್ರಿ ದೃಶ್ಯ)

(ಸಾರಾಯಿ ಅಂಗಡಿ ಹತ್ತಿರ ವಿಲನ್ ಮೋಹನಪ್ಪ ಬಂದು ಎಲ್ಲಾ ಚೆಕ್ ಮಾಡ್ತಾನೆ. ಕ್ಯಾಷಿಯರ್ ಹತ್ರ)

ಮೋಹನಪ್ಪ : ಹೆಂಗೈತಪ್ಪಾ ವ್ಯಾಪಾರ... ಚೆನ್ನಾಗೈತಾ...

ಕ್ಯಾಷಿಯರ್ : ಬೋ ಚೆನ್ನಾಗೈತೆ ಬುದ್ಧಿ.

ಮೋಹನಪ್ಪ : ಸಾರಾಯಿ ವ್ಯಾಪಾರ ಹೆಂಗೈತ್ಲಾ ಕಲೆಕ್ಷನ್ ಜೋರಾಗೈತಾ...

ಕ್ಯಾಷಿಯರ್ : ತುಂಬಾ ಚೆನ್ನಾಗೈತೆ. ಒಂದ್ ಕುಡಿಯೋ ಹತ್ರ 2–3 ಕುಡಿತಾರೆ. ಊರಲ್ಲಿ ಸಾರಾಯಿ ಹಬ್ಬಾನೆ ಆಚರಿಸ್ತಾರೆ.

ಮೋಹನಪ್ಪ : ಚಾಕ್ನದ ವ್ಯಾಪಾರ ಹೆಂಗೈತೆ ?

ಕ್ಯಾಷಿಯರ್ : ಅದೂ ಪರವಾಗಿಲ್ಲ ಬುದ್ದೀ...

ಮೋಹನಪ್ಪ : ಪರವಾಗಿಲ್ಲ ಎಲ್ಲಿ ಕಣೋ... ಹೆಂಗೂ ಎಲ್ಲಾ ಕುಡಿದಿದ್ದಾರೆ ಬೆಲೆ ಗೊತ್ತಾಗಲ್ಲ. ಅವರಿಗೆ ಬೆಲೆ ಜಾಸ್ತಿ ಮಾಡು. ಹೆಂಗೂ ಕುಡಿಯೋರ್ ತಿಂದ್ಕೊಂಡ್ ಹೋಗ್ತಾರೆ.

Scanned with OKEN Scanner

ಕ್ಯಾಷಿಯರ್ : ಸಿದ್ಧಯ್ಯ ನಾಲ್ಕೈದು ಹೈಕ್ಳ ಜೊತೆ ಬಂದಿದ್ದ. ಒಡ್ದು ಸಾಲ ಹೇಳಿ ಹೋಗವನೆ ಸಾಹುಕಾರ ಹೇಳಲಾ ಅಂದ. ನಾನೇ ಬೇಡ ಅಂದೆ. ಇವತ್ತು ತಂದುಕೊಡ್ತೀನಿ ಅಂದವನೆ.

ಮೋಹನಪ್ಪ : ಕೊಡ್ಲಾ. ಸಾಲ ಕೊಡ್ಲ. ಜಾಸ್ತಿ ಜಾಸ್ತಿ ಲೆಕ್ಕ ತೋರಿಸು. ಲೆಕ್ಕದಲ್ಲಿ ಪುಸ್ತಕದ ಜೊತೆ (ಕಿವಿಯನ್ನು ಕರೆದು ಹೇಳುತ್ತಾ) ವೈಟ್ ಪೇಪರ್ ಮೇಲೆ ಸಹಿ ಹಾಕಿಸ್ಕೊಂಡಿರು. ಕಾಸು ಕೊಡ್ಲಿಲ್ಲಾ ಅಂದ್ರೆ ಇನ್ನೂ ಕುಡಿಸಿ, ಕಾಸು ಕೊಟ್ಟು ಹೊಲಗದ್ದೆ ಎಲ್ಲಾ ಬರೆಸ್ಕೋಬೋದು.

ಕ್ಯಾಷಿಯರ್ : ಆಯ್ತು ಬುದ್ಧಿ. ನೀವೇಳ್ದಂಗೆ ಮಾಡ್ತೀನಿ.

ಮೋಹನಪ್ಪ : ಇನ್ನೊಂದು ಮಾತು. ಲೆಕ್ಕದಲ್ಲಿ ಏರು ಪೇರು ಆಗಿ ಜ್ಞಾಪಕ ಇಟ್ಕೊ ನಾನಿನ್ನು ಬರ್ಲಾ.

ನಿಂದೆ
ನರ್ನಾಮಕಾರಿಯೇ
ಹೊರತು
ನಿರ್ಮಾಣಕಾರಿಯಲ್ಲ



ದೃಶ್ಯ –23

ಜನಾರ್ಧನನ, ಸುಬ್ಬು, ಕೃಷ್ಣ ಮನೆಗಳ ದೃಶ್ಯ

(ಜನಾರ್ಧನ ಅಡುಗೆ ಮನೆಯಲ್ಲಿ ಕಾಳು ಮಡ್ಗಿರೊ ಮಡಕೆಯಲ್ಲಿ ಹೆಂಡ್ತಿ ಮಡಗಿರೊ ಕಾಸು ಕದಿಯೋದು)

(ಸುಬ್ಬಯ್ಯ ಹಂಡೆ ಕದ್ದು ಅಡವಿರಿಸಿ ಕಾಸು ಪಡೆಯೋದು)

(ಕಿಟ್ಟಿಯು ಹೆಂಡ್ತಿ ಕಾಲು ಚೈನ್ ಕದ್ದುಕೊಂಡು ಹೋಗುವ ದೃಶ್ಯ)

ವಾಯ್ಸ್ ಓವರ್ : ನೋಡಿದ್ರಾ ನಗುವಿನಹಳ್ಳಿ ಒಂದು ಕಾಲದಲ್ಲಿ ಹೆಂಗಿತ್ತು. ಇವತ್ತು ಹೆಂಗಾಗಿದೆ. ಸಂಸಾರಗಳೆಲ್ಲಾ ಒಡೆದು ಹೋಗ್ತಿವೆ. ಸಂಬಂಧಗಳಲ್ಲಿ ಬಿರುಕು ಮೂಡಿದೆ. ಕುಡಿಯೋದಿಲ್ಲ ಅಂತ ಆಣೆ ಭಾಷೆ ಮಾಡಿದವರು ಸಾರಾಯಿ ಲೋಟ ಹಿಡಿದು ಕೂತಿದ್ದಾರೆ. ಮನೆಯವರಿಗೆ ಊಟ ಇಲ್ಲದಿದ್ದರೂ ಸಾರಾಯಿಗೆ ಕಾಸು ಹೊಂಚುತ್ತಿದ್ದಾರೆ. ಮಕ್ಕಳ ಭವಿಷ್ಯದ ಚಿಂತೆ ಇಲ್ಲಾ. ನಗುವಿನಹಳ್ಳಿಯಲ್ಲಿ ನಗುವೆಂಬುದು ಮಾಯವಾಗಿ ಬರೀ ಅಳು ಮೂಡುತ್ತಿದೆ. ವರ್ತಮಾನದಲ್ಲಿ ಈ ಹಳ್ಳಿಯ ಸ್ಥಿತಿ ಚಿಂತಾಜನಕವಾದರೆ ಭವಿಷ್ಯದಲ್ಲಿ ನಗುವಿನಹಳ್ಳಿಯ ಸ್ಥಿತಿ ಹೇಗಿರಬಹುದು.

ವಿಶ್ರಾಂತಿ

Scanned with OKEN Scanner

ದೃಶ್ಯ –24

ವಿರಾಮದ ನಂತರ ಮೊದಲ ದೃಶ್ಯ

(ಬೆಳಗಿನ ದೃಶ್ಯ ಕೊಳಾಯಿ ' ಬಾವಿ ಹತ್ತಿರ ನೀರು ಸೇದುವ ಅಥವಾ ಹಿಡಿಯುವ ದೃಶ್ಯ. ಸರೋಜಮ್ಮ, ಲಕ್ಷ್ಮಮ್ಮ, ಶಾಂತಮ್ಮ, ವಯ್ಯಾರಿ ಲಕ್ಷ್ಮಿ ಜೊತೆಗೆ ನಾಲ್ಕೈದು ಹೆಂಗಸರು ನಿಂತಿರುವ ನೀರು ತುಂಬಿರುವ ಸೊಂಟದ ಮೇಲೆ ಬಿಂದಿಗೆಯಿಟ್ಟು ಕೊಂಡಂತೆ)

ವಯ್ಯಾರಿ ಲಕ್ಷ್ಮಿ : ಏನ್ ಸರೋಜಕ್ಕಾ, ಲಕ್ಷ್ಮಕ್ಕಾ, ಆ ಮನೆಹಾಳ್ ನನ್ ಮಗ. ಬೋಳಿಸ್ತಾನಲ್ಲ, ಅವರು ರಾತ್ರಿ ಕಂಠಪೂರ್ತಿ ಕುಡಿದು, ನನ್ನ ಹಿಡ್ಕೊಳ್ಳಕ್ಕೆ ಬಂದಿದ್ದ. ನನ್ನ ಜೊತೆ ತಪ್ಪಾಗಿ ನಡ್ಕೊಂಡ. ಈ ಸಾರಾಯಿ ಅಂಗಡಿ ಊರಿಗೆ ಬಂದ್ ಮೇಲೆ ರಾತ್ರಿ ಹೊತ್ತು ಯಾರು ಒಬ್ಬೊಬ್ಬರಾಗಿ ಓಡಾಡಕ್ಕಾಗಲ್ಲ. ಹಿಂದೆ ಆದ್ರೆ ಮುಂದೆ ಹೆಂಗಪ್ಪ.

ಸರೋಜಮ್ಮ : ಅಯ್ಯೋ ಲಕ್ಷ್ಮಿ ಹಾಳಾದ್ ಸಾರಾಯಿ ಚಟಕ್ಕೆ ನನ್ ಗಂಡನೂ ಬಿದ್ದವನೆ. ರಾತ್ರಿ ಕುಡ್ದು ಬಂದು ಗಲಾಟೆ ಮಾಡ್ದ ಕಣೆ.

ಲಕ್ಷ್ಮಮ್ಮ : ಅಯ್ಯೋ ಸರೋಜ... ನಿನ್ನ ಗಂಡ ಗಲಾಟೆ ಮಾಡ್ದ. ನನ್ನ ಗಂಡ ಬಂದು ತಿಂದಿದ್ದೆಲ್ಲಾ ಮನೆ ಮುಂದೆ ಕಕ್ಕಿದ. ಗಬ್ಬುನಾತ. ಬಿಂದಿಗೆ ಬಿಂದಿಗೆ ನೀರುಯ್ದು ತೊಳೆದೆ. ಆ ವಾಸನೆಗೆ ರಾತ್ರಿ ನಿದ್ದೇನೆ ಬರಲಿಲ್ಲ.

ಶಾಂತಮ್ಮ : ಆ ಸಾಹುಕಾರ ಅವನು ಬದುಕಕ್ಕೋಸ್ಕರ ಪ್ರಶಾಂತವಾಗಿದ್ದ. ನಮ್ಮೂರಿಗೆ ಸಾರಾಯಿ ಅಂಗಡಿ ತಂದು ನಮ್ಮ ಗಂಡಂದಿರನ್ನೆಲ್ಲಾ ಹಾಳ್ ಮಾಡ್ದ. ನನ್ನ ಗಂಡ ಇರೊ ಒಬ್ಬ ಮಗನಿಗೂ ಮೂರ್ಕಾಸು ಕೂಡಿಡಲ್ಲ ಬಿಡು.

ವಯ್ಯಾರಿ ಲಕ್ಷ್ಮಿ : ಏನ್ರಕ್ಕಾ ನೀವೆಲ್ಲಾ ಹೀಗೆ ಮಾತಾಡ್ತೀರಾ. ಹೆಂಗಸರು ಮನಸ್ಸು ಮಾಡಿದರೆ ಏನ್ ಬೇಕಾದರೂ ಮಾಡಬಹುದು. ನಾವು ನೀವೆಲ್ಲಾ ಇದರ ಬಗ್ಗೆ ಜಾಗೃತಿ ವಹಿಸೋಣ, ಏನಾದರೂ ಪರಿಹಾರ ಕಂಡ್ಕೊಳ್ಳೋಣ.

ಸರೋಜಮ್ಮ : ಇದರ ವಿರುದ್ಧ ಹೋರಾಟಕ್ಕೆ ಯಾರಾದರೂ ನಮಗೆ ಬೆಂಬಲ ಬೇಕಲ್ಲ. ಯಾರನ್ನ ಕೇಳೋಣ.

ಲಕ್ಷ್ಮಮ್ಮ : ಯಾರ್ನ... ಏಕೆ ಅಕ್ಕ ನಮ್ಮ ಮಕ್ಕಳಿಗೆ ಮಧ್ಯಪಾನದ ವಿರುದ್ಧ ಸಾಕಷ್ಟು ಬುದ್ಧಿ ಹೇಳ್ತಿಲ್ವ. ನಮ್ಮೂರ ಮೇಷ್ಟ್ರು ಅವರನ್ನೇ ಕೇಳೋಣ. ತಗೋ.

ಸರೋಜಮ್ಮ : ಸರಿ ಸರಿ... ಇದಕ್ಕೆ ನಮ್ಮ ಮೇಷ್ಟ್ರೇ ಸರಿ.

ಶಾಂತಮ್ಮ : ಮೇಷ್ಟ್ರಿಗೆ ತಿಳುವಳಿಕೆ ಇದೆ. ಅವರೇ ಒಂದು ಸೂಕ್ತ ಪರಿಹಾರ ತೋರಿಸ್ತಾರೆ. ನಮ್ಮೂರಿಗೆ ವಕ್ಕರಿಸಿಕೊಂಡಿರುವ ಈ ಸಾರಾಯಿ ಅಂಗಡಿಗೆ ಮುಕ್ತಿ ಹಾಡ್ತಾರೆ. ನಡೀರಕ್ಕ ಎಲ್ರೂ ಹೋಗೋಣ.

ಲಕ್ಷ್ಮಮ್ಮ : ಮನೆಗೋಗಿ ಎಲ್ಲಾ ಕೆಲಸ ಮುಗಿಸಿ. ಗಂಡಂದಿರು ಹೊಲದ ಕಡೆ ಹೋದಾಗ ಮೇಷ್ಟ್ರು

Scanned with OKEN Scanner

ಮನೇಗ್ ಹೋಗಿ. ಅವ್ರುನ್ನ ಕಾಣೋಣ. ಲಕ್ಷ್ಮಿ ನೀನು ಉಳಿದ ಹೆಂಗಸರಿಗೆಲ್ಲಾ ಹೋಗಿ ಹೇಳು ಎಲ್ರೂ ಬರ್ಲಿ. ಈಗ ನಡೀರಿ ಎಲ್ರೂ ಹೋಗೋಣ.

(ಮತ್ತೊಂದು ದೃಶ್ಯ)

(ನೀರು ಸೇದಿಕೊಂಡು ಸರೋಜ ಮನೆ ಹತ್ರ ಬರ್ತಾರೆ. ಮನೆ ಮುಂದೆ ಧರಣೇಶನ ತಂಗಿ ಪಾರು ಕುಂಟೆಬಿಲ್ಲೆ ಆಟ ಆಡ್ತಿರ್ತಾರೆ. ಸರೋಜ ಮಗನನ್ನು ಮಾತಾಡಿಸ್ತಾ)

ಸರೋಜಮ್ಮ : ಸರಿ ಸರಿ... ಇದಕ್ಕೆ ನಮ್ಮ ಮೇಷ್ಟ್ರೇ ಸರಿ.

ದರಣೇಶ : ಹೋದ್ರಮ್ಮ... ಆಮೇಲೆ ನೀನು ಹೋಗ್ಬೇಕಂತೆ.

ಸರೋಜ : ಹೋಗ್ತೀನಿ ಹೋಗ್ತೀನಿ... ಅಂದಹಾಗೆ ಪುಟ್ಟ ನಾವೆಲ್ಲಾ ಹೆಂಗಸರು ಸಾರಾಯಿ ಅಂಗಡಿ ತೆರೆದಿರುವುದರ ಬಗ್ಗೆ ನಿಮ್ಮ ಮೇಷ್ಟ್ರುನ್ನ ಭೇಟಿ ಮಾಡೋಣ ಅಂತ ಹೋಗ್ತಿದ್ದೀವಿ. ನೀವು ನಮ್ಮ ಜತೆಗೆ ಬನ್ನಿ. ಹಾಗೇ ನಿನ್ನ ಸ್ನೇಹಿತರಾದ ವೇದಾಂತ, ಹರಿ ಹಾಗೂ ಎಲ್ಲರಿಗೂ ಹೇಳಿ ಕರ್ಕೊಂಡ್ ಬಾ ಹೋಗೋಣ.

(ಸರೀನಮ್ಮ ಅಂತ ಧರಣೇಶ ಹೊರಡ್ತಾನೆ. ಬಿಂದಿಗೆ ಎತ್ಕೊಂಡು ಸರೋಜ ಮನೆಯೊಳಕ್ಕೆ ಹೋಗ್ತಾಳೆ.)

(ಮತ್ತೊಂದು ದೃಶ್ಯ)

(ಧರಣೇಶ ಹಾಗೂ ಪಾರು ಓಡುತ್ತಾ ಹರಿಯ ಮನೆಯ ಹತ್ರ ಬರುತ್ತಾರೆ)

ಧರಣೇಶ : ಹರಿ... ಹರಿ...

ಹರಿ : ಏನೋ ಧರಣೇಶ (ಮನೆಯಿಂದ ಹೊರಗೆ ಬರುತ್ತಾ)

ಧರಣೇಶ : ಬಾ ವೇದಾಂತನ ಮನೆ ಹತ್ರ ಹೋಗೋಣ.

ಹರಿ : ವೇದಾಂತನ ಮನೆ ಹತ್ರಾನಾ ಯಾಕೋ...

ಧರಣೇಶ : ಬಾ ಅಲ್ಲೇ ಹೇಳ್ತೀನಿ.

(ಹರಿಯ ಮನೆಯಿಂದ ಬರ್ತಾನೆ. ಮೂವರು ಪರಸ್ಪರ ಕೈ ಹಿಡಿದುಕೊಂಡು ಹೊರಡ್ತಾರೆ)

(ಮತ್ತೊಂದು ದೃಶ್ಯ)

(ವೇದಾಂತನ ಮನೆಯ ದೃಶ್ಯ. ವೇದಾಂತ ಮತ್ತು ಪಾರು ತಿಂಡಿ ತಿನ್ನುತ್ತಿದ್ದಾರೆ. ಆಗ ಧರಣೇಶ, ಗೀತಾ ಮತ್ತು ಹರಿ ಬರ್ತಾರೆ)

ಹರಿ : ವೇದಾಂತ, ವೇದಾಂತ... ಎಲ್ಲಿದ್ದೀಯೋ...

ಲಕ್ಷ್ಮಮ್ಮ : (ಮನೆಯಿಂದ ಹೊರಗೆ ಬಂದು) ಬನ್ರಪ್ಪಾ ತಿಂಡಿ ತಿಂತಿದ್ದಾರೆ. ನೀವೂ ತಿನ್ನಿ ಬನ್ನಿ.

ಧರಣೇಶ : ಬೇಡಮ್ಮ ನಮ್ದು ಆಯ್ತು. ಇಲ್ಲೇ ಜಗುಲಿ ಮೇಲೆ ಕೂತಿರ್ತೀವಿ.

(ಧರಣೇಶ, ಪಾರು ಮತ್ತು ಹರಿ ಜಗಲಿ ಮೇಲೆ ಕೂತಿದ್ದಾರೆ. ಒಳಗಿನಿಂದ ವೇದಾಂತ ಮತ್ತು ಪಾರು ಹೊರಗೆ ಬರ್ತಾರೆ)

ವೇದಾಂತ : ಏನೋ ಎಲ್ಲಾ ಬಂದ್ರಾ ಆಟ ಆಡೋಕೆ ಬಂದ್ರಾ... ಬನ್ನಿ ಆಟ ಆಡೋಣ.

ಧರಣೇಶ : ಇಲ್ಲಾ... ಅಮ್ಮ ಹೇಳಿದರು ನಮ್ಮೂರ ಹೆಂಗಸರೆಲ್ಲಾ ಸಾರಾಯಿ ಅಂಗಡಿ ಬಗ್ಗೆ ಮಾತಾಡಲು ನಮ್ಮ ಮೇಷ್ಟ್ರ ಹತ್ರ ಹೋಗ್ತಾರಂತೆ. ನೀವೂ ಬನ್ನಿ ಹೋಗೋಣ. ಏನ್ ಮಾತಾಡ್ತಾರೋ ನೋಡೋಣ.

ವೇದಾಂತ : ಸರಿ ಸರಿ ಈಗ್ಲೆ ಹೋಗೋದಾ.

ಹರಿ : ಅಮ್ಮಂದಿರು ಹೋಗುವಾಗ ಜೊತೆಗೆ ಹೋಗೋಣ.

ಧರಣೇಶ : ರಮೇಶ, ರವಿ, ಪುಟ್ಟ, ದೇವ ಎಲ್ಲ ಬರ್ತಾರೇನೋ ಕೇಳೋಣ ಬನ್ರೊ.

ಶ್ರಮದ
ಮೂಲದಲ್ಲೇ
ಆನಂದದ
ಅನುಭವ
ಅಡಗಿದೆ



Scanned with OKEN Scanner

ದೃಶ್ಯ – 25

ಊರಿನ ಬೀದಿ ದೃಶ್ಯ

(ಮಧ್ಯಾಹ್ನದ ದೃಶ್ಯ. ಊರಿನ ಬೀದಿಯಲ್ಲಿ ಹೆಂಗಸರು ಮಕ್ಕಳೆಲ್ಲಾ ಗುಜುಗುಡುತ್ತ ಮೇಷ್ಟ್ರ ಮನೆ ಹತ್ರ ಹೋಗುತ್ತಿರುವುದು.)

ಮೇಷ್ಟ್ರು ಮನೆ ವರಾಂಡ

(ಮೇಷ್ಟ್ರು ಮನೆಯ ಮುಂದಿನ ವರಾಂಡದಲ್ಲಿ ಕೂತು ಪುಸ್ತಕ ಓದುತ್ತಿರುವ ದೃಶ್ಯ. ಇದೇ ವೇಳೆ ಹೆಂಗಸರು ಮಕ್ಕಳು ತಮ್ಮ ಮನೆಯ ಹತ್ತಿರ ಗುಂಪು ಕಟ್ಟಿಕೊಂಡು ಬರುತ್ತಿರುವುದು ಕಂಡು ಮೇಷ್ಟ್ರು ಆಶ್ಚರ್ಯಚಕಿತರಾಗಿ ಓದುತ್ತಿರುವ ಪುಸ್ತಕ ಮಡಗಿ ಬಿಟ್ಟರು. ಮೇಷ್ಟ್ರು ಮನೆ ಮುಂದೆ ಎಲ್ಲಾ ಹೆಂಗಸರು ಮಕ್ಕಳು ಬಂದರು)

ಮೇಷ್ಟ್ರು : ಏನ್ರಮ್ಮಾ ಊರ ಹೆಂಗಸರು ಮಕ್ಕಳೆಲ್ಲಾ ಹೀಗೆ ಒಟ್ಟಾಗಿ ಬಂದ್ ಬಿಟ್ಟಿದ್ದೀರಾ...

ಲಕ್ಷ್ಮಿ : ನಿಮಗೆ ಗೊತ್ತಲ್ಲ ಮೇಷ್ಟ್ರೇ... ಆ ಸಾಹುಕಾರ ಮೋಹನಪ್ಪ ನಮ್ಮೂರಿನ ನಗು ಕಿತ್ಕೊಳ್ಳೋಕ್ಕೆ ಅಂತಲೇ ಸಾರಾಯಿ ಅಂಗಡಿ ತಂದಿಟ್‌ಬಿಟ್ಟವನೆ. ಇದರಿಂದ ನಮ್ಮೂರ ಗಂಡಸರೆಲ್ಲಾ ಕುಡಿದು ಅಮಲೇರಿ ದಾರಿಯಲ್ಲಿ ಹೋಗಿ ಬರೋ ಹೆಂಗಸರನ್ನ ಒಂಥರಾ ನೋಡ್ತಾರೆ. ಚೋಟುದ್ದಾ ಇದ್ದಾನಲ್ಲಾ ಟೊಳ್ಳೇನು, ಅವನು ರಾತ್ರಿಯಲ್ಲಿ ನನ್ನ ಜೊತೆ ಚೇಷ್ಟೆ ಮಾಡ್ದ.

ಇವತ್ತು ನಾನು ನಾಳೆ ಇನ್ಯಾರೋ. ಹಿಂಗಾದ್ರೆ ಹೆಂಗೆ ಮೇಷ್ಟ್ರೇ. ಮರ್ಯಾದಸ್ತ ಹೆಣ್ಣು ಮಕ್ಕಳು ಊರಾಗ ಬಾಳೋದು.

ಸರೋಜಮ್ಮ : ಅದಕ್ಕೆ ಮೇಷ್ಟ್ರೇ ಇದಕ್ಕೆಲ್ಲಾ ಒಂದು ಪರಿಹಾರ ಕಂಡ್ಕೊಬೇಕು ಅಂತಲೇ ನಿಮ್ಮ ಹತ್ರ ಬಂದಿರೋದು.

ಲಕ್ಷ್ಮಮ್ಮ : ಗಂಡಂದಿರು ಹಾದಿ ತಪ್ಪವರೆ. ಇರೊ ಪುಡಿಗಾಸು ಕುಡಿಯೋಕೆ ಬಳಸ್ತಾ ಇದ್ದಾರೆ.

ಶಾಂತಮ್ಮ : ಕಿಸೆಯಲ್ಲಿರುವ ಕಾಸು ಕದ್‌ಬಿಟ್ಟು ಕುಡಿದು ತೂರಾಡ್ತಾರೆ. ಮನೆಯಲ್ಲಿ ಉಪ್ಪಿದ್ರೆ ಮೆಣಸಿನಕಾಯಿ ಇಲ್ಲ, ಹಿಂಗಾದ್ರೆ ಸಂಸಾರ ನೆಡ್ಸೋದು ಹೇಗೆ ?

(ಅವರ ತಾಯಂದಿರು ಮೇಷ್ಟ್ರ ಹತ್ರ ದು:ಖ ತೋಡಿಕೊಳ್ಳೋವಾಗ ಮಕ್ಕಳ ಮುಖಗಳು ಆಕ್ರೋಶಭರಿತವಾಗಿರುತ್ತದೆ.)

ಮೇಷ್ಟ್ರು : ನಾನೂ ಗಮನಿಸ್ತಾ ಇದ್ದೀನಿ. ನಮ್ಮ ನಗುವಿನಹಳ್ಳಿಯು ಮೊದಲಿದ್ದಕ್ಕೂ ಸಾರಾಯಿ ಅಂಗಡಿ ಬಂದ ಮೇಲೂ ಬಾರೀ ಬದಲಾಗ್ಯೆತೆ. ಗಂಡಸರು ದುಡಿಯೋದಕ್ಕಿಂತ ಕುಡಿಯೋದಕ್ಕೆ ಒತ್ತು ಕೊಡ್ತಿದ್ದಾರೆ. ಇದಕ್ಕೆ ಪರಿಹಾರ ಅಂದ್ರ ಒಂದು ಅಬಕಾರಿ ಅಧಿಕಾರಿಗಳ ಗಮನ ಸೆಳೀಬೇಕು. ಇನ್ನೊಂದು ಸರ್ಕಾರಕ್ಕೆ ನಮ್ಮೂರಿಗೆ ಸಾರಾಯಿ ಅಂಗಡಿ ಬೇಡ ಅಂತ ಸಾರ್ವಜನಿಕವಾಗಿ ಪತ್ರ ಬರೀಬೇಕು. ಆ ಪತ್ರಕ್ಕೆ ಊರವರೆಲ್ಲಾ ಸಹ ಸಹಿ ಹಾಕಬೇಕು. ಎಂ.ಎಲ್.ಎ. ಹತ್ರ ನಮ್ಮ ಅಳಲನ್ನು ನೋಡಿಕೊಳ್ಳಬೇಕು. ಇದ್ಯಾವುದಕ್ಕೂ ಬಗ್ಗಲಿಲ್ಲ ಅಂದ್ರೆ ಒಂದೇ ಅಸ್ತ್ರ ನೀವೆಲ್ಲ ರೊಚ್ಚಿಗೆದ್ದು ಸಾರಾಯಿ ಅಂಗಡಿ ಸುಟ್ಟು ಹಾಕಬೇಕು.

Scanned with OKEN Scanner

ವಯ್ಯಾರಿ ಲಕ್ಷ್ಮಿ : ಏನ್ ಮೇಷ್ಟ್ರೇ, ನಾವು ಮೋಹನಪ್ಪನ ಎದುರು ಹಾಕಿಕೊಂಡು ಸಾರಾಯಿ ಅಂಗಡಿ ಸುಡಕ್ಕಾಗುತ್ತಾ. ಸುಟ್ಟು ನಾವು ಊರಾಗ ಬದುಕೋಕ್ಕೆ ಆಗುತ್ತಾ.

ಮೇಷ್ಟ್ರು : ಹಂಗಲ್ಲಮ್ಮ... ನಾನು ಸುಡೋದು ಕೊನೆ ಹಂತ ಹೇಳಿದ್ದು, ಮೊದಲ ಹಂತ ಮಾಡದೆ ಕೊನೆ ಹಂತಕ್ಕೆ ಯಾಕ್ ಹೋಗ್ತೀರಾ. ಇದಕ್ಕೆಲ್ಲಾ ಒಂದು ಪರಿಹಾರ ಹೇಳ್ತೀನಿ. ಅಲ್ಲಿಯವರೆಗೆ ಕಾಯಿರಿ. ಯಾರೂ ದುಡುಕಬೇಡಿ. ಇದು ಸಾಮಾನ್ಯ ವಿಷಯದಲ್ಲಿ ಯೋಚಿಸಬೇಕು. ಇದು ಅಂತಿಂತ ರೋಗವಲ್ಲ. ಮಾರಕ ರೋಗ ಬರಬಾರದಿತ್ತು ಬಂದಿದೆ. ಇನ್ನೆಂದೂ ಬಾರದಂತೆ ಬುಡ ಸಮೇತ ಕಿತ್ತು ಹಾಕಬೇಕು. ಎಲ್ಲಾ ಸೇರಿ ಕಿತ್ತು ಹಾಕೋಣ. ನಡೀರಿ ನಡೀರಿ ನಾನು ಇದರ ಬಗ್ಗೆ ಸಂಬಂಧಪಟ್ಟವರ ಹತ್ತಿರ ಮಾತಾಡ್ತೀನಿ.

ಎಲ್ಲರೂ : (ಒಕ್ಕೊರಲಿನಿಂದ) ಆಯ್ತು ಮೇಷ್ಟ್ರೇ...

(ಎಂದು ಕೈ ಮುಗಿದು ಮೇಷ್ಟ್ರು ಮನೆಯಿಂದ ಹೊರಡುತ್ತಾರೆ.)

Scanned with OKEN Scanner

ದೃಶ್ಯ – 26

ಮೋಹನಪ್ಪನ ಮನೆ ಆವರಣ

(ಸಾಹುಕಾರ ಮೋಹನಪ್ಪನ ಮನೆ ಆವರಣ. ಅಲ್ಲಿಗೆ ಮೇಷ್ಟ್ರು ಬರ್ತಾರೆ. ಮೋಹನಪ್ಪ ಚೇರಲ್ಲಿ ಕೂತು ಲೆಕ್ಕ ಬರೀತಿರ್ತಾನೆ. ಸಾಲ ಕೊಟ್ಟವನಿಗೆ ಬೈತಿರ್ತಾನೆ.)

ಮೋಹನಪ್ಪ : ನಾನೇನು ಧರ್ಮಛತ್ರ ಇಟ್ಕೊಂಡಿದ್ದಿನೇನೋ... ನೀನು ಕುಡಿಯೋಕೆ ನಾನು ಸಾಲ ಕೊಡಬೇಕಾ? ಕೊಡ್ತೀನೋ ಅದಕ್ಕೆ ನೀನು ನಿನ್ನ ಗದ್ದೆ ನನ್ನ ಹೆಸರಿಗೆ ಬರೆದುಕೊಡು. ಆಗ ಕೈ ತುಂಬಾ ಕಾಸು ಸಿಗುತ್ತೆ. ಕಂಠ ಪೂರ್ತಿ ಕುಡಿಯಬಹುದು.

(ಒಬ್ಬಾತ ಸಾಹುಕಾರನಿಂದ ಬೈಸಿಕೊಂಡು ಕೈ ಕಟ್ಟಿ ನಿಂತಿರ್ತಾನೆ)

(ಅದೇ ವೇಳೆ ಮೇಷ್ಟ್ರು ಒಳಗೆ ಪ್ರವೇಶಿಸಿದಾಗ ಮೇಷ್ಟ್ರು ಕಡೆ ನೋಡಿದ ಮೋಹನಪ್ಪ)

ಮೋಹನಪ್ಪ : ಬನ್ನಿ ಮೇಷ್ಟ್ರೇ ಬನ್ನಿ ಬನ್ನಿ... ಏನ್ ಇಷ್ಟು ದೂರ ಬಂದಿದ್ದು, ಕೂತ್ಕೊ ಬನ್ನಿ. ಲೇ ಬಸವ ಮೇಷ್ಟ್ರುಗೆ ಏನಾದರೂ ಕುಡಿಯೋಕೆ ಕೊಡೊ.

ಮೇಷ್ಟ್ರು : ನಾನು ಕೂತ್ಕೊಳ್ಳೋಕೆ ಬಂದಿಲ್ಲ ಸಾಹುಕಾರ್ರೇ...

ಸಾಹುಕಾರ : ಹಂಗಂದ್ರೆ ಏನ್ ಮೇಷ್ಟ್ರೇ ನಿಂತ್ಕೊಂಡೆ ಇರ್ತೀರಾ... ನಿಂತ್ಕೊಳ್ಳಿ ಏನ್ ವಿಷಯ ಹೇಳಿ. ನಿಮಗೂ ಸಾಲ ಗೀಲ ಬೇಕಿತ್ತಾ.

ಮೇಷ್ಟ್ರು : ನಾನು ನಿಮ್ಮತ್ರ ಸಾಲ ಕೇಳೊಕ್ಕೆ ಬಂದಿಲ್ಲಾ. ಈ ಊರಿನ ಹೆಂಗಸರು ಮತ್ತು ಮಕ್ಕಳ ರಾಯಭಾರಿಯಾಗಿ ಬಂದಿದ್ದೀನಿ.

ಸಾಹುಕಾರ : (ನಗುತ್ತಾ) ರಾಯಭಾರಿ... ಏನ್ ವಿಷಯಕ್ಕೆ ಮೇಷ್ಟ್ರೆ ?

ಮೇಷ್ಟ್ರು : ಊರ ಹೆಂಗಸರು ಮತ್ತು ಮಕ್ಕಳೆಲ್ಲಾ ಇವತ್ತು ನಮ್ಮ ಮನೆ ಹತ್ತಿರ ಬಂದು ಸಾರಾಯಿ ಅಂಗಡಿ ಬಂದಿದ್ದು, ನಮ್ಮ ಗಂಡಂದಿರು ಸಾರಾಯಿ ಕುಡಿದು ಹಾಳಾಗ್ತಿದ್ದಾರೆ. ಸಂಸಾರಕ್ಕೆ ಮಾರಕವಾಗಿದ್ದಾರೆ. ನಮ್ಮೂರಿಗೆ ಸಾರಾಯಿ ಅಂಗಡಿ ಬೇಡ. ಅದಕ್ಕೊಂದು ಪರಿಹಾರ ಕೊಡ್ಸಿ ಅಂತ ಬಂದು ನನ್ನತ್ರ ಅವಲತ್ತುಕೊಂಡ್ರು. ಇದರ ವಿರುದ್ಧ ನಾನು ಅಬಕಾರಿ ಅಧಿಕಾರಿಗಳಿಗೆ ಡಿ.ಸಿ. ಅವರಿಗೆ ಪತ್ರ ಬರೆಯೋಣ ಅಂತಿದ್ದೀನಿ. ಅದಕ್ಕೂ ಮುಂಚೆ ನಿಮ್ಮತ್ರ ಹೇಳಿ ಹೋಗೋಣ ನೀವೆ ಸಾರಾಯಿ ಅಂಗಡಿ ನಿಲ್ಸಿ ಅಂತ ಎಂದು ಬಂದೆ ಸಾಹುಕಾರ್ರೇ.

ಸಾಹುಕಾರ : (ನಗುತ್ತಾ) ದೂರು ಬರೀರಿ. ನೀವೇ ಬರೀರಿ. ಸಾರಾಯಿ ಅಂಗಡೀನಾ ಸುಮ್ನೆ ತಂದಿಲ್ಲಾ. ಯಾರ್‍ಯಾರಿಗೆ ಏನೇನು ಕೊಡಬೇಕೊ ಕೊಟ್ಟೇ ತಂದಿರೋದು. ನೀವು ದೂರು ಕೊಟ್ರು ಕಸದ ಬುಟ್ಟೀಗೆ ಎಸೀತಾರೆ. ಹೋಗಿ ಹೋಗಿ ಮಕ್ಕಳಿಗೆ ಅ ಆ ಇ ಈ ಕಲಿಸ್ತೀರೇನೋ

ಕಲಿಸಿ. ನನಗೆ ಉಪದೇಶ ಮಾಡಬೇಡಿ. ಇವತ್ತು ಇದ್ದು ನಾಳೆ ಹೋಗೋ ನಿಮಗೆ ಈ ಊರಿನ ಉಸಾಬರಿ ಯಾಕ್ರೀ ಬೇಕು.

ಮೇಷ್ಟ್ರು : ನಾನು ಒಳ್ಳೆಯ ಮಾತಲ್ಲಿ ನೀವು ಕೇಳ್ತೀರಾ ಅಂತ ಬಂದೆ. ಸಾಹುಕಾರ್ರೆ, ನೀವು ಈ ರೀತಿ ಅಹಂನಿಂದ ಮಾತಾಡ್ತೀರಾ, ನನ್ನಲ್ಲಿರುವ ಹೋರಾಟದ ಕಿಚ್ಚನ್ನು ಅಣಕಿಸಿದ್ದೀರಾ. ನೋಡಿ ನಿಮ್ಮ ಮುಂದೆಯೇ ಊರಿನ ಹೆಂಗಸರು, ಮಕ್ಕಳನ್ನು ಸೇರಿಸಿಕೊಂಡು ಸಾರಾಯಿ ಅಂಗಡಿ ಎತ್ತಂಗಡಿ ಮಾಡಿಸಿ ಊರ ಶುದ್ಧಗೊಳಿಸಲಿಲ್ಲಾ ಅಂದ್ರೆ ನಾನು ದೇಶಭಕ್ತನ ಮಗ ಮೇಷ್ಟ್ರು ಉಮೇಶಪ್ಪನಲ್ಲಾ.

ಸಾಹುಕಾರ : ಆಹಾ ಆಹಾ ಹೋಗ್ರಿ... ಹೋಗ್ರೀ... ಮೇಷ್ಟ್ರೇ ನನಗೆ ಸವಾಲಾಕ್ತೀರಾ. ವಿಧಾನ ಸೌಧದಿಂದ ಹಿಡಿದು ನಗುವಿನಹಳ್ಳಿ ಊರಿನವರೆಗೆ ಬೆಂಬಲ ಹೊಂದಿರುವ ನನಗೆ ಸಾಮಾನ್ಯ ಮೇಷ್ಟ್ರು ನೀನು ಸವಾಲ್ ಹಾಕ್ತೀಯಾ... *(ಮತ್ತೆ ನಗು)*

ಮೇಷ್ಟ್ರು : ಸವಾಲಲ್ಲ ಸಾಹುಕಾರ, ಸ್ವಾಭಿಮಾನದ ಸಂಕೇತ, ಜಾಗೃತಿಯ ಅರಿವು.

ಸಾಹುಕಾರ : ನಿನ್ನ ಪುರಾಣ ನಾನು ಕೇಳೋಕ್ಕೆ ಸಮಯ ಇಲ್ಲ, *(ಚೇರಿಂದ ತಳ್ಳುವ ದೃಶ್ಯ)*

ಮೇಷ್ಟ್ರು : ಪುರಾಣ ಅಲ್ಲ ಸಾಹುಕಾರ್ರೆ ಪುಣ್ಯದ ಕೆಲಸ. ಅನಾಚಾರ ಅನಾವರಣ ಮಾಡುವುದು ಸರಿ ಇಲ್ಲ ಸಾಹುಕಾರ್ರೇ.

ಸಾಹುಕಾರ : *(ನಿಂತುಕೊಂಡು)* ಅನಾಚಾರ ಅಲ್ಲ... ಆತ್ಮ ತೃಪ್ತಿಗೆ ಮಾಡುತ್ತಿರುವ ಲಾಭದ ವ್ಯಾಪಾರ.

Scanned with OKEN Scanner

ಮೇಷ್ಟ್ರು : ಇದು ವ್ಯಾಪಾರ ಅಲ್ಲ ಸಾಹುಕಾರ್ರೆ, ಸಂಸಾರಗಳನ್ನು ಹಾಳು ಮಾಡುವ ವ್ಯಭಿಚಾರ, ನೆಮ್ಮದಿ ಹಾಳು ಮಾಡುವ ನಿಮಗೆ ಧಿಕ್ಕಾರ.

ಸಾಹುಕಾರ : ಧಿಕ್ಕಾರ... ನನಗೆ ನೀವು ಧಿಕ್ಕಾರ ಹೇಳ್ತೀರಾ... ನನ್ನಲ್ಲಿ ಅಧಿಕಾರ ಇದೆ, ನೀವು ಏನೇ ಚಮತ್ಕಾರ ಮಾಡಿದ್ರೂ ಆಗಲ್ಲ ಹೋಗಿ ಹೋಗಿ.

ಮೇಷ್ಟ್ರು : ಹಣ ಅಧಿಕಾರದ ಮದದಲ್ಲಿ ಊರಿಗೆ ಸಾರಾಯಿ ಅಂಗಡಿ ತಂದು ಕುಹಕತೆಯಿಂದ ಮೆರೀತಿದ್ದೀರಾ ಸಾಹುಕಾರ್ರೇ... ಜನ ಮನಸ್ಸು ಮಾಡಿದ್ರೆ ಏನು ಬೇಕಾದ್ರೂ ಮಾಡ್ತಾರೆ. ನಿಮ್ಮ ಅಹಂಗೆ ತಕ್ಕ ಪಾಠ ಕಲಿಸ್ತಾರೆ. ನಿಮ್ಮ ಅಹಂಗೆ ತಕ್ಕ ಪರಿಣಾಮ ಎದುರಿಸಬೇಕಾಗುತ್ತೆ ನೋಡ್ತಾ ಇರಿ (ಎಂದು ಹೇಳಿ ಸಾಹುಕಾರನ ಮನೆಯಿಂದ ಹೊರಡ್ತಾರೆ ಮೇಷ್ಟ್ರು)

Scanned with OKEN Scanner

ದೃಶ್ಯ – 27

ಮರದ ಮೇಲೆ ಅಥವಾ ಬಂಡೆಯ ಮೇಲೆ (ಸಂಜೆ)

(ಗೀತಾ. ಪಾರು ಮರದ ಮೇಲೆ ಅಥವಾ ಬಂಡೆಯ ಮೇಲೆ ಗುಡ್ಡದ ಮೇಲೆ ಕೈ ಒತ್ತಿಕೊಂಡು ಕೂತಿರುವಂತಹ ದೃಶ್ಯ. ಹರಿ, ವೇದಾಂತ ನಿಂತಿದ್ದಾರೆ, ಧರಣೇಶ ಕಲ್ಲು ಎಸೆದುಕೊಳ್ಳುತ್ತ ಚಿಂತಾಕ್ರಾಂತರಾಗಿದ್ದಾರೆ ಮಕ್ಕಳೆಲ್ಲಾ)

ವೇದಾಂತ : ನಮ್ಮ ಅಪ್ಪಂದಿರು ಸಾರಾಯಿ ಅಂಗಡಿ ಬಂದ ಮೇಲೆ ಕುಡಿತಕ್ಕೆ ದಾಸರಾಗಿದ್ದಾರೆ. ಬರೀ ನಮ್ಮೊಬ್ಬರ ಕತೆ ಅಂದುಕೊಂಡ್ರೆ ಇಡೀ ಊರೂರ ಮನೆ ಕತೆ ಎಲ್ಲಾ ಇದೇ ಆಗಿದೆ. ಅಮ್ಮ ನೋಡಿದರೆ ಗೋಳೋ ಅಂತ ಅಳ್ತಾಳೆ. ಏನ್ರೋ ಮಾಡೋದು ಹಿಂಗಾಯ್ತು.

ಹರಿ : ನಮ್ಮ ಅಮ್ಮ ಮಡಿಕೆಯಲ್ಲಿ ಮಡಗಿದ್ದ ಪುಡಿಗಾಸು ಬಿಡದೆ ಕದ್ದೋಗಿದ್ದಾನೆ. ನನಗೆ ಫೀಜು ಕಟ್ಟಲು ಅಂತ ನನ್ನ ಪುಸ್ತಕದಲ್ಲಿಟ್ಟಿದ್ದನ್ನೂ ತೆಗೆದು ಕೊಂಡೋಗಿದ್ದಾನೆ. ಏನಾದ್ರು ಕೇಳಿದ್ರೆ ಅಮ್ಮನ ಮೇಲೆ ರೇಗ್ತಾನೆ, ಹೊಡೆಯಲು ಬರ್ತಾನೆ. ರಾತ್ರಿಯಾದ್ರೆ ಮನೇಲಿ ಜಗಳ ಜಗಳ..... ಅಮ್ಮಂದಿರೆಲ್ಲ ಮೇಷ್ಟ್ರ ಹತ್ರ ಹೋಗಿದ್ರು. ಮೇಷ್ಟ್ರ ಊರಿಗೆ ನ್ಯಾಯ ಕೊಡಿಸ್ತಾರಾ? ಮಾತಾಡೋ ಧರಣೇಶ ಸುಮ್ನೆ ಕೂತಿದ್ದೀಯಾ?

ಧರಣೇಶ : ನಾನು ಸುಮ್ನೆ ಕೂತಿಲ್ಲ, ಭಿನ್ನವಾಗಿ ಯೋಚಿಸ್ತಿದ್ದೇನೆ. ಅಬಕಾರಿ ಇಲಾಖೆಗೆ ಸಾರಾಯಿ

Scanned with OKEN Scanner

ಅಂಗಡಿ ಬೇಡ ಅಂತ ಕಾಗದ ಕೊಡೋದು, ಎಂ.ಎಲ್.ಎ.ಗೆ ದೂರು ಕೊಡೋದು, ಅವರ ಒತ್ತಡ ತರೋದು ಇದೆಲ್ಲಾ ಯಾಕೋ ನಂಗೆ ಸರಿ ಕಾಣಿಸ್ತಾ ಇಲ್ಲ. ಇದುಕ್ಕೆಲ್ಲಾ ಸಮಯ ಹಿಡಿಯುತ್ತೆ. ಅಷ್ಟೊತ್ತಿಗೆ ಊರವರೆಲ್ಲಾ ಕುಡಿದು ಇನ್ನಷ್ಟು ಹಾಳಾಗಿ ಹೋಗಿರ್ತಾರೆ. ಅದಕ್ಕೆ ಈಗಲೇ ನಾವೇ ಒಂದು ಪರಿಹಾರ ಕಾಣಬೇಕು ಅಂತ ನಿರ್ಧಾರಕ್ಕೆ ಬರಬೇಕು. ಅದೆಂದರೆ ನಮ್ಮ ಮೇಷ್ಟ್ರು ಹೇಳಿದ್ರಲ್ಲ ಕೊನೆಗೆ ದಂಗೆ ಏಳಬೇಕು ಅಂತ. ಅಂತಹ ದಂಗೆಯ ಹಾದಿಯನ್ನು ಹಿಡಿದು ನಾವು ಇವತ್ತೇ ರಾತ್ರಿ ಸಾರಾಯಿ ಅಂಗಡಿ ಸುಟ್ಟು ಹಾಕೋಣ. ನೀವೆಲ್ಲಾ ನನ್ನ ಕೈ ಜೋಡಿಸಿ, ರಾತ್ರಿ ಎಲ್ಲಾ ಮಲಗಿದ ಮೇಲೆ ಪಂಜು ಹಚ್ಚಿಕೊಡು ಕಿಚ್ಚು ಹಚ್ಚಿ ಸುಟ್ಟು ಕರಕಲು ಮಾಡಿಬಿಡೋಣ. (ಧರಣೇಶ ಕೈ ಮುಂದಿಡುತ್ತಾನೆ, ಹರಿ, ವೇದಾಂತರೂ ಧರಣೇಶನ ಕೈ ಮೇಲೆ ತಮ್ಮ ಕೈಗಳನ್ನಿಟ್ಟು ಸಮ್ಮತಿ ಸೂಚಿಸುತ್ತಾರೆ)

ವೇದಾಂತ : ಗೀತಾ, ಪಾರು ಈ ವಿಷಯ ಯಾರಿಗೂ ಹೇಳ್ಬೇಡಿ. ನಾವು ನಮ್ಮೂರಿಗೆ ಒಳ್ಳೆಯದು ಮಾಡ್ತೀವಿ ಸರೀನಾ...

ಪಾರು / ಗೀತಾ : (ಒಕ್ಕೊರಲಿನಿಂದ) ಅಣ್ಣ... ಅಣ್ಣಾ... ನಾವು ಬರ್ತೀವಿ. ಪ್ಲೀಸ್..... ನಿಮ್ಮ ಹೋರಾಟಕ್ಕೆ ನಾವೂ ಕೈ ಜೋಡಿಸ್ತೀವಿ ಅಣ್ಣಾ.

ಹರಿ : ಸರಿ... ಇವರೂ ಬರಲಿ ಬಿಡು ನಮಗೂ ಸಹಾಯವಾಗುತ್ತೆ.

Scanned with OKEN Scanner

ದೃಶ್ಯ – 28

ರಾತ್ರಿ ದೃಶ್ಯ

(ಮಕ್ಕಳು ಅವರವರ ಮನೆಗಳಲ್ಲಿ ಅಮ್ಮಂದಿರ ಪಕ್ಕ ಮಲಗಿರುತ್ತಾರೆ. ಅಮ್ಮ ಮಲಗೋ ತನಕ ಕಣ್ಣು ಮುಚ್ಚಿಕೊಂಡೇ ಯಾವಾಗ ಹೋಗುವುದು ಅನ್ನುವ ಯೋಚನೆಯಲ್ಲಿರುತ್ತಾರೆ.)

(ಹರಿ ಮನೆಯಿಂದ ನಿಧಾನವಾಗಿ ಹೊರಬಂದು ವೇದಾಂತನ ಮನೆ ಹತ್ತಿರ ಬರುತ್ತಾನೆ)

(ಅದೇ ಸಮಯಕ್ಕೆ ವೇದಾಂತ ಹಾಗೂ ಅವನ ತಂಗಿ ಪಾರು ಮನೆಯಿಂದ ಹೊರ ಬರುತ್ತಾರೆ)

(ಹರಿ, ವೇದಾಂತ, ಪಾರು ಮೂವರೂ ಜೊತೆಗೂಡಿ ಧರಣೇಶನ ಮನೆ ಹತ್ತಿರ ಹೋಗುವ ಸಮಯಕ್ಕೆ ಧರಣೇಶ ಗೀತಾಳೊಂದಿಗೆ ಎದ್ದು ಬರ್ತಾನೆ.)

(ಮೊದಲೇ ಪಂಜು ರೆಡಿ ಮಾಡಿಕೊಂಡಿರ್ತಾರೆ, ಅದನ್ನು ಧರಣೇಶ, ಹರಿ, ವೇದಾಂತ ಎತ್ತಿಕೊಳ್ತಾರೆ. ನಿಧಾನವಾಗಿ ಸುತ್ತಮುತ್ತ ನೋಡುತ್ತಾ ಭಯದಿಂದ ಸಾರಾಯಿ ಅಂಗಡಿಯತ್ತ ಹೆಜ್ಜೆ ಹಾಕುತ್ತಾರೆ)

Scanned with OKEN Scanner

ಸಾರಾಯಿ ಅಂಗಡಿ ದೃಶ್ಯ

(ಸಾರಾಯಿ ಅಂಗಡಿ. ಕುಡುಕರೆಲ್ಲಾ ಹೋಗಿರ್ತಾರೆ. ಇವತ್ತಿನ ದಿನದ ವ್ಯಾಪಾರವನ್ನು ದೀಪದ ಬೆಳಕಲ್ಲಿ ಕ್ಯಾಷಿಯರ್ ಲೆಕ್ಕ ಹಾಕುತ್ತಾ ಕೂತಿರ್ತಾನೆ.)

(ಅದೇ ವೇಳೆಗೆ ಐದೂ ಮಕ್ಕಳು ಅಲ್ಲಿಗೆ ಬರುತ್ತಾರೆ. ದೀಪದ ಬುಡ್ಡಿಯಲ್ಲಿ ಕ್ಯಾಷಿಯರ್ ಹಣ ಎಣಿಸುತ್ತಿರುವುದು ಕಂಡು ದಿಗಿಲುಗೊಂಡು ಪಕ್ಕಕ್ಕೆ ಸರಿಯುತ್ತಾರೆ. ಶಬ್ದ ಆಗುತ್ತೆ. ಅದು ಕ್ಯಾಷಿಯರ್‌ಗೆ ಕೇಳಿಸುತ್ತದೆ. ಏನು ಶಬ್ದ ಅಂತ ಕ್ಯಾಷಿಯರ್ ಹೊರಬಂದು ನೋಡ್ತಾನೆ. ಆತ ಹೊರಗೆ ಬಂದಾಗ ಮಕ್ಕಳು ಬಚ್ಚಿಟ್ಟು ಕೊಳ್ತಾರೆ. ಕ್ಯಾಷಿಯರ್ ಸುತ್ತ ಮುತ್ತ ನೋಡಿ ಏನೂ ಕಾಣದಿದ್ದಾಗ ಒಳಗೆ ಹೋಗಿ ಬಾಗಿಲು ಹಾಕಿಕೊಳ್ತಾನೆ)

ವೇದಾಂತ : (ಪಿಸು ಮಾತಿನಲ್ಲಿ) ಸಾಹುಕಾರನ ಚೇಲಾ ಬಸ್ಯಾ ಅವ್ನೆ.

ಹರಿ : ಏನ್ರೋ ಮಾಡೋದು ಸುಡಕ್ಕಾಗಲ್ವೇನೊ...

ಧರಣೇಶ : ಏನೇ ಆಗಲಿ ಸುಡೋದು ಸುಡೋದೇ... ಅವನು ಒಳಹೋಗಿ ಬಾಗಿಲಾಕಿ ಕೊಂಡವ್ನೆ. ವೇದಾಂತ ತೊಗೊ ಪಂಜು. ಹರಿ ಗೀಚು ಕಡ್ಡಿ. ಪಾರು, ಗೀತಾ ನೀವು ಇಲ್ಲೇ ನಿಂತ್ಕೊಳ್ಳಿ.

(ಆ ವೇಳೆಗೆ ಪಂಜು ಹತ್ತಿಕೊಳ್ಳುತ್ತೆ. ಮೂವರೂ ಒಂದೊಂದು ಹಿಡಿದು ಮೂರು ಕಡೆ ಹಚ್ಚುತ್ತಾರೆ. ಪಂಜು ಹಚ್ಚಿ ಗೀತಾ, ಪಾರು ಹತ್ತಿರ ಬರ್ತಾರೆ.)

(ಸಾರಾಯಿ ಅಂಗಡಿ ಒಳಗೆ ಮಲಗಿರೋ ಬಸ್ಯಾನಿಗೆ ಬಿಸಿಯ ಕಾವು ಗೊತ್ತಾಗಿ ಗಾಬರಿಯಿಂದ ಹೊರಬರ್ತಾನೆ. ಐದು ಮಕ್ಕಳೂ ಈತನನ್ನು ನೋಡಿ ಓಡ್ತಾರೆ. ಬಸ್ಯಾ ಮಕ್ಕಳು ಓಡುವುದನ್ನು ನೋಡಿ)

ಬಸ್ಯಾ : ನಿಂತ್ಕೊಳ್ರೋ..... ನಿಂತ್ಕೊಳ್ರೋ....... *(ಅಂತ ಹಿಡಿಯಲು ಓಡ್ತಾನೆ. ಸಾರಾಯಿ ಅಂಗಡಿ ಸುಡುತ್ತಿರುವುದನ್ನು ಕಂಡು)* ಅಯ್ಯೋ..... ಸಾರಾಯಿ ಅಂಗಡಿ ಸುಟ್ಟೋಯ್ತಲ್ಲಾ...... *(ಅಂತ ತಲೆ ಮೇಲೆ ಕೈ ಹೊತ್ತುಕೊಂಡು ಕೂರ್ತಾನೆ)* ಈ ವಿಷಯ ಸಾಹುಕಾರ್ರಿಗೆ ಹೋಗಿ ಹೇಳಬೇಕು... *(ಅಂತ ಬಿರುಬೀಸಾಗಿ ಸಾಹುಕಾರನ ಮನೆ ಕಡೆ ಹೋಗ್ತಾನೆ)*

(ಇತ್ತ ಮಕ್ಕಳು ಸಾಹುಕಾರನ ಚೇಲಾ ನೋಡಿದ ಎಂಬ ಭಯದಲ್ಲಿ ಮನೇಗೆ ಹೋಗೋದು ಸರಿಯಲ್ಲ ಅಂತ ತಿಳಿದುಕೊಂಡು ಕಾಡಿನತ್ತ ಓಡ್ತಾರೆ. ಓಡ್ತಾ ಓಡ್ತಾ ಎದ್ದು ಬಿದ್ದು ಮುಳ್ಳು ಚುಚ್ಕೊಂಡು ಸಾಕಷ್ಟು ದೂರ ಓಡ್ತಾರೆ. ಪಂಜು ಅಲ್ಲಿಗೆ ಆರಿ ಹೋಗುತ್ತೆ. ಒಂದು ಜಾಗ ಸಿಗುತ್ತೆ.)

ಪಾರು, ಗೀತಾ : ಅಣ್ಣಾ... ಅಣ್ಣಾ... ನಮಗೆ ಸುಸ್ತಾಗುತ್ತೆ ಆಗಲ್ಲ ಕಣಣ್ಣ.

(ತಂಗಿಯರನ್ನು ಜೋಪಾನ ಮಾಡ್ಕೊಂಡು ಅಲ್ಲಿಯೇ ಮಲಗ್ತಾರೆ. ಆದರೂ ಅವರ ಎದೆಯಲ್ಲಿ ಭಯದ ನಡುಕ ಇದ್ದೇ ಇರುತ್ತೆ)

ದೃಶ್ಯ – 29

<u>ಮಧ್ಯರಾತ್ರಿ ದೃಶ್ಯ</u>

(ಬಸ್ಯಾ ಬಿರುಸಾಗಿ ಹೋಗುತ್ತಾ ಸಾಹುಕಾರನ ಮನೆ ಹತ್ತಿರ ಓಡಿ ಬಂದು ಏದುಸಿರು ಬಿಡುತ್ತಾ ಬಾಗಿಲು ಬಡಿಯುತ್ತಾನೆ)

ಬಸ್ಯಾ : ಬುದ್ದಿ... ಬುದ್ದಿ.......

(ಸಾಹುಕಾರ ಮೋಹನಪ್ಪ ಹೊರಗಿನ ಲೈಟ್ ಹಾಕ್ಕೊಂಡು ಗೊಣಗಿಕೊಂಡು ಬಾಗಿಲು ತೆರೆಯುತ್ತಾನೆ)

ಮೋಹನಪ್ಪ : ಈಟೊತ್ತಿನ ರಾತ್ರೀಲಿ ಯಾವನ್ಲಾ ಅವ್ನು.*(ಬಸ್ಯನನ್ನು ಕಂಡು)* ಮಂಗ್ ನನ್ ಮಗನೆ ಸಾರಾಯಿ ಜಾಸ್ತಿಯಾಗಿ ನಮ್ಮನೆ ಕದ ತಟ್ಟಿದ್ದೀಯಾ ? ಸಾರಾಯಿ ಅಂಗಡಿ ಕಾಯೋದ್ ಬಿಟ್ಟು ಇಲ್ಲಿಗ್ಯಾಕೋ ಬಂದಿದ್ದೀಯಾ......

ಬಸ್ಯಾ : ಹಂಗಲ್ಲಾ ಬುದ್ದಿ... ಹಂಗಲ್ಲಾ ಬುದ್ದಿ... ದಡಿಯಾ, ಕರಿಯಾ, ಕೃಷ್ಣನ ಮಕ್ಳುಗಳು ಪಂಜು ಹಿಡ್ಕೊಂಡು ಬಂದು ನಮ್ಮ ಸಾರಾಯಿ ಅಂಗಡೀನ ಸುಟ್ಟಾಕವ್ರೇ. ನಾನು ಹಿಡ್ಕೊಳ್ಳೋಕೆ ಹೋದೆ, ತಪ್ಪಿಸಿಕೊಂಡು ಕಾಡಿನ ಕಡೆ ಓಡೋಗ್ ಬಿಟ್ರು. ಇವತ್ತಿನ ಕಲೆಕ್ಷನ್ನು, ಉಳಿದಿದ್ದ ಸಾರಾಯಿ ಎಲ್ಲಾ ಸುಟ್ಹೋಯ್ತು ಬುದ್ದಿ *(ಅಂತ ಗೋಳೋ ಅಂತ ಅಳ್ತಾನೆ)*

ಮೋಹನಪ್ಪ : ಎಲಾ ಬಡ್ಡೀ ಮಕ್ಳಾ..... ನನ್ನ ಸಾರಾಯಿ ಅಂಗಡಿ ಸುಟ್ಟು ಹಾಕೋ ಧೈರ್ಯ ಬಂತಾ. ಇನ್ನೂ ಚೋಟುದ್ದ ಇಲ್ಲಾ ಇವತ್ತು ನೀವು ನನ್ ಸಾರಾಯಿ ಅಂಗಡಿ ಸುಟ್ಟಿದ್ದೀರಾ. ಮುಂದೆ ನಾನು ನಿಮ್ಮನ್ನು ಸುಡ್ತೀನಿ... ನಿಮ್ಮ ಮನೆಗಳ್ನ ಸುಡ್ತೀನಿ, ಇಡೀ ಊರನ್ನೇ ಸುಡ್ತೀನಿ (ಅಂತ ಆಕ್ರೋಶದಿಂದ) ರಾಮ, ಕೆಂಪ, ಗಂಗ ಬರ್ರೋ ಇಲ್ಲಿ......

ಆಳುಗಳು : (ಅಕ್ಕ ಪಕ್ಕದಿಂದ ಓಡಿ ಬಂದು) ಏನ್ ಬುದ್ದಿ... ಏನ್ ಬುದ್ದಿ...

ಮೋಹನಪ್ಪ : ದಡಿಯಾ, ಕರಿಯಾ, ಕೃಷ್ಣ ಇವರ ಐದು ಮಕ್ಳು ಸೇರಿ ನಮ್ಮ ಸಾರಾಯಿ ಅಂಗಡಿ ಸುಟ್ಟು ಹಾಕವ್ರಂತೆ. ಕಾಡಿನ ಕಡೆಗೆ ಓಡಿ ಹೋಗವ್ರಂತೆ. ಈಗ್ಲೇ ನೀವು ಹೋಗಿ ಹುಡ್ಕೊಂಡ್ ಬನ್ನಿ. ಆ ನನ್ನ ಮಕ್ಳಿಗೆ ಕೈ ಮೇಲೆ ಬರೆ ಹಾಕ್ತೀನಿ. ಬದುಕಿನ ಪಾಠ ಕಲಿಸ್ತೀನಿ.

(ಸಾಹುಕಾರ ಕೋಪದಿಂದ ಮನೆಯೊಳಕ್ಕೆ ಹೋಗಿ ಬಾಗಿಲು ಹಾಕ್ಕೊಳ್ತಾನೆ. ಆಳುಗಳು ಸಾಹುಕಾರನ ಆಜ್ಞೆಯಂತೆ ಸರಿರಾತ್ರಿಯಲ್ಲಿ ಮಕ್ಕಳನು ಹುಡುಕಲು ಪಂಜನ್ನು ಹಿಡ್ಕೊಂಡು ಹೊರಡ್ತಾರೆ)

ದೃಶ್ಯ – 30

ಊರಿನ ಟೀ ಅಂಗಡಿ (ಬೆಳಗಿನ ದೃಶ್ಯ)

(ಊರಿನ ಟೀ ಅಂಗಡಿಯ ಮುಂದೆ ಊರ ಕೆಲವು ಗಂಡಸರು ಟೀ ಕುಡಿಯುತ್ತಾ ಬೀಡಿ ಸೇದುತ್ತಾ ಕುಳಿತುಕೊಂಡು ಸಾರಾಯಿ ಅಂಗಡಿ ಸುಡುತ್ತಿರುವ ದೃಶ್ಯದ ಬಗ್ಗೆ ಮಾತುಕತೆ ಆಡುತ್ತಿದ್ದಾರೆ)

ಒಬ್ಬ : ವಿಷ್ಯ ಗೊತ್ತಾಯ್ತೇನ್ರಲಾ

ಇನ್ನೊಬ್ಬ : ಏನ್ಲಾ ಅದು......

ಒಬ್ಬ : ಕರಿಯ, ದಡಿಯಾ, ಕೃಷ್ಣನ ಮಕ್ಕಳು ಸೇರ್ಕೊಂಡು ಸಾಹುಕಾರನ ಸಾರಾಯಿ ಅಂಗಡಿ ಸುಟ್ಟವರಂತೆ....

ಇನ್ನೊಬ್ಬ : ಯಾವಾಗಂತೆ

ಒಬ್ಬ : ರಾತ್ರಿಯಂತೆ

ಮಗದೊಬ್ಬ : ಅಷ್ಟೇ ಅಲ್ಲ ಕಣ್ಲಾ ಮನೇಗೆ ಬಂದಿಲ್ವಂತೆ. ಅದೆಲ್ಲಿ ಹೋಗವ್ರೋ ಗೊತ್ತಿಲ್ವಂತೆ. ಬೆಳಿಗ್ಗೆ ಧರಣೇಶನ ಅಮ್ಮ ಗಾಬರಿಗೊಂಡಿದ್ಲು.

ಮತ್ತೊಬ್ಬ : ಅಲ್ಲಾ ಈ ಮಕ್ಕಿಗೆ ಏನಾಗಬೇಕಿತ್ತು ?

ಮಗದೊಬ್ಬ : ಸಾಹುಕಾರ ಮಕ್ಳನ್ನು ಹುಡುಕಲು ಆಳುಗಳ್ನ ಕಳಿಸವನಂತೆ. ಅವನ ಕೈಗೆ ಸಿಕ್ಕರೆ ಪಾಪ ಮಕ್ಳಿಗೆ ಏನ್ ಕಾದಿದೆಯೋ ಗ್ರಹಚಾರ.

ಒಬ್ಬ : ಆ ಸಾಹುಕಾರ ಮೊದಲೇ ದುಷ್ಟ, ಕೋಪಿಷ್ಟ. ಮಕ್ಳಿಗೆ ಏನ್ ತೊಂದ್ರೆ ಮಾಡ್ತಾನೋ...

ಇನ್ನೊಬ್ಬ : ಮಕ್ಳು ಒಳ್ಳೆ ಕೆಲ್ಸ ಮಾಡೌವ್ರೆ ಬಿಡ್ರಲಾ. ನಾವು ಮಾಡ್ಬೇಕಾದ್ದು ಅವರೇ ಮಾಡವರೆ. ಅವರ ಧೈರ್ಯಕ್ಕೆ ಮೆಚ್ಚಬೇಕು.

ಮತ್ತೆ ಇನ್ನೊಬ್ಬ : ಊರು ಹಾಳಾಗೋದನ್ನ ಮಕ್ಳು ತಪ್ಪಿಸವರೆ ಬಿಡ್ರಲಾ...

(ಅದೇ ವೇಳೆಗೆ ಧರಣೇಶನ ಅಮ್ಮ ಸರೋಜ, ವೇದಾಂತನ ಅಮ್ಮ ಲಕ್ಷ್ಮಮ್ಮ, ಹರಿಯ ಅಮ್ಮ ಶಾಂತಮ್ಮ ಮೂವರೂ ಒಟ್ಟಾಗಿ ಅದೇ ಹಾದಿಯಲ್ಲಿ ಗಾಬರಿಯಲ್ಲಿ ಕಣ್ಣೀರು ಹಾಕುತ್ತಾ ಮಕ್ಕಳ ಸುಳುವು ಹುಡುಕಿಕೊಂಡು ಬರ್ತಿದ್ದಾರೆ)

ಸರೋಜ : ಅಣ್ಣಾ ರಾಮಣ್ಣ... ನಮ್ಮ ಮಕ್ಳೇನಾದ್ರೂ ಎಲ್ಲಾದ್ರೂ ನೋಡಿದ್ರಾ

ರಾಮಣ್ಣ : ಇಲ್ಲ ಸರೋಜಕ್ಕ

ಒಬ್ಬ : ಓ ನಿಮ್ಮ ಮಕ್ಕಳು ಬಾರೀ ಘನಂದಾರಿ ಕೆಲಸ ಮಾಡೌವ್ರೆ ಬಿಡ್ರಿ. ಮಾಡಬಾರದ್ದು ಮಾಡಿ ಎಲ್ಲಿ ಹೋಗಿ ಅವಿತುಕೊಂಡವರೋ. ಆ ಸಾಹುಕಾರನ ಕೈಗೆ ಸಿಕ್ರೆ ಬಿಡ್ತಾನಾ ?

ಲಕ್ಷ್ಮಮ್ಮ : ಇಲ್ಲ ಸುಮ್ಕಿರಣ್ಣ... ನಮಗೂ ಗೊತ್ತಿಲ್ಲ ರಾತ್ರಿ ಮಲಗಿದ್ದವರು ಯಾವಾಗ ಎದ್ದು ಹೋದ್ರೋ... ಹೋಗಿ ಇಂತ ಕೆಲಸ ಮಾಡೌರೇ.

ಇನ್ನೊಬ್ಬ : ಬಿಡು ಲಕ್ಷ್ಮಮ್ಮ... ನಿಮ್ಮ ಮಕ್ಕಳ ಧೈರ್ಯಾನಾ ಮೆಚ್ಚಬೇಕು. ಆ ಸರಿ ರಾತ್ರೀಲಿ ಹೋಗಿ ಸಾಹುಕಾರನ ವಿರುದ್ಧ ಕಟ್ಟಿಕೊಂಡು ಆತನ ಸಾರಾಯಿ ಅಂಗಡಿ ಸುಡೋದು ಅಂದ್ರೆ ಸಾಮಾನ್ಯನಾ...

ಶಾಂತಮ್ಮ : ಅಯ್ಯೋ ಎಲ್ಲವರೋ ಏನ್ ಮಾಡ್ತಾವ್ರೋ... ಆ ಸಾಹುಕಾರನ ಕೈಗೆ ಎಲ್ಲಿ ಸಿಕ್ಕವರೋ, ಎಲ್ಲಿ ಕೂಡಿಹಾಕವನೋ... *(ಅಂತ ಅಳುತ್ತಾ ಸೀರೆ ಸೆರಗಲ್ಲಿ ಕಣ್ಣೀರು ಒರೆಸಿಕೊಳ್ಳುವಳು)* ಎಲ್ಲಾದರೂ ಸಿಕ್ಕಿದ್ರೆ ವಿಷಯ ತಿಳಿಸಿ. ಇಲ್ಲಾ ನೀವೇ ಕರ್ಕೊಂಡು ಬನ್ರಪ್ಪಾ *(ಅಂತ ಮೂವರೂ ಅಳುತ್ತಾ ಹೇಳಿ ಹೊರಡುತ್ತಾರೆ)*

ದೃಶ್ಯ – 31

ಕಾಡಿನ ದೃಶ್ಯ (ಬೆಳಿಗ್ಗೆ)

(ಬೆಳಿಗಿನ ಸಮಯ. ಕಾಡಿನ ಮಧ್ಯದ ಬಯಲಲ್ಲಿ ಮಲಗಿದ್ದ ಮಕ್ಕಳಿಗೆ ಸೂರ್ಯ ನೆತ್ತಿಗೇರುತ್ತಿದ್ದಂತೆ ಬಿಸಿಲು ಚುರುಗುಟ್ಟಿ ಎಚ್ಚರಗೊಳ್ಳುತ್ತಾರೆ.)

ಗೀತಾ : ಅಯ್ಯೋ ನಾವು ಕಾಡಿನಲ್ಲಿದ್ದೀವಿ.

ಧರಣೀಶ : ಅಲ್ಲಿ ಹೊಳೆ ಹರೀತಾ ಇದೆ ಬರ್‍ರ್ರೋ ಮುಖ ತೊಳೆಯೋಣ.

(ಅಂತ ಕರ್‍ಕೊಂಡು ಹೋಗ್ತಾನೆ. ಎಲ್ರೂ ಕೈ ಕಾಲು ಮುಖ ತೊಳೆದು ಪಕ್ಕದಲ್ಲೇ ಕೂರ್‍ತಾರೆ)

ಪಾರು : ಅಣ್ಣಾ ನನಗೆ ಹೊಟ್ಟೆ ಹಸಿವಾಗ್ತಿದೆ

ಗೀತಾ : ನನಗೆ ಭಯವಾಗ್ತಿದೆ

ಧರಣೀಶ : ನಾನು ಮೊದಲೇ ಹೇಳಲಿಲ್ವಾ ನೀವು ಬರಬೇಡಿ ಅಂತ. ಇಲ್ಲಿ ತಿನ್ನೋದಕ್ಕೆ ಏನು ಸಿಗುತ್ತೆ. ಈಗ ಭಯ ಏಕೆ ಬೀಳ್ತೀರಿ. ನಾವಿದ್ದೀವಿ. ಮೊದಲೇ ನನ್ನ ಮಾತು ಕೇಳಿ ಮನೆಯಲ್ಲಿ ಇದ್ದರೆ ಇದೆಲ್ಲಾ ಅನುಭವಿಸುವುದು ತಪ್ಪಿತ್ತಾ. ಅಮ್ಮಂದಿರು ಭಯಗೊಂಡವ್ರೇನೋ...

Scanned with OKEN Scanner

ವೇದಾಂತ : ಆ ಕಡೆ ಹೋಗೋಣ ಬನ್ರಿ. ಅಲ್ಲೇನಾದ್ರೂ ತಿನ್ನೋಕ್ಕೆ ಸಿಗುತ್ತೇನೋ

(ಕಾಡಿನ ಮಧ್ಯೆ ತಿನ್ನಲು ಏನಾದರೂ ಸಿಗುತ್ತಾ ಅಂತ ಹುಡುಕುತ್ತಿರುವ ದೃಶ್ಯ. ಕೊನೆಗೆ ಹಲಸಿನ ಮರ ಸಿಗುತ್ತೆ. ಅದರಲ್ಲೊಂದು ಹಣ್ಣು ಸಿಗುತ್ತೆ. ಹಣ್ಣು ಕಂಡು ಖುಷಿಯಾಗಿ ಅಲ್ಲಿಂದ ಅದನ್ನು ಎತ್ತಿಕೊಂಡು ಬಯಲಿಗೆ ಹೋಗಿ, ಅಲ್ಲಿ ಕಲ್ಲಿನಿಂದ ಚಚ್ಚಿಕೊಂಡು ಎಲ್ಲರೂ ಹಸಿವು ನೀಗುವವರೆಗೆ ತಿನ್ನುತ್ತಾರೆ. ತಿಂದು ಮುಗಿಸುತ್ತಿದ್ದಂತೆ ತರಗಲೆಯ ಶಬ್ದ ಕೇಳಿಬರುತ್ತೆ. ಯಾರೋ ಬರುತ್ತಿರುವುದರ ಸುಳಿವು ನೀಡುತ್ತೆ.)

ಧರಣೇಶ : ಶ್... ನಮ್ಮನ್ನ ಯಾರೋ ಹುಡುಕಿಕೊಂಡಿ ಬರ್ತಿದ್ದಾರೆ. ಇಲ್ಲೇ ಇದ್ರೆ ಸಿಕ್ಕಿ ಬೀಳ್ತೀವಿ ನಡೀರಿ ಓಡೋಣ...

(ಅಪಾಯದ ಸುಳಿವರಿತು ಮಕ್ಕಳು ಅಲ್ಲಿಂದ ಓಡುತ್ತಾರೆ. ಹಲಸಿನ ಹಣ್ಣು ತಿಂದ ಜಾಗಕ್ಕೆ ಸಾಹುಕಾರನ ಆಳುಗಳು ಬಂದು)

ಆಳು : ಮಕ್ಕಳು ಇಲ್ಲೇ ಎಲ್ಲೋ ಇದಾರೆ... (ಮಕ್ಕಳು ಒಂದು ಕಡೆ ಓಡುತ್ತಿರುವುದನ್ನು ಕಂಡು) ಅಲ್ಲೀ ಓಡ್ತಿದ್ದಾರೆ ... ಬನ್ರೋ...

(ಮಕ್ಕಳು ಓಡುತ್ತಿರುವುದನ್ನು ಕಂಡು ಆಳುಗಳೂ ಕೂಡ ಮಕ್ಕಳ ಹಿಂದೆ ಓಡುತ್ತಾರೆ. ಹೀಗೇ ಒಂದಷ್ಟು ಸಮಯ ಓಡುವರು. ಕೊನೆಗೆ ಮಕ್ಕಳು ಓಡಿ ಓಡಿ ಸುಸ್ತಾಗಿ ಒಂದು ಮರದ ನೆರಳಲ್ಲಿ ತಪ್ಪಿಸಿಕೊಂಡೆವೆಂಬ ಭಾವದಲ್ಲಿ ಬಂದು ಕೂತು ಓಡಿ ಓಡಿ ಆಯಾಸವಾಗಿದ್ದರಿಂದ ನೆಲದ ಮೇಲೆ ಮಲಗಿಕೊಂಡು ಕಣ್ಣು ಮುಚ್ಚುತ್ತಾರೆ. ಕಣ್ಣು ಬಿಡುವ ವೇಳೆಗೆ ಸಾಹುಕಾರನ ಐದು ಮಂದಿ ಆಳುಗಳು ಮಕ್ಕಳ ಸುತ್ತ ನಿಂತಿರ್ತಾರೆ. ಕಣ್ಣು ಬಿಟ್ಟಾಗ ಇವರನ್ನು ಕಂಡ ಮಕ್ಕಳು ದಿಗಿಲಾಗುತ್ತಾರೆ. ಸಾಹುಕಾರನ ಚೇಲಾಗಳು ಗಹಿ ಗಹಿಸಿ ನಗುತ್ತಾರೆ)

ಆಳುಗಳು : ಹ್ಹ ಹ್ಹ ಹ್ಹ....... ಹ್ಹ ಹ್ಹ ಹ್ಹಾ...... ಹ್ಹ ಹ್ಹ ಹ್ಹ ಹ್ಹ ಹ್ಹಾ ಹ್ಹಾ

ಗಂಗ : ಸಾಹುಕಾರರ ಸಾರಾಯಿ ಅಂಗಡಿಗೆ ಬೆಂಕಿ ಇಡ್ತೀರಾ ?

ಕೆಂಪ : ನಮಗೇ ಚಳ್ಳೇ ಹಣ್ಣು ತಿನ್ನಿಸಿ ತಪ್ಪಿಸಿಕೊಂಡು ಕಾಡಿಗೆ ಬಂದಿದ್ದೀರಾ ?

ರಾಮ : ನಡೀರಿ... ನಡೀರಿ... ನಿಮಗೆ ಇದೆ ಮಾರಿ ಹಬ್ಬಾ...

ದೃಶ್ಯ – 32

ಸಾಹುಕಾರನ ತೋಟದ ಮನೆ (ಸಾಯಂಕಾಲ)

(ಸಂಜೆಯ ಸಮಯ. ಸಾಹುಕಾರನ ಆಳುಗಳು ಐದು ಜನ ಮಕ್ಕಳನ್ನು ಎಳೆದುಕೊಂಡು ಬಂದು ಸಾಹುಕಾರನ ತೋಟದ ಮನೆಯಲ್ಲಿ ಮಕ್ಕಳುಗಳ ಕೈ ಕಟ್ಟಿ ಹಾಕಿರುವ ದೃಶ್ಯ. ಆಳುಗಳು ಮನೆಯಿಂದ ಹೊರಬರ್ತಾರೆ. ಅದೇ ವೇಳೆಗೆ ಸಾಹುಕಾರ ಮೋಹನಪ್ಪ ಅಲ್ಲಿಗೆ ಬರ್ತಾರೆ.)

ಮೋಹನಪ್ಪ : ತೆಗಿರೋ ಕದನಾ

(ಆಳೊಬ್ಬ ತೋಟದ ಮನೆ ಬಾಗಿಲು ತೆಗೀತಾನೆ. ಒಳಹೋದ ಮೋಹನಪ್ಪ ಪಕ್ಕದಲ್ಲಿದ್ದ ಬಾರುಕೋಲು (ಚಾಟಿ) ತೆಗೆದುಕೊಂಡು)

ಮೋಹನಪ್ಪ : ಎಲಾ ಬಡ್ಡೀ ಮಕ್ಕಳಾ... ಇನ್ನೂ ಚೋಟುದ್ದ ಇಲ್ಲ, ನೀವು ನನ್ನ ಸಾರಾಯಿ ಅಂಗಡಿ ಸುಟ್ಟು ಹಾಕ್ತೀರಾ...

(ಅಂತ ರೇಗುತ್ತಾ ಧರಣೇಶ, ವೇದಾಂತ ಹಾಗೂ ಹರಿಗೆ ಬಾರಿಗೋಲಿನಿಂದ ಬೀಸುತ್ತಾನೆ)

ಮಕ್ಕಳು : ಅಯ್ಯೋ... ಅಮ್ಮಾ... ಆ.... ಆ... ಅಯ್ಯಪ್ಪಾ..... ನೋವು... ಅಮ್ಮಾ...

(ಗೀತಾ ಹಾಗೂ ಪಾರು ಅಣ್ಣಂದಿರಿಗೆ ಹೊಡೆಯುವುದನ್ನು ಕಂಡು ಭಯಗೊಂಡಿದ್ದಾರೆ)

ಮೋಹನಪ್ಪ : (ಆಳುಗಳಿಗೆ ಹೇಳುತ್ತಾ) ಮಕ್ಕಳು ಕಾಡಲ್ಲಿ ತಪ್ಪಿಸಿಕೊಂಡೌರೆ ಅಂತ ಊರ ಜನ ಇವ್ರ ಮನೆಯವ್ರು ತಿಳ್ಕೊಂಡಿದ್ದಾರೆ. ಮತ್ತೆ ನಮ್ಮ ಸಾರಾಯಿ ಅಂಗಡಿ ಕಟ್ಟೋವರ್ಗೂ ಇವರ್ನ ಇಲ್ಲೇ ಕೂಡಿ ಹಾಕಿ. ಅನ್ನ ನೀರು ಕೊಡಬೇಡಿ, ಇವ್ರ ಸೊಕ್ಕು ಅಡಗಲಿ. ನನ್ನ ಎದುರಾಕಿ ಕೊಂಡ್ರೆ ಉಳಿಗಾಲವಿಲ್ಲ ಅನ್ನೋದು ಇವ್ರಿಗೆ ಈಗ್ಲೇ ಅರ್ಥವಾಗ್ಲಿ.

(ಮಕ್ಕಳತ್ತ ತಿರುಗಿ ಹೇಳುತ್ತಾ) ಇಲ್ಲಿ ನಿಮ್ಮ ತಪ್ಪಿಲ್ಲ ಕಣ್ರೋ... ಬೆಕ್ಕಿನಂತಿದ್ದ ನಿಮ್ಮಗಳ್ನ ಪಾಠದ ಮೂಲಕ ಜಾಗೃತಗೊಳಿಸಿ ಹುಲಿಯಂತೆ ಮಾಡಿರುವ ಆ ಮೇಷ್ಟ್ರದ್ದೇ ತಪ್ಪು. ನೀತಿಪಾಠ ಅಂತ ಹೇಳಿ ನಿಮ್ಮ ತಲೆಯಲ್ಲಿ ಇಲ್ಲದ್ದು ತುಂಬಿ ನನ್ನ ಅಂಗಡಿ ಸುಟ್ಟಾಕಿದ್ದಾನೆ. ನಿಮ್ಮಂತೆ ಅವನಿಗೂ ತಕ್ಕ ಶಾಸ್ತಿ ಮಾಡ್ಬೇಕು. ಅದಕ್ಕೆ ಸಮಯ ಕಾಯ್ತಿದ್ದೀನಿ. ಬಂದೇ ಬರುತ್ತೆ. (ಆಳುಗಳತ್ತ ತಿರುಗಿ) ಇವರ್ನ ಹುಷಾರಾಗಿ ನೋಡ್ಕೊಳ್ರೋ

(ಎಂದು ಹೇಳಿ ಹೊರಟು ಹೋಗುತ್ತಾನೆ)

ದೃಶ್ಯ – 33

ಸಾಹುಕಾರನ ತೋಟದ ಮನೆ (ರಾತ್ರಿ)

(ಆಳುಗಳು ಬಾಗಿಲಲ್ಲಿ ಕೂತು ಬೀಡಿ ಸೇದಿ ಹರಟೆ ಹೊಡೆಯುತ್ತಾ ಇದ್ದಾರೆ.)

ಒಬ್ಬಾತ : ಅವರೇನು ಮಾಡ್ತಾವ್ರೆ ನೋಡೋ...

(ಒಬ್ಬ ಬೀಗ ತೆಗೆದು ಒಳಗಡೆ ಇಣುಕಿ ನೋಡಿದಾಗ, ಮಕ್ಕಳು ಸಾಹುಕಾರ ಹೊಡೆದ ಏಟಿನಿಂದ ನೋವಾಗಿ ಚೀರುತ್ತಿರುತ್ತಾರೆ, ಯಾತನೆ ಅನುಭವಿಸುತ್ತಿರುತ್ತಾರೆ.)

ಆಳು : ಇದೆಲ್ಲಾ ಬೇಕಿತ್ತಾ ಅನುಭವಿಸಿ...

(ಎಂದು ಹೇಳಿ ಮತ್ತೆ ಕದ ಎಳೆದುಕೊಂಡು ಚಿಲಕ ಹಾಕಿ ಬೀಗ ಹಾಕ್ತಾನೆ.)

ಒಬ್ಬಾತ : ಏನ್ಲಾ ಮಾಡ್ತಾ ಅವ್ರೇ

ಆಳು : ಇನ್ನೇನು ಮಾಡ್ತಾರೆ... ಸಾಹುಕಾರ್ರ ಚಾಟಿ ಏಟಿಗೆ ಅಯ್ಯೋ... ಅಮ್ಮಾ... ಅಂತ ನೋವು ಅನುಭವಿಸ್ತಾ ಇದ್ದಾರೆ.

Scanned with OKEN Scanner

ಇನ್ನೊಬ್ಬ ಆಳು : ಅವ್ರು ನೋವು ಅನುಭವಿಸ್ಲಿ ಬರ್‍ರಲಾ ನಾವು ಗುಂಡು ಹಾಕೋಣ.

(ಎಲ್ಲಾ ಒಟ್ಟಾಗಿ ಕೂತು ಸಾರಾಯಿ ಕುಡಿಯುತ್ತಾ ಕೂತಿರ್ತಾರೆ. ಸ್ವಲ್ಪ ಹೊತ್ತು ಆಗುತ್ತೆ. ಒಬ್ಬ ಟೈಟ್ ಆಗ್ತಾನೆ. ಆತನೇ ಮಕ್ಕಳು ಏನ್ ಮಾಡ್ತಾರೆ ಅಂತ ನೋಡಲುಬಾಗಿಲು ತೆಗೆದು ನೋಡ್ತಾನೆ. ಮಕ್ಕಳೆಲ್ಲಾ ನೋವು ತಿಂದು ಮಲಗಿದ್ದಾರೆ. ಬಾಗಿಲು ತೆಗೆದ ಶಬ್ದವಾದ್ದರಿಂದ ಧರಣೇಶ ಬಾಗಿಲ ಕಡೆ ನೋಡ್ತಾನೆ. ಕುಡುಕ ಆಳು ಧರಣೇಶನ ಕಡೆ ನೋಡಿ)

ಆಳು : ಏನ್ಲಾ ಗುರಾಯಿಸ್ತೀಯಾ.

(ಅಂತ ಕೈಯಲ್ಲಿರುವ ಬಾಟಲಿ ಎಸೆಯಲು ಹೋಗ್ತಾನೆ. ಜಾಸ್ತಿ ಕುಡಿದಿದ್ದರಿಂದ ಕೈ ಹಿಡಿತ ತಪ್ಪಿ ಬಾಟಲಿ ಜಾರಿ ಬಿದ್ದು ಹೊಡೆಯುತ್ತೆ. ಬಾಟಲಿಯ ಪೀಸೊಂದು ಮನೆಯ ಒಳಕ್ಕೆ ಹೋಗಿ ಬೀಳುತ್ತೆ. ಇನ್ನೊಬ್ಬ ಆಳು ಹೋಗಿ ಅವನ್ನ ಕರ್‍ಕೊಂಡು ಬರ್‍ತಾನೆ.)

ಇನ್ನೊಬ್ಬ ಆಳು : ಬಾರೋ ಇದೇ ಆಗೋಯ್ತು...

(ಅವನ್ನ ಕರ್‍ಕೊಂಡು ಆಚೆ ಬರುತ್ತಾ ಬಾಗಿಲು ಹಾಕುತ್ತಾ ಚಿಲಕ ಹಾಕುತ್ತಾರೆ. ಆತುರಕ್ಕೆ ಬೀಗ ಹಾಕುವುದನ್ನು ಮರೆಯುತ್ತಾರೆ)

(ಬಾಟಲಿಯ ಪೀಸು ಮನೆಯೊಳಕ್ಕೆ ಬಿದ್ದಿದ್ದನ್ನ ಕಂಡ ಧರಣೇಶ ಅದರಿಂದ ತಮ್ಮ ಕೈಗಳಿಗೆ ಕಟ್ಟಿರುವ ಹಗ್ಗ ಕೊಯ್ದುಕೊಂಡು ಬಿಚ್ಚಿಕೊಳ್ಳಬಹುದೆಂದು ಯೋಚಿಸುತ್ತಾ, ಗಾಜಿನ ಪೀಸು ಬಿದ್ದಿರುವ ಹತ್ತಿರ ತೆವಳಲುತ್ತಾ ಹೋಗಿ ದೊಡ್ಡ ಪೀಸನ್ನು ನಿಧಾನವಾಗಿ ಎತ್ತಿಕೊಂಡು ಹರಿ, ವೇದಾಂತರ ಹತ್ತಿರ ತರ್‍ತಾನೆ. ಅಷ್ಟರಲ್ಲಿ ಅವರೂ ಎಚ್ಚರಗೊಳ್ಳುತ್ತಾರೆ. ಧರಣೇಶ ತನ್ನ ಹಗ್ಗ ಕಟ್ಟಿರುವ ಕೈಯಿಂದಲೇ ವೇದಾಂತನ

ಕೈಗೆ ಕಟ್ಟಿರುವ ಹಗ್ಗ ಕೊಯ್ಯುತ್ತಾನೆ. ಅದಕ್ಕೆ ಹರಿಯೂ ಸಹಾಯ ಮಾಡುತ್ತಾನೆ. ಸ್ವಲ್ಪ ಹೊತ್ತು ಕೊಯ್ದ ನಂತರ ಹಗ್ಗ ಬಿಚ್ಚುತ್ತೆ. ಆಮೇಲೆ ಎಲ್ಲರೂ ಪರಸ್ಪರ ಬಿಚ್ಚಿಕೊಳ್ಳುತ್ತಾರೆ. ಇಲ್ಲಿಂದ ತಪ್ಪಿಸಿಕೊಳ್ಳುವ ಬಗ್ಗೆ ಯೋಚಿಸುತ್ತಾರೆ.)

ಧರಣೇಶ : ನಾವು ಇಲ್ಲಿಂದ ತಪ್ಪಿಸಿಕೊಂಡು ಹೋಗಬೇಕು

ವೇದಾಂತ : ಅದು ಹೇಗೆ ಸಾಧ್ಯ ? ಬೀಗ ಹಾಕಿದ್ದಾರೆ, ಹೊರಗೆ ಕಾಯುತ್ತಿದ್ದಾರೆ ?

(ಅಂತ ಹೇಳುತ್ತಾ ಕಿಟಕಿಯಲ್ಲಿ ನೋಡ್ತಾನೆ. ಆಳುಗಳು ಕುಡಿದು ಮಲಗಿರುವುದು ಕಾಣುತ್ತದೆ.)

ಹರಿ : ಅವರು ಕುಡಿದು ಮಲಗಿದ್ದಾರೆ. ಇದೇ ತಪ್ಪಿಸಿಕೊಳ್ಳಲು ಸರಿಯಾದ ಸಮಯ. *(ಧರಣೇಶ ಬಾಗಿಲು ಎಳೆಯುತ್ತಾನೆ, ಬರೋದಿಲ್ಲ.)*

ಧರಣೇಶ : ಬಾಗಿಲು ಹಾಕಿರಬಹುದು.....

(ಮತ್ತೊಮ್ಮೆ ಪ್ರಯತ್ನ ಪಟ್ಟಾಗ ಬೀಗ ಹಾಕಿರುವುದಿಲ್ಲ. ಚಿಲಕ ಹಾಕಿರುವರು)

ವೇದಾಂತ : ಬೀಗ ಹಾಕಿಲ್ಲ ಚಿಲಕ ಹಾಕಿದ್ದಾರೆ. ಅದನ್ನು ತೆರೆದರೆ ಹೊರ ಹೋಗಬಹುದು.

(ಗೀತಾಳನ್ನು ಹೆಗಲ ಮೇಲೆ ಕೂರಿಸಿಕೊಂಡು ಒಳಗಿನಿಂದಲೇ ಹೊರಗಿನ ಚಿಲಕ ತೆಗೆಸುತ್ತಾನೆ. ಅದಾದ ಮೇಲೆ ನಿಧಾನವಾಗಿ ಎರಡೂ ಕದ ತೆಗೆದು ಎಳೆಯುತ್ತಾರೆ. ಬಾಗಿಲು ತೆಗೆಯುತ್ತದೆ. ಧರಣೇಶ ಹೊರಬಂದು ನೋಡಿ ಆಳುಗಳು ಮಲಗಿರುವುದನ್ನು ಕಂಡು ಒಬ್ಬೊಬ್ಬರನ್ನು ಬೆಕ್ಕಿನ ಹೆಜ್ಜೆಯಿಂದ ಹೆಜ್ಜೆ ಇಡಿಸಿ ಕಳುಹಿಸಿ ನಿಧಾನವಾಗಿ ಕದ ಹಾಕಿ ತಾನೂ ಅಲ್ಲಿಂದ ತಪ್ಪಿಸಿಕೊಂಡು ಹೋಗ್ತಾರೆ)

ದೃಶ್ಯ – 34

ಅರಳಿಕಟ್ಟೆ (ಬೆಳಿಗ್ಗೆ)

(ಬೆಳಗಿನ ದೃಶ್ಯ. ಅರಳಿಕಟ್ಟೆ. ಗಾಂಧೀಜಿಯವರ ಫೋಟೋ ಇಟ್ಟುಕೊಂಡು ಧರಣಿ ದೃಶ್ಯ.)

(ವೇದಾಂತ, ಹರಿ, ಧರಣೇಶ, ಪಾರು ಮತ್ತು ಗೀತಾ ಐದು ಜನ ಗಾಂಧೀಜಿಯವರ ಫೋಟೋ ಇಟ್ಟುಕೊಂಡು ಫೋಟೋಗೆ ಹಾರ ಹಾಕಿ ನ್ಯಾಯ ಬೇಕು ಅಂತ ಕುಳಿತಿರುತ್ತಾರೆ. ಅಲ್ಲಿಗೆ ಅವರ ತಂದೆ, ತಾಯಂದಿರು, ಸಿಂಗ್ರಿ ನಾಗಯ್ಯ, ವಯ್ಯಾರಿ ಲಕ್ಷ್ಮಿ ಎಲ್ಲರೂ ಬರುತ್ತಾರೆ.)

ಸರೋಜಮ್ಮ : ಅಯ್ಯೋ ಮಕ್ಕಾ ಇದೇನಪ್ಪಾ...

ಲಕ್ಷ್ಮಮ್ಮ : ಊರವರೆಲ್ಲಾ ಒಂದೊಂದು ಥರ ಮಾತಾಡ್ತಾರೆ. ನೀವು ಏನೋ ಮಾಡಿದ್ದೀರಾ ಅಂತ ನಿಮ್ಮ ಬಗ್ಗೆ ಕೀಳಾಗಿ ಮಾತಾಡ್ತಾರೆ.

ಶಾಂತಮ್ಮ : *(ಮಕ್ಕಳ ಹತ್ತಿರ ಹೋಗಿ ಕೂತು ತಲೆ ಸವರುತ್ತಾ ಎಲ್ಲರ ಮೇಲಾಗಿರುವ ಗಾಯಗಳನ್ನು ನೋಡುತ್ತಾ)* ಇದೆಲ್ಲಾ ಹೆಂಗಾಯ್ತು. ಯಾರೋ ಹೊಡೆದಂಗೈತೆ, ಅದ್ ಸರಿ ನೀವ್ ಎಲ್ಲಿ ಹೋಗಿದ್ರೀ...

ಜನಾರ್ಧನ : ಹೇಳ್ದೇ ನಿಂಗೆ... ಇವರ್ನ ಮುದ್ದು ಮಾಡ್ಬೇಡ. ಅವನು ಕುಣೀದಂತೆ ಕುಣೀಬೇಡ ಅಂತ. ನೋಡ್ದಾ ಎಂತಾ ಕೆಲ್ಸ ಮಾಡ್ದ. ಸಾರಾಯಿ ಅಂಗಡಿ ಸುಟ್ಟು ಹಾಕುವ ಕೆಲ್ಸ ನಿಮ್ಗೆ ಬೇಕಿತ್ತಾ. ಊರ ಉಸಾಬರಿ ನಿಮಗ್ಯಾಕೆ ಬೇಕಿತ್ತು.

ಸುಬ್ಬಯ್ಯ : ಅಯ್ಯೋ ಇನ್ನು ಆ ಸಾಹುಕಾರ ಬಂದು ಇನ್ನೇನು ಮಾಡ್ತಾನೋ... ನೀವೇನೋ ಸಾರಾಯಿ ಅಂಗಡಿ ಸುಟ್ಟಿದ್ದೀರಾ... ಅವ್ನು ನಮ್ಮನೆ ಸುಟ್ರೆ ಏನ್ರೋ ಗತಿ.

ಕಿಟ್ಟಿ : ನೀವು ಮಾಡಿದ ತಪ್ಪಿಗೆ ನಾವೆಲ್ಲಾ ಶಿಕ್ಷೆ ಅನುಭವಿಸಬೇಕು. ಏನೋ ಮಾಡೋದ್ ಮಾಡಿದ್ದೀರಾ... ಈಗ ನೇರವಾಗಿ ಸಾಹುಕಾರನ ಮನೆಗೆ ಹೋಗಿ ಕೈಕಾಲಿಗೆ ಬಿದ್ದು 'ತಪ್ಪಾಯ್ತು ಅಂತ ಕ್ಷಮಾಪಣೆ ಕೇಳೋಣ ಬನ್ನಿ. ನಾವು ನಿಮ್ಮ ಜೊತೆಗಿರ್ತೀವಿ.

ಸುಬ್ಬಯ್ಯ : ಬರ್ತಿರೋ...ನಾವು ಈಗ ನಾಲ್ಕು ಬಾರ್ಸೋಣ್ವೋ...

ಶಾಂತಮ್ಮ : ಬಂದ್ ಬಿಡ್ರಪ್ಪ... ಇದು ನಮಗೆಲ್ಲಾ ಬೇಡ ಬಂದ್ ಬಿಡ್ರಪ್ಪಾ...

ಮಕ್ಕಳುಗಳು : (ಒಕ್ಕೊರಲಿನಿಂದ) ನಾವು ಬರಲ್ಲಮ್ಮ... ಪ್ರಾಣ ಹೋಗೋವರೆಗೂ ಇಲ್ಲೇ ಇರ್ತೀವಿ. ನಮ್ಮ ಹೋರಾಟಕ್ಕೆ ಸಾರಾಯಿ ಅಂಗಡಿ ನಮ್ಮೂರಿಂದ ಹೋಗಬೇಕು, ನಗುವಿನಹಳ್ಳಿಯಲ್ಲಿ ಮತ್ತೆ ನಗು ಕಾಣ್ಬೇಕು.

ಜನಾರ್ಧನ್ : ಇವರು ಜಾಸ್ತಿ ಮುಂದುವರೆದ್ ಬಿಟ್ರೆ ನಾವ್ ಹೇಳ್ದ ಮಾತ್ ಕೇಳಲ್ಲ. ಎರಡು ದಿವ್ಸ ಹೊಟ್ಟೆ ಗಿಲ್ದೆ ಹೊಟ್ಟೆ ಚುರುಕ್ ಅನ್ನುತ್ತಲ್ಲಾ ಆಗ ಎದ್ವೋ ಬಿದ್ವೋ ಅಂತ ಬರ್ತಾರೆ..ನಡಿಯೇ ನಡೀ..

ಸಿಂಗ್ರಿ ನಾಗಯ್ಯ : ಹೆಂಗೂ ಊರಲ್ಲಿ ಸಾರಾಯಿ ಅಂಗಡಿಯೊಂದಿತ್ತು. ಅದನ್ನು ಸುಟ್ಟು ಹಾಕಿ ನಮ್ಮ ಖುಷಿಗೆ ತಣ್ಣೀರೆರಚಿದಿರಾ... ಎಂಥಾ ಮಕ್ಳೋ ನೀವು ನಿಮಗೆ ಎಷ್ಟೋ ಮೊಂಡ ಧೈರ್ಯ...

ಧರಣೀಶ : (ಕೋಪೋದ್ರಿಕ್ತನಾಗಿ) ಬಾಯ್ ಮುಚ್ಕೊಂಡ್ ಇರ್ರಯ್ಯ. ಕುಡಿಯೋದೆ ಜೀವನ ಅಂತ ತಿಳ್ಕೊಂಡಿದ್ದೀಯಾ. ನಿನ್ಗಂತೂ ಮನೆ, ಸಂಸಾರ, ಮಕ್ಳು ಏನೂ ಇಲ್ಲ. ದುಡಿತೀಯಾ ಕುಡೀತೀಯಾ ಅಷ್ಟೇ ಬದುಕಾಗಿದೆ. ಸಾಂಸಾರಿಕ ಜಂಜಾಟದ ಬಗ್ಗೆ ಅರಿವಿಲ್ಲ. ಕೋತಿ ತಾನು ಕೆಡೋದಲ್ಲ ಅಂತ ವನನೆಲ್ಲಾ ಕೆಡಿಸಿತಂತೆ. ನೀನು ಕುಡಿದು ಹಾಳಾಗುವುದಲ್ಲದೇ ಊರ ಗಂಡಸರಿಗೆಲ್ಲಾ ಮದ್ಯದ ರುಚಿ ತೋರಿಸಿ ಹಾಳು ಮಾಡಿದೆ. ಈ ಸಾರಾಯಿ ಅಂಗಡಿ ಬಂದು ನಮ್ಮ ಅಪ್ಪಂದಿರನ್ನೂ ಹಾಳು ಮಾಡ್ತು. ನಮ್ಮ ಮನೆಗಳ ಖುಷಿ ನಾಶ ಮಾಡ್ತಾ ಇರೋ ಸಾರಾಯಿಯಿಂದಾಗುವ ಅನಾಹುತಗಳ ಬಗ್ಗೆ ನಮ್ಮ ಮೇಷ್ಟ್ರು ಹೇಳಿದ್ರು. ಅದನ್ನು ತಿಳ್ಕೊಂಡು ನಾವೇ ರೊಚ್ಚಿಗೆದ್ದು ಸಾರಾಯಿ ಅಂಗಡಿ ಸುಟ್ಟು ಹಾಕಿದ್ವಿ.

ಸಿಂಗ್ರಿ ನಾಗಯ್ಯ : ಓಹೋ ಮೇಷ್ಟ್ರು ನಿಮ್ಗೆಲ್ಲಾ ತಿಳಿಹೊತ್ತಿ ಹುರಿದುಂಬಿಸಿ ನಿಮ್ಮ ಕೈಲಿ ಬೆಂಕಿಯಿಟ್ಟ. ಈಗ ಕಾಣಿಸ್ತಾ ಇಲ್ಲಾ ತಾನು ಸಿಕ್ಕಿ ಹಾಕಿಕೊಳ್ಳಬಾರ್ದು ಅಂತ.

ಹರಿ : ನಮ್ಮ ಮೇಷ್ಟ್ರ ಬಗ್ಗೆ ಮಾತಾಡುವ ಯೋಗ್ಯಗೆ ನಿನಗಿಲ್ಲ. ಎಂಥಾ ಪರಿಸ್ಥಿತಿ ಬಂದ್ರೂ ಪಲಾಯನ ಮಾಡುವ ಮನಸ್ಥಿತಿ ಅವರ್ದಲ್ಲ. ಅವರು ನಮ್ಮೂರಿನ ಏಳಿಗೆಗಾಗಿ ಏನಾದರೂ

Scanned with OKEN Scanner

ಒಳ್ಳೇ ಕೆಲ್ಸ ಮಾಡಿಯೇ ಮಾಡ್ತಾರೆ. ಒಂದು ದಿಟ್ಟ ನಿರ್ಧಾರದಲ್ಲಿ ಹೋರಾಟದಲ್ಲಿ ನಗುವಿನ ಹಳ್ಳಿಯಲ್ಲಿ ನಗು ತರಿಸ್ತಾರೆ.

ವೇದಾಂತ : ನಮ್ಮ ಮೇಷ್ಟ್ರು ಬರೋವರ್ಗೂ ನಮ್ಮೂರಿಂದ ಸಾರಾಯಿ ಅಂಗಡಿ ತೊಲಗೋವರ್ಗೂ ನಾವು ಈ ಜಾಗ ಬಿಟ್ಟು ಕದಲಲ್ಲ.

ಮಕ್ಕಳ ಘೋಷಣೆ : ಗಾಂಧೀಜಿ ಜಿಂದಾಬಾದ್. ವಂದೇ ಮಾತರಂ, ತೊಲಗಲಿ ತೊಲಗಲಿ, ಸಾರಾಯಿ ಅಂಗಡಿ ತೊಲಗಲಿ.

ಜನಾರ್ಧನ : ಬರ್ರ್ರೋ ಬರ್ರ್ರೋ ಈಗ ಮಾಡಿರೋದೇ ಸಾಕು. ಅದನ್ನು ಮುಂದುವರೆಸ್ ಬೇಡ್ರೋ

ಸರೋಜ : ಮಕ್ಳಾ...... ಇದೆಲ್ಲಾ ನಮಗೆ ಬ್ಯಾಡಾ ಬರ್ರಪಾ...

ಕಿಟ್ಟಿ : ದೊಡ್ಡೋರ ಸಹವಾಸ ಒಂದೊತ್ತಿನ ಉಪವಾಸ... ಅಂತ ಗೊತ್ತಿಲ್ವಾ... ಮುಚ್ಕೊಂಡ್ ಬರ್ರೋ... ಏನೋ ಯಾರೋ ಅಂತೆ, ಹೋರಾಟ ಅಂತೆ.

ಲಕ್ಷ್ಮಮ್ಮ : ನಮ್ಮೂರಿಗೆ ಸಾರಾಯಿ ಅಂಗಡಿ ಬಂದಿದ್ದಕ್ಕೆ ನಮ್ಮ ಮಕ್ಕಳಿಗೆ ಈ ಗತಿ ಬಂದಿದ್ದು.

(ಜನಾರ್ಧನ ಸರೋಜಳನ್ನು ಎಳ್ಕೊಂಡ್ ಹೋಗ್ತಾನೆ. ಎಲ್ಲರೂ ಹೊರಡ್ತಾರೆ. ಊರಿನವರು ಹೋಗ್ತಾರೆ. ಗಾಂಧೀಜಿ ಭಾವಚಿತ್ರದ ಮುಂದೆ ಭಜನೆ ಮಾಡ್ಕೊಂಡು ಕೂತಿರ್ತಾರೆ. ಮಧ್ಯಾಹ್ನದವರೆಗೂ ಮುಂದುವರೆದಿರುತ್ತೆ)

ಮಕ್ಕಳುಗಳು : ರಘುಪತಿ ರಾಘವ ರಾಜಾರಾಂ... ಪತಿತ ಪಾವನ ಸೀತಾರಾಂ... ಈಶ್ವರ ಅಲ್ಲಾ ತೇರೇ ನಾಮ್... ಸಬಕೋ ಸನ್ಮತಿ ಹೇ ಭಗವಾನ್ ರಘುಪತಿ ರಾಘವ ರಾಜಾರಾಂ...

Scanned with OKEN Scanner

ದೃಶ್ಯ –35

ಸಾಹುಕಾರ ಮೋಹನಪ್ಪನ ಮನೆ (ಮಧ್ಯಾಹ್ನ)

(ಮಧ್ಯಾಹ್ನದ ದೃಶ್ಯ. ಸಾಹುಕಾರನ ಮನೆಯ ಮುಂದೆ ಆಳುಗಳೆಲ್ಲಾ ತಲೆ ಬಗ್ಗಿಸಿಕೊಂಡು ಕೈಕಟ್ಟಿಕೊಂಡು ನಿಂತಿದ್ದಾರೆ. ಮೋಹನಪ್ಪ ಬೆನ್ನ ಹಿಂದಕ್ಕೆ ಕೈಕಟ್ಟಿಕೊಂಡು ಉದ್ದಕ್ಕೂ ತಾರಾಡುತ್ತಾ ಆಳುಗಳನ್ನು ಬೈಯ್ಯೋದು.)

ಮೋಹನಪ್ಪ : ಕುಡಿದು ಮೈಮರೆತು ಮಲಗಿದ್ದಿರೇನೋ... ನೀವು ಮಾಡಿದ ತಪ್ಪಿಗೆ ನನ್ನ ಬುಡಕ್ಕೆ ಬಂದೈತೆ ಭಗನಿಗೂಟ. ಆ ಮಕ್ಕಳು ತಪ್ಪಿಸಿಕೊಂಡು ಹೋಗಿ ಊರ ಮುಂದೆಯ ಅರಳಿಕಟ್ಟೆಯ ಮುಂದೆ ಧರಣಿ ಕುಂತವರೆ. ಇದ್ನೆಲ್ಲಾ ಊರೇ ನೋಡ್ತೈತೆ. ಅವರೇನಾದರೂ ನಾನು ಹಿಡಿದುಕೊಂಡು ಬಂದು ಕೂಡಿ ಹಾಕಿ ಹೊಡೆದೆ ಅಂತ ಊರವರಿಗೆ ಹೇಳಿದ್ರೆ ಅಥವಾ ದೂರು ಕೊಟ್ರೆ ನಾನು ಎಲ್ಲಿಗ್ ಹೋಗ್ಲಿ, ಈಗೇನ್ ಮಾಡೋದ್ ಮುಂಡೇ ಮಕ್ಳಾ.

ಬಸ್ಯಾ : ಏನೋ ತಪ್ಪಾಯ್ತು ಬುದ್ದಿ. ಇನ್ನೊಂದಪ ಅವಕಾಶ ಕೊಡಿ, ಏನ್ ಮಾಡ್ಬೇಕು ಅಂತ ನೀವೇ ಹೇಳಿ. ನೀವ್ ಹೇಳ್ದಂಗೆ ಮಾಡ್ತೀವಿ.

ಮೋಹನಪ್ಪ : ರಾತ್ರಿ ಯಾರೂ ಕುಡೀಬಾರ್ದು. ಊರವರೆಲ್ಲ ಮಲಗಿದ ಮೇಲೆ ಅರಳಿಕಟ್ಟೆ ಹತ್ರ ಹೋಗಿ ಮಕ್ಕಳ ಉಪವಾಸ ಸತ್ಯಾಗ್ರಹನ ಭಂಗ ಮಾಡಿ ಮಕ್ಕಳು ಅಲ್ಲಿಂದ ಕಾಲ್ಕೀಳುವಂತೆ ಮಾಡಿ.

ಆಳುಗಳು : ಆಯ್ತು ಬುದ್ದಿ ನೀವೇಳಿದಂತೆ ಮಾಡ್ತೀವಿ. ರಾತ್ರಿ ನೋಡಿ ಆ ಮಕ್ಕಳಿಗೆ ತಕ್ಕ ಶಾಸ್ತಿ ಮಾಡಿ ನಿಮ್ಮತ್ರ ಬರ್ತೀವಿ.

(ಎಂದು ಹೇಳಿ ಕೈ ಮುಗಿದು ಹೋಗುತ್ತಾರೆ)

ದೃಶ್ಯ –36

ಜನಾರ್ಧನನ ಮನೆ (ಸಂಜೆ / ರಾತ್ರಿ)

(ಸಂಜೆ / ರಾತ್ರಿ ದೃಶ್ಯ. ಸರೋಜಮ್ಮ ಮನೆಯ ನಡುಮನೆಯಲ್ಲಿ ಕೂತಿರುವಂತೆ ಜನಾರ್ಧನ ಮನೆಯ ಹೊರಗಿನ ಆವರಣ (ಹೊರಾಂಡ) ದಲ್ಲಿ ಕೂತಿರುವ ದೃಶ್ಯ.)

ಸರೋಜಮ್ಮ : (ಅಳುತ್ತಾ) ರೀ... ರೀ...

ಜನಾರ್ಧನ್ : ಏನೇ ನಿಂದು ಗೋಳು. ನೆಮ್ಮದಿ ಕಂಡ್ಕೊಳ್ಳೋಣ ಅಂತ ಒಂದು ಸಾರಾಯಿ ಅಂಗಡಿನಾದ್ರೂ ಇತ್ತು. ಅದನ್ನು ನಿನ್ನ ಮಕ್ಕಳು ಹಾಳ್ಮಾಡಿದ್ರು. ಮನೆಗೆ ಬಂದ್ರೆ ನಿನ್ ಗೋಳು.

ಸರೋಜಮ್ಮ : (ಅಳುತ್ತಾ ಮನೆಯಿಂದ ಹೊರಬರುತ್ತಾ) ಅಯ್ಯೋ ನಿಮ್ಮ ಹಾಳಾಗ... ಕುಡಿಯೋದ್ರ ಬಗ್ಗೆ ಯೋಚಿಸ್ತೀಯಾ, ಇರೊ ಎರಡು ಮಕ್ಳೂ ಎರಡು ದಿವ್ಸದಿಂದ ಮನೇಗೆ ಬಂದಿಲ್ಲ, ತಟ್ಟೆಗೆ ಕೈ ತೊಳೆದಿಲ್ಲ, ಚಳಿ, ಗಾಳಿ ಅಂತ ಅರಳಿ ಮರದಡಿ ಇದ್ದಾರೆ. ಅವರನ್ನ ಹೇಗಾದ್ರೂ ಕರ್ಕೊಂಡು ಬರೋದ್ ಬಿಟ್ಟು ಸಾರಾಯಿ ಬಗ್ಗೆ ಮಾತಾಡ್ತೀಯಾ ....

ಜನಾರ್ಧನ : ಸುಮ್ನೆ ಒಳಗೆ ಹೋಗೇ. ಮಾತಾಡಿದ್ರೆ.......... *(ಸರೋಜ ಅಲ್ಲಿಯೇ ಕೂರ್ತಾಳೆ.)*

ದೃಶ್ಯ – 36

ಕೃಷ್ಣ – ಲಕ್ಷ್ಮಮ್ಮ ಮನೆ ರಾತ್ರಿ

(ರಾತ್ರಿ ದೃಶ್ಯ. ಕೃಷ್ಣ ಲಕ್ಷ್ಮಮ್ಮರ ಮನೆ, ಲಕ್ಷ್ಮಮ್ಮ ರಗ್ಗು ಹೊದ್ದುಕೊಂಡು ಮೂಲೆಯೊಂದರಲ್ಲಿ ತಲೆ ಎತ್ತಿ ಭಾವಣೆ ನೋಡುತ್ತಾ ಕಣ್ಣು ಮುಚ್ಚಿಕೊಂಡು ಕೂತಿರುವಾಗ ಹೊರಗಿನಿಂದ ಕಿಟ್ಟಿ ಒಳ ಪ್ರವೇಶಿಸುತ್ತಾ ಹೆಂಡತಿಯನ್ನು ನೋಡಿ.)

ಕಿಟ್ಟಿ : ಏನೇ ನಿನ್ನ ಮಕ್ಕಳ ಚಿಂತೆನೇನೆ. ಗಂಡನ ಬಗ್ಗೆ ಚಿಂತೆನೇ ಇಲ್ವೇನೆ ಏನಾದರೂ ಬೇಸಿದ್ದಿಯಾ ಬಡಿಸು ಬಾ...

ಲಕ್ಷ್ಮಮ್ಮ : ತಿಳುವಳಿಕೆ ಇಲ್ಲದವರು ಕಣ್ರೀ... ಬರ್ರೀ ಹೋಗಿ ಕರ್ಕೊಂಡ್ ಬರೋಣ.

ಕಿಟ್ಟಿ : ಅವಕ್ಕೆ ತಿಳುವಳಿಕೆ ಇಲ್ವಾ. ತಿಳುವಳಿಕೆ ಇಲ್ಲದ್ದಕ್ಕೆ ಈ ತರ ಮಾಡಿದ್ರಾ. ನಮ್ಗೇ ಬುದ್ದಿ ಹೇಳೋಕ್ಕೆ ಬರ್ತವೆ. ಅಲ್ಲೇ ಬಿದ್ದಿರ್ಲಿ ಬಾ...

Scanned with OKEN Scanner

ದೃಶ್ಯ ಬದಲಾವಣೆ

ಸುಬ್ಬು – ಶಾಂತಮ್ಮ ಮನೆ (ರಾತ್ರಿ)

(ರಾತ್ರಿ ದೃಶ್ಯ. ಸುಬ್ಬು – ಶಾಂತಮ್ಮನ ಮನೆ, ಸುಬ್ಬು – ಶಾಂತಮ್ಮ ನಡುಮನೆಯಲ್ಲಿ ಎದುರು ಬದರಿಗೆ ಕೂತಿರುವುದು, ಸುಬ್ಬು ಊಟ ಮಾಡುತ್ತಿರುತ್ತಾನೆ.)

ಸುಬ್ಬು : ಯಾಕೆ... ನೀನು ಊಟ ಮಾಡಲ್ವೇನೆ ?

ಶಾಂತಮ್ಮ : ಮಗ ಅಲ್ಲಿ ಉಪವಾಸ ಕೂತಿದ್ರೆ ನಾನೇಗೆ ಊಟ ಮಾಡ್ಲಿ

ಸುಬ್ಬು : ಮಾಡಿದ್ರೆ ಮಾಡು ಬಿಟ್ರೆ ಬಿಡು... ಇನ್ನೇನ್ ಅನಾಹುತ ತಂದ್ ಹೋಗ್ತಾವೋ ನೋಡ್ತಾ ಇರು...

ದೃಶ್ಯ –37

ಅರಳಿ ಕಟ್ಟೆ (ರಾತ್ರಿ)

(ರಾತ್ರಿ ಸಮಯ ಮಕ್ಕಳು ಮಲಗಿದ್ದಾರೆ. ಗೀತಾ, ಪಾರು ಮಲಗಿದ್ದಾರೆ. ಹರಿಯೂ ಮಲಗಿರ್‍ತಾನೆ. ಧರಣೀಶ, ವೇದಾಂತ ತೂಕಡಿಸ್ತಾ ಕೂತಿದ್ದಾರೆ. ಪಟ್ ಅಂತ ಧರಣೀಶ ಕಣ್ಣು ಬಿಡ್ತಾನೆ.)

ಧರಣೀಶ : (ವೇದಾಂತನ ಕುರಿತು) ಮೇಷ್ಟ್ರು ಎಲ್ಲೋ ನಾಳೆ ಬರ್‍ತಾರೇನೋ

ವೇದಾಂತ : ಬರ್‍ತಾರೆ... ಬಂದೇ ಬರ್‍ತಾರೆ... ನಮ್ಮ ಹೋರಾಟಕ್ಕೆ ಬೆಂಬಲ ಸೂಚಿಸ್ತಾರೆ.

ಧರಣೀಶ : (ಉಸಿರು ಬಿಡುತ್ತಾ) ಸರ್‍ಯಾಗ್ ಮಲಕ್ಕೋ ಹರಿ... ಪಾರು, ಗೀತಾ ಮಲಗಿದ್ದಾರೆ.

ವೇದಾಂತ : ನೀನು ಮಲಗಿಕೊಳ್ಳೊ

ಧರಣೀಶ : ನೀನು ಮಲಗು. ನನಗೆ ಏಕೋ ನಿದ್ದೆ ಬರ್‍ತಿಲ್ಲಾ.

(ಇವರು ಮಾತಾಡಿಕೊಳ್ಳುತ್ತಿರುವುದು, ಹೊರಳುವುದು, ಇದನ್ನೆಲ್ಲಾ ಮೋಹನಪ್ಪನ ಆಳುಗಳು

ಹಿಂಬದಿಯಿಂದ ಬಂದು ಹೊಂಚು ಹಾಕಿ ನೋಡ್ತಾ ಇರ್‍ತಾರೆ. ಧರಣೀಶ ಕೂಡ ಮಂಪರಿನಲ್ಲಿರುತ್ತಾನೆ. ಆಗ ಆಳುಗಳು ಅಲ್ಲಿಗೆ ಬಂದು ದಾಳಿ ಮಾಡ್ತಾರೆ. ಮೂವರೂ ಹೊಡೆಯುತ್ತಾರೆ)

Scanned with OKEN Scanner

ಆಳುಗಳು : ಹೋಗ್ರೋ... ಮನೆಗೆ ಹೋಗ್ರೋ... ಈ ಪ್ರತಿಭಟನೆ, ಉಪವಾಸ, ಸತ್ಯಾಗ್ರಹ, ಹೋರಾಟ ಇದೆಲ್ಲಾ ಮಾಡಿದ್ರೆ ಅಥವಾ ನಮ್ಮ ಸಾಹುಕಾರ್ರ ಸೊಲ್ಲೆತ್ತಿದರೆ ಚರ್ಮ ಸುಲೀತೀವಿ.

(ಅಂತ ಹೊಡೆಯುತ್ತಾ ಅರಳಿಕಟ್ಟೆಯ ಮೇಲೆ ದಾಂಧಲೆ ಮಾಡ್ತಾರೆ. ಆಗ ಮಕ್ಕಳ ಚೀರಾಟ ಜೋರಾಗುತ್ತೆ. ಮನೆಗಳ ಬಾಗಿಲು ತೆಗೆದು ಅರಳಿಕಟ್ಟೆ ಕಡೆಯತ್ತ ಊರ ಜನ ಬರೋದು ನೋಡಿ ಆಳುಗಳು ಅಲ್ಲಿಂದ ಕಾಲ್ಕೀಳುತ್ತಾರೆ.

ಮಕ್ಕಳಿಗೆ ಮೈಮೇಲೆ ಗಾಯ ಆಗಿರುತ್ತೆ, ರಕ್ತ ಬರುತ್ತಿರುತ್ತದೆ. ಊರ ಕೆಲವರು ನೀರು ಕುಡಿಸಿ ರಕ್ತ ಒರೆಸಿ, ಅರಿಶಿನ ಅರಳೆಣ್ಣೆ ಹಾಕುತ್ತಾ ಸಮಾಧಾನ ಪಡಿಸುತ್ತಾ)

ಊರ ಜನ : ಇದೆಲ್ಲಾ ನಿಮಗೆ ಬೇಕಿತ್ತಾ... ಆ ಸಾಹುಕಾರ ದುರಹಂಕಾರಿ ಸರಿ ಇಲ್ಲ, ಅವನನ್ನು ಏಕೆ ಎದುರು ಹಾಕ್ಕೊಳ್ತೀರಿ... ನಡೀರಿ... ನಡೀರಿ ಮನೇಗೆ.

ಮಕ್ಕಳು : ಇಲ್ಲಾ ನಾವು ಬರೋದಿಲ್ಲ. ನಮಗೆ ನಮ್ಮ ಮೇಷ್ಟ್ರು ಅನ್ಯಾಯವನ್ನು ಖಂಡಿಸುವ ಹೋರಾಟ ಮಾಡುವ ಮನೋಸ್ಥೈರ್ಯ ತುಂಬಿದ್ದಾರೆ. ಗಾಂಧೀಜಿಯವರ ತತ್ವ ಸಿದ್ಧಾಂತಗಳಿಗೆ ನಾವು ಗೌರವ ಕೊಡ್ತೀವಿ. ಸತ್ಯ ಅಹಿಂಸಾ ಮಾರ್ಗದಲ್ಲಿ ನಮ್ಮೂರಿನ ಮಾರಿ ಮದ್ಯದಂಗಡಿಯನ್ನು ತೊಲಗಿಸಿಯೇ ತೊಲಗಿಸ್ತೀವಿ. ಜಯ ಸಿಗೋವರೆಗೂ ನಮ್ಮದು ಹೋರಾಟ ಈ ನಗುವಿನಹಳ್ಳಿಗಾಗಿ ನಾವುಗಳು ಸಾಯಲು ಸಿದ್ಧ..

ಊರ ಜನ : ಏನೋ ಅಪ್ಪ... ನಿಮ್ಮ ಹೋರಾಟಕ್ಕೆ ಜಯ ಸಿಗಲಿ. ಈ ಸಾರಾಯಿ ಅಂಗಡಿ ಬಂದು ಊರ ನೆಮ್ಮದಿ ಹಾಳ್ ಮಾಡೈತೆ. ನಿಮ್ಮ ಮೂಲಕ ಆದ್ರೂ ಆ ನೆಮ್ಮದಿ ಸಿಗಲಿ. ನಿಮ್ಮ ಹೋರಾಟಕ್ಕೆ ನಾವು ನಾಳೆ ಕೈಜೋಡಿಸ್ತೀವಿ, ನಿಮ್ಮ ಜೊತೆಯಲ್ಲಿಯೇ ಇರ್ತೀವಿ ನಮ್ಮ ಹಳ್ಳಿಯ ನೆಮ್ಮದಿಗಾಗಿ.

ಸಮಸ್ಯೆಯನ್ನು
ಎದುರಿಸುವ
ಧೈರ್ಯ ಬರುವುದು
ಕುಡಿತದಿಂದಲ್ಲ
ಆತ್ಮ ವಿಶ್ವಾಸದಿಂದ



ದೃಶ್ಯ –38

ಅರಳಿಕಟ್ಟೆ ಹತ್ತಿರ (ಬೆಳಗಿನ ದೃಶ್ಯ)

ಕ್ರೌರ್ಯತನದಿ ಅಟ್ಟಹಾಸದಿ
ಶಾಂತಿ ಕದಡಿದ ಕ್ರೂರ ಮನಸ್ಸುಗಳಿಗೆ
ಧಿಕ್ಕಾರ ಧಿಕ್ಕಾರ

ಮೊಡುತನದಿ ಅಹಂಕಾರದಿ
ಮದ್ಯ ತಂದ ಹಳ್ಳಿಗೆ
ನೆಮ್ಮದಿ ಗೆಡವಿದ ಮೃಗ ಸ್ವಭಾವವೇ
ಧಿಕ್ಕಾರ ಧಿಕ್ಕಾರ

ಲಂಚತನಕ್ಕೆ ಸ್ವಾರ್ಥತನಕ್ಕೆ
ಪರರ ಬದುಕು ನಾಶ ಕೂಪಕ್ಕೆ
ದೂಡುವ ದುರುಳರೇ ಧಿಕ್ಕಾರ ಧಿಕ್ಕಾರ

ಗಾಂಧಿ ತತ್ವ ನೀತಿ ನಿಯಮ ಮರೆತ ಸಾಹುಕಾರ ಮದಭಾಂದನೆ
ಅಹಂಕಾರಿಯೇ ನಿನಗೆ ಧಿಕ್ಕಾರ ಧಿಕ್ಕಾರ

ಬದುಕು ಒಡೆದು ದು:ಖದೆಡೆಗೆ
ದೂಡುವ ಸಾರಾಯಿ ಮಾದಕ (ನಶೆ)
ಮಹಾಮಾರಿಯೇ ನಾಶವಾಗಲಿ – ನಾಶವಾಗಲಿ

ಸಾರಾಯಿ ತೊಲಗಲಿ
ಸಂಸಾರ ಉಳಿಯಲಿ

(ಇದೇ ದೃಶ್ಯದಲ್ಲಿ ಮುಂದುವರೆದು ಐದು ಜನ ಇದ್ದದ್ದು ಹತ್ತು, ಹತ್ತು ಜನ ಇದ್ದದ್ದು ನೂರು, ನೂರಿದ್ದದ್ದು ಊರು, ಊರಿನ ಪಕ್ಕದೂರು, ಅಲ್ಲಿಂದ ಟಿ.ವಿ. ಚಾನಲ್‌ಗಳ ಗಮನಕ್ಕೆ ಬಂದು ಅವರು ಬಂದು ದೃಶ್ಯ ಶೂಟ್ ಮಾಡೋದು. ಆಗ ಮಾತನಾಡುವುದು, ತಂದೆ ತಾಯಿಗಳು ಸಾತ್ ಕೊಡುವುದು, ಮೋಹನಪ್ಪ ಮನೆ ಹತ್ರ ಅಂಡುಸುಟ್ಟ ಬೆಕ್ಕಿನಂತಾಡುತ್ತಿರುವುದು, ಫೋನುಗಳಲ್ಲಿ ಮಾತನಾಡುವುದು, ಇತ್ಯಾದಿ ಕಲ್ಪನೆ ಹಾಡಿನಲ್ಲಿಯೇ ಎಲ್ಲಾ ಬರುವಂತೆ, ಇದನ್ನೆಲ್ಲಾ ಟಿ.ವಿ. ಮಾಧ್ಯಮದಲ್ಲಿ ರಾಜ್ಯದ ಸಿ.ಎಂ.ನಿಂದ ಹಿಡಿದು, ಹಿರಿಯ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ಸಂಬಂಧಿಸಿದ ಇಲಾಖೆಯವರು, ಸಾರ್ವಜನಿಕರು ನೋಡುತಿರುವ ಎಕ್ಸ್‌ಕ್ಲ್ಯೂಸಿವ್ ನ್ಯೂಸ್ ಭಿತ್ತರವಾಗುತ್ತಿರುವುದು.)

ದೃಶ್ಯ– 39

ಅರಳಿಕಟ್ಟೆ ಹತ್ತಿರ (ಬೆಳಗಿನ ದೃಶ್ಯ)

(ಮೀಡಿಯಾದವರು ಈ ಮಕ್ಕಳನ್ನು ಸಂದರ್ಶನ ಮಾಡಲು ಬಂದಿದ್ದಾರೆ. ಮಕ್ಕಳು ಸೊರಗಿದಂತೆ ಕಂಡುಬಂದಿದ್ದಾರೆ. ಮೀಡಿಯಾದವರು ಒಂದೊಂದು ಮೀಡಿಯಾದವರು ಮಕ್ಕಳ ಮುಂದೆ ಪ್ರಶ್ನೆ ಹಾಕುತ್ತಾರೆ)

ಮೀಡಿಯ 1 : ಮಕ್ಕಳ ನಿಮ್ಮ ಹೋರಾಟದ ಉದ್ದೇಶ

ಧರಣೀಶ್ : ನಮ್ಮೂರಿಂದ ಸಾರಾಯಿ ಅಂಗಡಿ ತೊಲಗಿಸುವುದು

ಮೀಡಿಯ 2 : ನಿಮ್ಮ ಹೋರಾಟಕ್ಕೆ ಸ್ಫೂರ್ತಿ ಏನು ?

ಧರಣೀಶ್ : ನಮ್ಮ ಮೇಷ್ಟ್ರು ಹಾಗೂ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ.

ಮೀಡಿಯ 3 : ಸೊರಗಿದಂತೆ ಕಾಣ್ತಿದ್ದೀರಾ... ನಿಮ್ಮ ಮೇಲೆ ಹಲ್ಲೆಯಾಗಿರುವಂತಿದೆ ಕಾರಣವೇನು ?

ಧರಣೀಶ್ : ಹೌದು ನಮ್ಮ ಮೇಲೆ ಊರ ಸಾಹುಕಾರ ಹಾಗೂ ಸಾರಾಯಿ ಅಂಗಡಿ ಒಡೆಯ. ಸಾರಾಯಿ ಅಂಗಡಿ ಸುಟ್ಟು ಹಾಕಿದ್ವಿ ಅಂತ ಆಳುಗಳ ಕೈಲಿ ನಮ್ಮನ್ನ ಹಿಡಿಸಿ, ಆತನ ತೋಟದ ಮನೇಲಿ ಕೂಡಿ ಹಾಕಿಸಿ ಚಿತ್ರಹಿಂಸೆ ಕೊಟ್ಟ. ನಿನ್ನೆ ರಾತ್ರಿ ಕೂಡ ನಮ್ಮ ಉಪವಾಸದ ಹೋರಾಟಕ್ಕೆ ಭಂಗ ತರಲು ತನ್ನ ಆಳುಗಳಿಂದ ಹಲ್ಲೆ ಮಾಡಿಸಿದ.

ಮೀಡಿಯ : ಸರಿ ನಿಮ್ಮ ಮುಂದಿನ ಉದ್ದೇಶ ಏನು ?

ಧರಣೇಶ : ಉದ್ದೇಶ ಸ್ಪಷ್ಟ. ನಮ್ಮೂರಿಂದ ಸಾರಾಯಿ ಅಂಗಡಿ ಹೋಗಬೇಕು. ಬರೀ ನಮ್ಮೂರಲ್ಲೇ ಅಲ್ಲ, ಅಕ್ಕಪಕ್ಕದ ಹಳ್ಳಿಗಳಲ್ಲಿರುವ ಎಲ್ಲಾ ಸಾರಾಯಿ ಅಂಗಡಿಗಳು ತೊಲಗಬೇಕು. ಸಾರಾಯಿ ನಮ್ಮ ಬದುಕು. ನೆಮ್ಮದಿನಾ ಹಾಳು ಮಾಡುತ್ತೆ, ನಮ್ಮ ಖುಷಿ ಕಿತ್ಕೊಳ್ಳುತ್ತೆ, ಬಡವರ ಮನೆಯ ಬೇಗುದಿಯನ್ನು ಹೆಚ್ಚಿಸುತ್ತೆ. ಗಂಡಸರು ಕುಡಿಯೋ ಚಟಕ್ಕೆ ಬಿದ್ದು, ದುಡಿಯೋದು ಬಿಡ್ತಿದ್ದಾರೆ. ಸಾರಾಯಿ ಕುಡಿದು ಕುಡಿದು ಸುಸ್ತಾಗಿ ಆರೋಗ್ಯ ಕೆಡಿಸಿಕೊಳ್ತಿದ್ದಾರೆ. ಹೀಗಿರುವಾಗ ಊರಿಗೆ ಸಾರಾಯಿ ಅಂಗಡಿ ಬೇಕಾ ?

ವೇದಾಂತ : ನಮ್ಮ ರಾಜ್ಯದಲ್ಲಿ ಅನೇಕ ಸಮಸ್ಯೆಗಳಿವೆ. ನೀರಿಗೆ ಹಾಹಾಕಾರ ಮಾಡಿರುವ ಕಳಸಾ ಬಂಡೂರಿ, ಮಹದಾಯಿ ಯೋಜನೆ, ಕುಡಿಯುವ ನೀರಿನ ಮೇಕೆದಾಟು ಯೋಜನೆ, ನಮ್ಮದೆ ಭೂಮಿ ಬೆಳಗಾವಿ ಜಿಲ್ಲೆ ಗಡಿ ವಿವಾದ, ಎಷ್ಟೋ ಸರ್ಕಾರಿ ಕಾರ್ಖಾನೆಗಳು ಮುಚ್ಚಿರುವುದು, ರೈತರಿಗೆ ನೀರಿಲ್ಲದೆ ಆತ್ಮಹತ್ಯೆ ಮಡ್ಕೊತಿದ್ದಾರೆ, ಬಟ್ಟೆ ನೇಯುವವರ ಬದುಕು ಬೆತ್ತಲಾಗಿದೆ, ಇಷ್ಟೆಲ್ಲಾ ಸಮಸ್ಯೆ ಇದ್ದರೂ ಸರ್ಕಾರ ವಿಫಲವಾಗ್ತಿದೆ. ಒಂದೊಂದು ಹಳ್ಳಿಯಲ್ಲಿ ಜನ ಜಾಗೃತಿ ಮೂಡಲಿ ಅಂತ ನಾವು ಪ್ರತಿಭಟನೆ ಮಾಡ್ತಿದ್ದೀವಿ.

ಹರಿ : ನಮ್ಮ ಇಷ್ಟು ಸಮಸ್ಯೆಗಳನ್ನು ಬಗೆಹರಿಸದೇ ಹೋದರೆ ನಮ್ಮೂರಿಗೆ ಸಂಬಂಧಿಸಿದವರು ಬಂದು ನಮ್ಮ ಹೋರಾಟಕ್ಕೆ ನ್ಯಾಯ ಒದಗಿಸದೇ ಹೋದರೆ ನಾವು ಇಲ್ಲೇ ಉಪವಾಸ

ಬಿದ್ದು ಸಾಯ್ತೀವಿ.

ಧರಣೇಶ್ : ನಮ್ಮೂರಿನ ಉಳಿವಿಗಾಗಿ ನಾವು ಐದು ಮಂದಿ ಪ್ರಾಣ ಕೊಟ್ಟೇ ಕೊಡ್ತೀವಿ. ಅದಕ್ಕೂ ನಾವು ಸಿದ್ಧವಾಗಿದ್ದೀವಿ.

(ಮೀಡಿಯಾದವರು ಮಾತಾಡಿದಂತೆ ಇದನ್ನೆಲ್ಲಾ ಎಲ್ಲಾ ಚಾನಲ್‌ಗಳಲ್ಲಿ ಬಿತ್ತರಿಸುತ್ತಾ

"ನಗುವಿನಹಳ್ಳಿಯಲ್ಲಿ ಮಕ್ಕಳು ಸಾರಾಯಿ ಅಂಗಡಿ ವಿರುದ್ಧ ಹೋರಾಟ ಮಾಡ್ತಿದ್ದಾರೆ. ಸಂಬಂಧಿಸಿದವರು ಮಕ್ಕಳಿಗೆ ನ್ಯಾಯ ಒದಗಿಸ್ತಾರಾ. ಸಾವು ಬದುಕಿನ ಮಧ್ಯೆ ಹೋರಾಡುತ್ತಿರುವ ಐದು ಮುಗ್ಧ ಮಕ್ಕಳು"

– ಚಾನಲ್‌ಗಳಲ್ಲಿ ಹೆಡ್‌ಲೈನ್)

(ಅತ್ತ ಸಿ.ಎಂ. ಇದನ್ನೆಲ್ಲಾ ಗಮನಿಸುತ್ತಾ, ಗಂಭೀರವಾಗಿ ತೆಗೆದುಕೊಂಡು ಸೆಕ್ರೆಟರಿ, ಅಬಕಾರಿ ಮಂತ್ರಿ, ಜಿಲ್ಲಾಧಿಕಾರಿ, ಎಸ್.ಪಿ. ಅವರನ್ನೆಲ್ಲಾ ಸಭೆ ಕರೆದು ಚರ್ಚಿಸಿ, ಅಲ್ಲಿಂದ ಊರಿನತ್ತ ಬರುವಂತಹ ದೃಶ್ಯ)

Scanned with OKEN Scanner

ದೃಶ್ಯ –40

ಅರಳಿಕಟ್ಟೆ ಹತ್ತಿರ

(ಅರಳಿಕಟ್ಟೆ. ಮಕ್ಕಳು ಕೂತಿರುತ್ತಾರೆ. ಊರ ಜನ ಗುಂಪು ಕಟ್ಟಿರುತ್ತಾರೆ (ಬೋರ್ಡ್‌ಗಳಿರುತ್ತವೆ) ಅಲ್ಲಿಗೆ ನಾಲ್ಕೈದು ಕಾರುಗಳು ಬರ್‍ರ್ರೋ ಅಂತ ಬರುತ್ತವೆ. ಪೊಲೀಸರು ಬರುತ್ತಾರೆ. ಮೀಡಿಯಾದವರು ಕಾದಿರುತ್ತಾರೆ. ಊರಿನಲ್ಲಿ ದೊಡ್ಡ ಕ್ರಾಂತಿಯಾಗುವ ವಾತಾವರಣ. ಕಾರಿನಿಂದ ಸಿ.ಎಂ., ಅಬಕಾರಿ ಮಂತ್ರಿ, ಡಿ.ಸಿ., ಎಸ್.ಪಿ. ಎಲ್ಲಾ ಕೆಳಗಿಳಿದು ಬರ್ತಾರೆ. ಪೊಲೀಸರು ಜಾಗ ಬಿಡಿಸ್ತಾರೆ. ಅವರೆಲ್ಲಾ ಬಂದು ಮಕ್ಕಳ ಮುಂದೆ ಅರಳಿಕಟ್ಟೆ ಮೇಲೆ ಕೂರ್ತಾರೆ.

ಸಿ.ಎಂ. : ಶಹಬ್ಬಾಷ್ ಮಕ್ಕಳೇ... ನಿಮ್ಮ ಹೋರಾಟದ ಕಿಚ್ಚು, ಧೈರ್ಯ, ಎಲ್ಲಾ ನಾನು ಮಾಧ್ಯಮಗಳಲ್ಲಿ ನೋಡಿದೆ.

(ಮಕ್ಕಳ ಅಪ್ಪ ಅಮ್ಮಂದಿರಿಗೆ ಫೋಕಸ್, ಅವರಲ್ಲಿ ಖುಷಿಯ ಸಾರ್ಥಕ ಭಾವ)

ಸಿ.ಎಂ. : ನೀವು ಬಯಸಿದಂತೆ ನಿಮ್ಮೂರಿಂದ ಈಗಲೇ ಸಾರಾಯಿ ಅಂಗಡಿನಾ ರದ್ದು ಮಾಡ್ತೀನಿ. *(ಡಿ.ಸಿ.ಗೆ ಹೇಳುತ್ತಾ)* ಈಗಲೇ ಈ ಊರಿನ ಸಾರಾಯಿ ಅಂಗಡಿ ರದ್ದು ಮಾಡಿ, ಇದು

ಶೀಘ್ರವಾಗಿ ಆಗಬೇಕು. (ಪಿ.ಎ. ಕಡೆ ತಿರುಗಿ) ಯಾರ್ದು ಈ ಸಾರಾಯಿ ಅಂಗಡಿ, ಈ ಮಕ್ಕಳಿಗೆಲ್ಲಾ ಹಲ್ಲೆ ಮಾಡಿದವರ್ಯಾರು ?

ಸಿ.ಎಂ. ಪಿ.ಎ. : (ಅಲ್ಲಿ ನಿಂತಿದ್ದ ಮೋಹನಪ್ಪನನ್ನು ಮುಂದೆ ಕರೆಸಿಕೊಂಡು ತೋರಿಸುತ್ತಾ) ಇವರದೇ ಸಾರ್.

ಸಿ.ಎಂ. : ಯಾರು ನಿನಗೆ ಸಾರಾಯಿ ಅಂಗಡಿ ಲೈಸೆನ್ಸ್ ಕೊಟ್ಟಿದ್ದು. ಅಮಾಯಕ ಮಕ್ಕಳ ಮೇಲೆ ಹಲ್ಲೆ ಮಾಡಿದ್ದೀಯಾ. ನಾಚಿಕೆ ಆಗಲ್ವೇ. ಯಾರ್ರೀ ಅದು ಎಸ್.ಪಿ. ಸಾಹೇಬ್ರೇ ಈತನ ಮೇಲೆ ಕೇಸ್ ಬುಕ್ ಮಾಡಿ ಎಳ್ಕೊಂಡು ಹೋಗ್ರಿ.

(ಪೊಲೀಸರು ಮೋಹನಪ್ಪನನ್ನು ಕರೆದುಕೊಂಡು ಹೋಗುವ ದೃಶ್ಯ)

ಸಿ.ಎಂ. : ಮಕ್ಕಳೇ ನೀವೇಳಿದಂತೆ ಊರಿನ ಸಾರಾಯಿ ಅಂಗಡಿಯು ಹೋಯ್ತು... ನಿಮ್ಮ ಮೇಲೆ ಹಲ್ಲೆ ಮಾಡಿದವನಿಗೆ ಶಿಕ್ಷೆಯಾಯ್ತು. ತಗೊಳ್ಳಿ ಜ್ಯೂಸ್ ಕುಡಿದು ನಿಮ್ಮ ಉಪವಾಸ ಬಿಡಿ.

ಧರಣೇಶ್ : ನಮ್ಮೂರಲ್ಲೇ ಅಲ್ಲ... ಇಡೀ ರಾಜ್ಯದ ಸಮಸ್ಯೆಗಳು ತೊಲಗಬೇಕು. ನಮ್ಮೂರ ಸಮಸ್ಯೆ ಬಗೆಹರಿಸಿದಂತೆ ನಾಡಿನ ಸಮಸ್ಯೆ ಬಗೆಹರಿಸಿ. ನಾಡು ಸುಭಿಕ್ಷವಾಗಿರುವಂತೆ ಮಾಡಿ.

Scanned with OKEN Scanner

ಸಿ.ಎಂ. : ಒಪ್ಪಿದೆ ಮಕ್ಕಳೇ... ನೀವು ಹೇಳಿರುವುದನ್ನು ನಾನು ಗಮನದಲ್ಲಿಟ್ಟು ಕೊಂಡಿದ್ದೇನೆ. ಕೆಲವು ಸಮಸ್ಯೆ ಬಗೆಹರಿಸಲು ಕಾನೂನು ಚೌಕಟ್ಟು ತೊಡಕುಗಳಿದ್ದು, ಅದನ್ನ ನಿಭಾಯಿಸಿಕೊಂಡು ಸಮಸ್ಯೆ ಬಗೆಹರಿಸ ಬೇಕಾಗುತ್ತೆ.

(ಸಿ.ಎಂ. ಮಾತಾಡುವಾಗ ಮೇಷ್ಟ್ರು ಎಂಟ್ರಿ ಕೊಡುವರು)

ಹುಡುಗರು : ಮೇಷ್ಟ್ರೇ... ಮೇಷ್ಟ್ರೇ...

ಸಿ.ಎಂ. : ನೀವೇನಾ ಈ ಊರಿನ ಮೇಷ್ಟು. ಮೆಚ್ಚಿದೆ ಮೇಷ್ಟ್ರೇ. ನಿಮ್ಮ ತತ್ವ, ಸಿದ್ಧಾಂತ, ವ್ಯಕ್ತಿತ್ವಕ್ಕೆ. ಪ್ರತಿ ಊರಲ್ಲಿ ನಿಮ್ಮಂತಹ ಹೋರಾಟದ ಸಾಮಾಜಿಕ ತತ್ವದ ಮೇಷ್ಟ್ರುಗಳಿದ್ದರೆ ನಮ್ಮ ನಾಡು ಶಾಂತಿಯ ರಾಮರಾಜ್ಯವಾಗುತ್ತದೆ. ಗಾಂಧಿ ಕಂಡ ಕನಸು ನನಸಾಗುತ್ತದೆ. ನೀವೇ ಹೇಳಿ ಮೇಷ್ಟ್ರೇ ಈ ಮಕ್ಕಳಿಗೆ ಉಪವಾಸ ಕೈಬಿಡಲು, ನಿಮ್ಮ ಮಾತಿಗೆ ಗೌರವ ಕೊಡ್ತಾರೆ. ಸಧ್ಯಕ್ಕೆ ಉಪವಾಸ ಕೈಬಿಡಲಿ. ಖಂಡಿತ ಮುಂದೆ ಇವರ ಆಸೆ ನೆರವೇರಿಸ್ತೀನಿ.

ಮೇಷ್ಟ್ರು : ತಗೊಳ್ಳಿ ಮಕ್ಕೆ ಜ್ಯೂಸ್ ಕುಡಿಯಿರಿ. ಈ ನಾಡಿನ ಒಬ್ಬ ಜವಾಬ್ದಾರಿಯುತ ಮುಖ್ಯಮಂತ್ರಿಗಳು ಹೇಳ್ತಿದ್ದಾರೆ. ಅವರ ಮಾತಿಗೆ ನಾವು ಮನ್ನಣೆ ಕೊಡಬೇಕು. ಈಗ ಸಿಕ್ಕಿರುವ ಈ ಜಯವನ್ನು ತಳಪಾಯವಾಗಿಸಿಕೊಂಡು ಮುಂದೆ ದೊಡ್ಡ ಮಟ್ಟದಲ್ಲಿ ಹೋರಾಟ ಮಾಡೋಣ. ತಗೊಳ್ಳಿ ಜ್ಯೂಸ್.

Scanned with OKEN Scanner

(ಮೇಷ್ಟ್ರು ಮತ್ತು ಸಿ.ಎಂ. ಇಬ್ಬರು ಜ್ಯೂಸ್ ಕುಡಿಸ್ತಾರೆ. ಮಕ್ಕಳೆಲ್ಲಾ ಕುಡೀತಾರೆ)

(ತಂದೆ ತಾಯಿಗಳಿಗೆ ಫೋಕಸ್, ಊರಿಗೆಲ್ಲಾ ಫೋಕಸ್)

ಆಗ...

ಊರ ಜನ : ಮುಖ್ಯಮಂತ್ರಿಗಳಿಗೆ ಜೈ

ಸಿ.ಎಂ. : ಗಾಂಧೀಜಿಯವರ ತತ್ವ, ಸಿದ್ಧಾಂತಕ್ಕೆ ನೀವು ಸಾಕಷ್ಟು ಬೆಲೆ ಕಟ್ತಾ ಇದ್ದೀರಿ. ಅವರನ್ನೇ ಅನುಸರಿಸಿಕೊಂಡು ಶಾಂತಿ ಅಹಿಂಸಾ ಮಾರ್ಗದಲ್ಲಿ ಹೋರಾಟದ ಮನೋಭಾವದಲ್ಲಿ ಮುನ್ನುಗ್ಗುತಿದ್ದಾರೆ. ಚಿಕ್ಕ ವಯಸ್ಸಿನ ನಿಮ್ಮ ಈ ಮನೋಸ್ಥೈರ್ಯಕ್ಕೆ ಮೆಚ್ಚಿದ್ದೇನೆ. ನೀವು ಇವತ್ತಿನಿಂದ ಬರೀ ಧರಣೀಶ, ವೇದಾಂತ, ಹರಿ ಅಲ್ಲ, ಧರಣೀಶ್ ಗಾಂಧಿ, ಹರಿ ಗಾಂಧಿ, ವೇದಾಂತ ಗಾಂಧಿ. ಬರ್ಲಾ ಮಕ್ಕಳೇ... (ಎದು ನಾಮಕರಣ ಮಾಡುತ್ತಿದ್ದಂತೆ) ಒಳ್ಳೆಯದಾಗಲಿ ಮಕ್ಕಳೇ...

(ಅಂತ ಹೇಳಿ ಕೈ ಮುಗಿದು ಹೊರಡುತ್ತಾ ಊರವರಿಗೆ ಕೈ ಮುಗಿಯುವರು.)

ಮೇಷ್ಟ್ರು : ನಾನು ಸಾರಾಯಿ ಅಂಗಡಿಯನ್ನು ಎತ್ತಂಗಡಿ ಮಾಡಿಸಬೇಕು ಅಂತ ಸಂಬಂಧಿಸಿದವರಿಗೆ ಲಿಖಿತವಾಗಿ ದೂರು ಕೊಡಲು ಹೊರಟಿದ್ದೆ. ಆದರೆ ನಾನು ಎಲ್ಲಾ ಮುಗಿಸಿ ಬರೋದ್ರೊಳ್ಗೆ

ನೀವು ಸಾರಾಯಿ ಅಂಗಡಿ ಸುಟ್ಟು, ಯಾತನೆ ಅನುಭವಿಸಿ, ಉಪವಾಸ ಮಾಡಿ ನಾಡಿನ ಸಿ.ಎಂ. ಬರುವಂತೆ ಮಾಡಿ, ಇಡೀ ನಾಡಿನಲ್ಲೇ ಒಂದು ಜಾಗೃತಿ ಮಾಡಿಸಿದ್ದೀರಾ. ನಿಜಕ್ಕೂ ನಾನು ನಿಮಗೆ ಪಾಠ ಮಾಡಿದ್ದಕ್ಕೂ ಸಾರ್ಥಕ. ನಿಮ್ಮ ಹೆತ್ತ ತಂದೆ ತಾಯಿಗಳ ಕೀರ್ತಿ ಬೆಳಗಿಸಿದ್ದೀರಿ. ನಗುವಿನಹಳ್ಳಿಯಲ್ಲಿ ನಗು ತರಿಸಿದ್ದೀರಿ. ನಾಡಿನಲ್ಲಿ ಒಂದು ಹೋರಾಟದ ಜಾಗೃತಿ ಮೂಡಿಸಿದ್ದೀರಿ. ಊರಿಗೆ ಊರೇ ಹೊಗಳುವಂತಹ ಕೆಲಸ ಮಾಡಿದ್ದೀರಿ. ಬನ್ನಿ ಮಕ್ಕಳೇ ಬನ್ನಿ...

(ಎಂದು ಕರೆದುಕೊಂಡು ಹೋಗುವರು.)

(ಮಕ್ಕಳು ಊರ ಜನ ಎಲ್ಲರೂ ಹೋಗುವ ದೃಶ್ಯ)

:: ಮುಕ್ತಾಯ ::